ಪ್ರಕಟನೆಯ
೫೧ನೆಯ ವರ್ಷ

ಸಂಕ್ರಮಣ

ನವಂಬರ-ಡಿಸೆಂಬರ
೨೦೧೬

ಸಂಪಾದಕ: ಚಂದ್ರಶೇಖರ ಪಾಟೀಲ

೪೩೦

ಸಂಕ್ರಮಣ ಸಾಹಿತ್ಯ ಸ್ಪರ್ಧೆ - ೨೦೧೬

ಬಹುಮಾನಿತ ಬರಹಗಳು

ೀಜ : ಸಣ್ಣಕತೆ

ೂರು ಮುಂದ್ಲಿ : ಸಣ್ಣಕತೆ

ತ್ವ ಪರೀಕ್ಷೆ : ಸಣ್ಣಕತೆ

ಹತ್ತು ಕವನಗಳು :

'ಇಲ್ಲ' ಎನ್ನುವುದು ಹೇಗೆ? : ಲಲಿತ ಪ್ರಬಂಧ

ಜೀವಿ ಅಂದರೆ ಬುದ್ಧಿಜೀವಿಯೇ : ಲಲಿತ ಪ್ರಬಂಧ

ಗಾದೆಯ ಮೇಲೆ ಕುಳಿತುಕೊಂಡು : ಲಲಿತ ಪ್ರಬಂಧ

ಹದಿನೈದು ಹನಿಗವನಗಳು

ಚಂಪಾಕಾಲಂ

ರಾಯಚೂರು ಸಮ್ಮೇಳನ : ಹಸಿ ಹಸಿ ನೆನಪು

ಸಂಕ್ರಮಣ ಪ್ರಕಾಶನ, ಬೆಂಗಳೂರು

ಸಂಕ್ರಮಣ

ಸಾಹಿತ್ಯ ಸಂಕಲನ

ಸಂಪುಟ : ೫೧ ಸಂಚಿಕೆ : ೦೬

ನವೆಂಬರ್-ಡಿಸೆಂಬರ ೨೦೧೬

ಸಂಪಾದಕ
ಚಂದ್ರಶೇಖರ ಪಾಟೀಲ (ಚಂಪಾ)

ವ್ಯವಸ್ಥಾಪಕ
ಸುನಿಲ ಪಾಟೀಲ

ವಾರ್ಷಿಕ ಚಂದಾ : ರೂ. ೨೦೦

ಐದು ವರ್ಷಕ್ಕೆ : ರೂ. ೯೦೦

ಆಜೀವ ಚಂದಾ : ರೂ. ೩,೦೦೦

ಮಹಾ ಪೋಷಕತ್ವ : ರೂ. ೫,೦೦೦

ಸಂಕ್ರಮಣ ಪ್ರಕಾಶನ
ಎರಡನೆ ಮೇನ್, ಜ್ಯೋತಿ ಲೇಔಟ್
ಜರಗನಹಳ್ಳಿ, ವಾರ್ಡ್-೧೮೬, ಜೆ.ಪಿ.
ನಗರ ಅಂಚೆ, ಬೆಂಗಳೂರು ೫೬೦ ೦೭೮
ಫೋನು: ೦೮೦-೨೬೩೨ ೩೩ ೪೪
ಮೊಬೈಲ್: ೯೪೪೯೦-೬೯೩೪೪

: ಸೂಚನೆ :

- ಹಿಂದಿನ ಸಂಚಿಕೆಗಳಲ್ಲಿ ಕೊಟ್ಟ ಬ್ಯಾಂಕ್ ಅಕೌಂಟಿಗೆ ದಯವಿಟ್ಟ ಚಂದಾ ಜಮಾ ಮಾಡಬೇಡಿರಿ.
- ಮುಂದಿನ ಜನವರಿ – ೨೦೧೭ ರ ಸಂಚಿಕೆಯಲ್ಲಿ ಹೊಸ ಸೂಚನೆ ನೀಡುತ್ತೇವೆ.

– ಸಂಪಾದಕರು

ಲಿಪಿ ಜೋಡಣೆ ಹಾಗೂ ಮುದ್ರಣ
ನೇತ್ರಾ ಪ್ರಿಂಟರ್ಸ್
ಬೆಂಗಳೂರು–೫೬೦ ೦೧೮

ಈ ಸಂಚಿಕೆಯಲ್ಲಿ

ರಾಯಚೂರು ಸಮ್ಮೇಳನ : ಹಸಿ ಹಸಿ ನೆನಪು
ಚಂದ್ರಶೇಖರ ಪಾಟೀಲ ೦೧

ಬೀಜ : ಸಣ್ಣಕತೆ
ಈರಯ್ಯ ಕಿಲ್ಲೇದಾರ (ಈನಿಂಕಿ) ೧೮

ಊರು ಮುಂದ್ಲಿ : ಸಣ್ಣ ಕತೆ
ಟಿ. ಗೋವಿಂದರಾಜು ೨೮

ಸತ್ವ ಪರೀಕ್ಷೆ : ಸಣ್ಣ ಕತೆ
ಹ. ಶಿ. ಭೈರನಟ್ಟಿ ೪೦

'ಇಲ್ಲ' ಎನ್ನುವುದು ಹೇಗೆ? : ಲಲಿತ ಪ್ರಬಂಧ
ಜಿ. ಪಿ. ಕುಸುಮಾ ೫೯

ಜೀವಿ ಅಂದರೆ ಬುದ್ಧಿ ಜೀವಿಯೇ :
ಲಲಿತ ಪ್ರಬಂಧ
ಬ್ಯಾಡನೂರು ನಾಗಭೂಷಣ ೬೩

ಗಾದೆಯ ಮೇಲೆ ಕುಳಿತುಕೊಂಡು :
ಲಲಿತ ಪ್ರಬಂಧ
ಬಿ. ಎನ್. ಸೊಲ್ಲಾಪುರೆ ೬೮

ಸಾದರ ಸ್ವೀಕಾರ ೭೮

ಕಾವ್ಯ

ಹತ್ತು ಕವನಗಳು ೪೬

ಹದಿನೈದು ಹನಿಗವನಗಳು ೭೩

ಚಂಪಾಕಾಲಂ

ರಾಯಚೂರು ಸಮ್ಮೇಳನ : ಹಸಿ ಹಸಿ ನೆನಪು

• ಚಂದ್ರಶೇಖರ ಪಾಟೀಲ

ದೂರದ ರಾಷ್ಟ್ರ-ರಾಜಧಾನಿ ನವದೆಹಲಿಯಲ್ಲಿ ಅಖಿಲ ಭಾರತ ೮೨ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬರಗೂರು ರಾಮಚಂದ್ರಪ್ಪ ಅಧ್ಯಕ್ಷರಾಗಿ ಆಯ್ಕೆಯಾದ ಸುದ್ದಿ ಅಧಿಕೃತವಾಗಿ ಪ್ರಕಟವಾದಾಗ ಅಲ್ಲಲ್ಲಿ ಕೆಲವು ಹುಬ್ಬುಗಳು ಮೇಲೇರಿದರೂ ಅದೊಂದು 'ನಿರೀಕ್ಷಿತ ಆಯ್ಕೆ' ಎಂಬ ವಾತಾವರಣ ಸಾಹಿತ್ಯ ವಲಯದಲ್ಲಿ ಮೂಡಿಬಿಟ್ಟಿತ್ತು. ಕಸಾಪ ಅಧ್ಯಕ್ಷನಾಗಿ ಇಂಥ ಮೂರು ಸಮ್ಮೇಳನಗಳ ಆಯೋಜನೆಯ ಒಳ-ಹೊರಗುಗಳ ಅನುಭವವಿರುವ ನನಗಂತೂ ಆಶ್ಚರ್ಯವೂ ಆಗಲಿಲ್ಲ; ಆಘಾತವೂ ಆಗಲಿಲ್ಲ. ತಕ್ಷಣವೇ 'ನಿಮಗೆ ಹಾರ್ದಿಕ ಅಭಿನಂದನೆ' ಎಂಬ ಎಸ್‌ಎಂಎಸ್ ಗೆಳೆಯ ಬರಗೂರಿಗೆ ರವಾನಿಸಿದೆ.

ಅದಾದ ಮರುದಿನ, ಅಥವಾ ಅದರ ಮರುದಿನ, ಕಸಾಪ ಅಧ್ಯಕ್ಷ ಮನು ಬಳಿಗಾರ ಅವರು, 'ಸರ್, ರಾಯಚೂರು ಸಮ್ಮೇಳನದಲ್ಲಿ ಕೊನೆಯ ದಿನದ ಸಮಾರೋಪ ಭಾಷಣ ನಿಮ್ಮದೇ' ಅಂತ ಫೋನು ಮಾಡಿದಾಗ, 'ಆಗಲಿ' ಅಂತ ಒಪ್ಪಿಗೆ ಸೂಚಿಸಿದೆ.

*

ಕಳೆದ ಮೂರು ದಶಕಗಳ ಬಂಡಾಯ ಸಾಹಿತ್ಯ ಚಳುವಳಿ ಸಂದರ್ಭದಲ್ಲಿ ನಡೆದು ಬಂದ ಒಂದು ನಮೂನೆಯ 'ಸಂಪ್ರದಾಯ' ಇದು. ನಮ್ಮ ಸಮಾವೇಶ-ಸಮ್ಮೇಳನಗಳಲ್ಲಿ ಬರಗೂರು-ಉದ್ಘಾಟನೆ; ಚಂಪಾ-ಸಮಾರೋಪ. ('ಸರ್ವಾಧ್ಯಕ್ಷ' - ಎಂಬ ಸ್ಥಾನಮಾನ ನಮ್ಮಲ್ಲಿ ಇಲ್ಲವೇ ಇಲ್ಲ) ಕಾರಣ ಇಷ್ಟೆ : ಕಳೆದ ಶತಮಾನದ ಎಪ್ಪತ್ತರ ದಶಕದ ಸಾಹಿತ್ಯಿಕ - ರಾಜಕೀಯ - ಸಾಂಸ್ಕೃತಿಕ ವಿದ್ಯಮಾನಗಳ ತಾರ್ಕಿಕ ಅಂತ್ಯವೆಂಬಂತೆ ಮಾರ್ಕ್ಸ್-ಲೋಹಿಯಾ-ಅಂಬೇಡ್ಕರ್ ವಿಚಾರಧಾರೆಗಳ ಕೂಡು-ಪ್ರವಾಹವಾಗಿ ೧೯೭೯ರ ಮಾರ್ಚ ೨೪ರಂದು ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನ ಜರುಗಿದ್ದು ಒಂದು ಚಾರಿತ್ರಿಕ ಘಟನೆ. ಚಳುವಳಿಗೆ ಒಂದು ಸಾಂಘಿಕ ಸ್ವರೂಪ ಒದಗಿದ ಆ ದಿನಗಳಲ್ಲಿ ಪ್ರಚಾರ-ಪ್ರಸಾರದ ಸೆಲೆಯಲ್ಲಿ ದಕ್ಷಿಣದಲ್ಲಿ ಬರಗೂರು - ಉತ್ತರದಲ್ಲಿ ಚಂಪಾ ಎಂಬ ಸಮೀಕರಣ ಚಾಲ್ತಿಯಲ್ಲಿತ್ತು. ನೂರಾರು

ಕಾರ್ಯಾಗಾರ - ವಿಚಾರ ಸಂಕಿರಣ - ಸಮಾವೇಶ - ಸಮ್ಮೇಳನಗಳ ರೋಮಾಂಚಕ ಅವಧಿ ಅದು. ಸಂಘಟನೆಯ ರೂವಾರಿಗಳಲ್ಲಿ ಒಬ್ಬರು ಬರಗೂರು. ಅರವತ್ತರ ದಶಕದ ನವ್ಯ ಸಾಹಿತ್ಯದ ಮಟಮಟ ಮದ್ಯಾಣದಲ್ಲಿ ಬರಹಗಾರರಾಗಿ ರೂಪುಗೊಂಡ ಲೋಹಿಯಾ ವಿಚಾರಧಾರೆಯ ಕಾಳೇಗೌಡ ನಾಗವಾರ ಮತ್ತು ನಾನು - 'ನವ್ಯ'ದ ಹಿನ್ನೆಲೆಯಿಂದ 'ಬಂಡಾಯ'ಕ್ಕೆ ವಲಸೆ ಬಂದು ಇಲ್ಲಿಯೇ 'ವಸ್ತಿ' ಹೂಡಿದ ಸಣ್ಣ ಪ್ರಮಾಣದ ಪುರಾತನರು.

*

ಇದೆಲ್ಲಾ ಪ್ರವರ ಯಾಕೆ ಅಂದರೆ : ಮಾರ್ಚ ೨೩, ೧೯೭೯ರ ನಮ್ಮ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನವನ್ನು - ಅದೇ ಅವಧಿಯಲ್ಲಿ ಕರಾವಳಿಯ ಧರ್ಮಸ್ಥಳದಲ್ಲಿ, ನವ್ಯರ ಒಂದು ಗುಂಪಿನ ಪ್ರಮುಖ ಕವಿ ಗೋಪಾಲ ಕೃಷ್ಣ ಅಡಿಗರ ಸರ್ವಾಧ್ಯಕ್ಷತೆಯಲ್ಲಿ ನಡೆಯುತ್ತಿದ್ದ ಕಸಾಪದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ - ಪರ್ಯಾಯವಾಗಿ, ಸಮಾನಾಂತರವಾಗಿ ಒಂದು ಸವಾಲೆಂಬಂತೆ ಹಮ್ಮಿಕೊಂಡವರು ನಾವು. ಒಂದು ಬಗೆಯ ಸೈದ್ಧಾಂತಿಕ ಧ್ರುವೀಕರಣ ಅದು. ಪರಿಷತ್ತಿನೊಂದಿಗೆ ನಮ್ಮ ಜಗಳ ಇದು: ಕನ್ನಡ ಜನತೆ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ - ಸಂರಕ್ಷಣೆಗಾಗಿ ಕಟ್ಟಿಕೊಂಡ ಪ್ರಜಾಸತ್ತಾತ್ಮಕ ನೆಲೆಯ ಕ.ಸಾ.ಪರಿಷತ್ತು ಬರಬರುತ್ತ ಪುರೋಹಿತಶಾಹಿ ಪಟ್ಟಭದ್ರ ಹಿತಾಸಕ್ತಿಗಳ ಅಗ್ರಹಾರವಾಗಿ ರೂಪುಗೊಂಡದ್ದಲ್ಲದೆ, ಕನ್ನಡ ಸಾಹಿತ್ಯದ ಸಹಜ ಸಮಕಾಲೀನ ಬೆಳವಣಿಗೆಗಳಾದ ದಲಿತ-ಬಂಡಾಯಗಳಿಗೆ ಸಮ್ಮೇಳನದ ವೇದಿಕೆಯಲ್ಲಿ ಆವಕಾಶ ನಿರಾಕರಿಸುವ ಮಟ್ಟಕ್ಕೆ ಹೋಗಿತ್ತು. ಪರಿಷತ್ತಿಗೆ ಬಹಿರಂಗ ಬಹಿಷ್ಕಾರ ಹಾಕುವುದರ ಮೂಲಕ ನಮ್ಮ ಆಂದೋಲನಕ್ಕೊಂದು ರೂಪು ಕೊಡಬೇಕಾಗಿತ್ತು.

ಈಗ ಕೆಲವು ವಲಯಗಳಲ್ಲಿ ಕೇಳಲಾಗುತ್ತಿರುವ - (ಡೆಮಾಕ್ರಸಿಯಲ್ಲಿ ಕೇಳಲೇಬೇಕಾದ) - ಪ್ರಶ್ನೆ : "ಪರಿಷತ್ತನ್ನು ಧಿಕ್ಕರಿಸಿದ ನೀವು ಈಗ ಅದೇ ಪರಿಷತ್ತಿನ ವೇದಿಕೆಯಲ್ಲಿ ಮೆರೆಯುತ್ತೀರಲ್ಲ; ಏನು ನಿಮ್ಮ ಕತೆ?"

ಪರಿಷತ್ತು ಮೂಲತಃ ಕನ್ನಡ ಜನತೆಯ ಸಂಘಟನೆ. ಆಯಾ ಕಾಲದ ಪ್ರಭುತ್ವಗಳು, ಸಾಹಿತಿಗಳು, ಸಾಮಾಜಿಕ ಕ್ರಿಯಾಶೀಲರು ಪೋಷಿಸಿಕೊಂಡು ಬಂದಿದ್ದಾರೆ. ಇದು ಸರಿಯಾದ ದಾರಿಯಲ್ಲಿ ಸಾಗದೆ, ಜನ-ವಿರೋಧಿಯಾಗಿ ವರ್ತಿಸಿದಾಗ ಅದನ್ನು ಜನಶಕ್ತಿಯೇ ದಾರಿಗೆ ತರಬೇಕಾಗುತ್ತದೆ.

ಸಮಾಧಾನದ ಸಂಗತಿ ಎಂದರೆ ೧೯೭೯ರ ನಂತರ ಪರಿಷತ್ತಿನ ಚೆಹರೆಯೇ ಬದಲಾಗತೊಡಗಿತು. ಅದರ ಚಟುವಟಿಕೆಗಳಲ್ಲಿ ಸಮಕಾಲೀನ ವಿದ್ಯಮಾನಗಳು

ಇಂಬು ಪಡೆದವು. ಈ ಪರಿಯಲ್ಲಿ ತನ್ನ ಮೂಲ ಪ್ರಜಾಸತ್ತಾತ್ಮಕ ರೂಪವನ್ನು ಪಡೆಯುತ್ತ, ಡಾ. ಜಿ. ಎಸ್. ಸಿದ್ಧಲಿಂಗಯ್ಯನವರು ಕಸಾಪ ಅಧ್ಯಕ್ಷರಾಗಿದ್ದಾಗ 'ಬಂಡಾಯ ಸಾಹಿತ್ಯದ ದಶಮಾನೋತ್ಸವ'ವನ್ನೂ ಆಚರಿಸಲು ಪರಿಷತ್ತೇ ಮುಂದೆ ಬಂದಿತು. ಇದೂ ಒಂದು ಚಾರಿತ್ರಿಕ ಹಂತವೇ.

ಯಾವುದೇ ತೆರನಾದ ಸೈದ್ಧಾಂತಿಕ ಬೇಲಿಯನ್ನು ಹಾಕಿಕೊಂಡಿರದ ಸ್ಪಂದನಶೀಲ ಬಂಡಾಯ ಸಾಹಿತಿಗಳು ಕಸಾಪದ ಪ್ರಜಾಸತ್ತಾತ್ಮಕ ಚುನಾವಣೆಯಲ್ಲಿ ಪಾಲುಗೊಂಡು ಪದಾಧಿಕಾರಿಗಳಾಗಿ ಆಯ್ಕೆಗೊಂಡಿದ್ದಾರೆ. ಕಸಾಪ ಅಧ್ಯಕ್ಷರೂ ಆಗಿದ್ದಾರೆ. ಸಾಹಿತ್ಯ ಸಮ್ಮೇಳನಗಳ ಸರ್ವಾಧ್ಯಕ್ಷರೂ ಆಗಿದ್ದಾರೆ. ಇಂಡಿಯಾದ ಬಹುಮುಖೀ ಸಂಸ್ಕೃತಿಯ ವಿವಿಧ ಸಮುದಾಯಗಳ ಧ್ವನಿಗಳಂತಿರುವ ದಲಿತ-ಬಂಡಾಯ ಸಾಹಿತಿಗಳು, ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು 'ಒಳಗಿನಿಂದಲೇ' ಸರಿಪಡಿಸುವ ವಿಧಾಯಕ ಕಾರ್ಯವಿಧಾನದವರು. ಇದು ಏಕದಂ ಸಂಭವಿಸಬಹುದಾದ ಪವಾಡ ಎಂಬ ಭ್ರಮೆ ಅವರಿಗಿಲ್ಲ.

*

ರಾಯಚೂರು ಸಮ್ಮೇಳನದ ವಿಚಾರ ಗೋಷ್ಠಿಗಳ ಪರಿ ನೋಡಿರಿ : ದಲಿತ ಬಂಡಾಯ ಸಾಹಿತ್ಯ ಮತ್ತು ಚಳುವಳಿಗಳು; ಸಾಹಿತ್ಯ-ಸಂಸ್ಕೃತಿ ಮತ್ತು ಸಾಮರಸ್ಯ; ರಾಜ್ಯದ ನೀರು-ನೀರಾವರಿ ಸಮಸ್ಯೆಗಳು; ಸಂಸ್ಕೃತಿ ಮತ್ತು ರಾಜಕಾರಣ; ಕೃಷಿ ಸಂಸ್ಕೃತಿ; ಪ್ರಜಾಪ್ರಭುತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ; ಪ್ರಾದೇಶಿಕ ಅಸಮಾನತೆ; ಅಭಿವೃದ್ಧಿಯ ಸವಾಲುಗಳು; ಸಮೂಹ ಮಾಧ್ಯಮ ಮತ್ತು ಸಾಮಾಜಿಕ ಹೊಣೆಗಾರಿಕೆ; ಮಹಿಳೆ-ಆಧುನಿಕತೆಗೆ ಮುಖಾಮುಖಿ; ಸಮಾನ ಶಿಕ್ಷಣ ನೀತಿಯ ಸಾಧ್ಯತೆಗಳು; ಕನ್ನಡ ಸಾಹಿತ್ಯ-ಬಹುಮುಖಿ ನೆಲೆಗಳು; ಪ್ರಜಾಪ್ರಭುತ್ವದಲ್ಲಿನ ವಿಮರ್ಶೆಯ ಸಾಧ್ಯತೆಗಳು; ಕನ್ನಡ ಸಂಸ್ಕೃತಿ – ವೈವಿಧ್ಯತೆ ವೈಶಿಷ್ಟ್ಯತೆ.. ಇತ್ಯಾದಿ.

ಬಹುಶಃ ಕಳೆದ ಮೂರೂವರೆ ದಶಕಗಳ ನಮ್ಮ ಬಂಡಾಯ ಸಮ್ಮೇಳನಗಳ ಸಿಲಬಸ್ (ಪಠ್ಯಕ್ರಮ)ವನ್ನೇ ಮುಂದಿಟ್ಟುಕೊಂಡು ರೂಪಿಸಿರಬಹುದಾದ ವಿಷಯಗಳ ಪಟ್ಟಿ ಇದು. 'ಸಾಹಿತ್ಯ' ಎಂಬ ಪರಿಕಲ್ಪನೆಯೇ ಬದುಕಿನ ಅನೇಕ ಆಯಾಮಗಳನ್ನು ಒಳಗೊಂಡಿರುವುದು ಒಂದು ಜಾಗತಿಕ ವಿದ್ಯಮಾನ. ಸಮ್ಮೇಳನದಲ್ಲಿ ಪಾಲುಗೊಂಡವರ ಸಮಗ್ರ ಪಟ್ಟಿ ನೋಡಿದಾಗಲೇ ಗೊತ್ತಾಯಿತು: ರಾಯಚೂರು ಸಮ್ಮೇಳನ 'ಕಸಾಪ ವೇದಿಕೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ ಕನ್ನಡ ಬಂಡಾಯ ಸಾಹಿತ್ಯ ಸಮ್ಮೇಳನ' – ಅಂತ. ೮-೧೦ ಹೆಸರು ಬಿಟ್ಟರೆ ಎಲ್ಲವೂ

'ಹಳೆಯ ಪಳಕೆಯ ಮುಖಗಳೇ' ನನ್ನ ಪಾಲಿಗೆ. ಒಂದು ಬಗೆಯ ಸಮಾಧಾನ ನನಗೆ. ೯೦ರ ದಶಕದ ನಂತರ 'ಬಂಡಾಯ ಸಂಘಟನೆ'ಯ ಅಡ್ರೆಸ್ಸೇ ಇಲ್ಲದಂತಾಗಿದೆ. ಸೈದ್ಧಾಂತಿಕ ಭಿನ್ನಮತ ಇಲ್ಲದೆಯೇ ಎಲ್ಲರೂ ಎಲ್ಲೆಲ್ಲೋ ಹಂಚಿ ಹೋಗಿದ್ದಾರೆ. ಪರಸ್ಪರ ಸಂಪರ್ಕ ಇದ್ದೇ ಇದೆ. ಆದರೆ ಎಲ್ಲರನ್ನೂ ಒಂದೇ ಕಡೆ ನೋಡುವ ಅವಕಾಶ ಇರಲಿಲ್ಲ.

ಬಂಡಾಯ ಚಳುವಳಿಯ ಉತ್ಪನ್ನವೇ ಆಗಿರುವ ಬರಗೂರು ಅಧ್ಯಕ್ಷ ಭಾಷಣ ಕೂಡ ಟಿಪಿಕಲ್ ಬಂಡಾಯ ಭಾಷಣವೇ. ನಾನು ನೋಡಿದ / ಓದಿದ ಬಹುತೇಕ ಅಧ್ಯಕ್ಷೀಯ ಭಾಷಣಗಳ ವಿನ್ಯಾಸವೆಂದರೆ; ಪಂಪನಿಂದಾದಿಯಾಗಿ ನಮ್ಮ ಸಾಹಿತ್ಯ ಬೆಳೆದ ಪರಂಪರೆಯ ಸ್ಮರಣೆ; ಸಮ್ಮೇಳನದ ಸ್ಥಳೀಯ ಪರಿಸರದ (ಉದಾ: ರಾಯಚೂರು-ಹೈದ್ರಾಬಾದ್ ಕರ್ನಾಟಕ) ಸಾಹಿತ್ಯಿಕ ವಿವರಗಳ ಮಾಹಿತಿ, ಬರಹಗಾರರ ಪಟ್ಟಿ; ಆತ್ಮಕಥನದ ಮೆಲುಕುಗಳು; ಸದ್ಯದ ಕೆಲವು ಸಮಸ್ಯೆಗಳ ಪ್ರಸ್ತಾಪ; ಸರಕಾರಕ್ಕೆ ಹಕ್ಕೊತ್ತಾಯ; ಆಭಾರ ಮನ್ನಣೆ; ಜಯ ಹಿಂದ್ - ಜಯ ಕರ್ನಾಟಕ ಇತ್ಯಾದಿ. ಬರಗೂರು-ಭಾಷಣ ಇದಕ್ಕೆಲ್ಲ ಹೊರತು. ನಾವು ಸದ್ಯ ಎದುರಿಸುತ್ತಿರುವ ಅನೇಕ ಸವಾಲುಗಳನ್ನು ಹೇಗೆ ಎದುರಿಸಲೇಬೇಕು - ಎಂಬುದೇ ಅವರ ಬಹುಪಾಲು ಮಾತಿನ ಮರ್ಮ. ಅವರ ವಿಶಿಷ್ಟ ನುಡಿಗಟ್ಟಿನ ಗದ್ಯ ಶೈಲಿಯ ಅಂಕಣಗಳು ನಮಗೆ ಪರಿಚಿತ.

ಬರಗೂರು ಆಯ್ಕೆಯಾದಾಗ ಒಂದು ವಲಯ ಕೇಳಿದ ಪ್ರಶ್ನೆ : 'ಬರಗೂರು ಎಂದರೆ ಥಟ್ಟನೇ ನೆನಪಿಗೆ ಬರುವ ಕೃತಿಗಳ ಶೀರ್ಷಿಕೆ ಯಾವುದಿದೆ?' ಈ ಪ್ರಶ್ನೆ ಬರಗೂರರಿಗೂ ಕೇಳಿದರೂ ಅವರೂ ಥಟ್ಟನೇ ಉತ್ತರ ಕೊಡಲಾರರು. ಕಾವ್ಯ-ನಾಟಕ-ಕತೆ-ಕಾದಂಬರಿ-ವಿಮರ್ಶೆ-ಸಂಶೋಧನೆ-ಪ್ರಬಂಧ : ಹೀಗೆ ವಿಸ್ತಾರವಾದ ಕ್ಷೇತ್ರ, ಸಾಹಿತ್ಯದಾಚೆ ಸಿನಿಮಾ-ರಂಗದಲ್ಲೂ ಗಣನೀಯ ಸಾಧನೆ, ಅನೇಕ ಪ್ರಶಸ್ತಿಗಳಿಗೆ ಭಾಜನರು. ತಮ್ಮ ನಿಲುವುಗಳಿಂದಾಗಿ ಸದ್ಯ ಕರ್ನಾಟಕದ ಪ್ರಭುತ್ವಕ್ಕೆ ಹತ್ತಿರವರು. ಸರಕಾರದ ಅನೇಕ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದವರು. ಸಾಹಿತ್ಯಿಕ ನೆಲೆಯಲ್ಲಿ, ನನ್ನ ದೃಷ್ಟಿಯಲ್ಲಿ, ಬರಗೂರು ಜಾಕ್ ಆಫ್ ಆಲ್ ಟ್ರೇಡ್ಸ್ - ಎನ್ನುವಂತಿದ್ದರೂ ಮುಖ್ಯವಾಗಿ ಸಂಸ್ಕೃತಿ-ಚಿಂತಕರು. 'ಸಂಸ್ಕೃತಿ'ಯಲ್ಲಿ ಎಲ್ಲವೂ ಅಡಗಿದೆ. ಕಳೆದ ಒಂದು ಶತಕದ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪಡೆದ ಬಹುಮುಖೀ ಆಯಾಮಗಳಿಗೆ ಅನುಸಾರವಾಗಿ ಸಮ್ಮೇಳನಾಧ್ಯಕ್ಷರ ಆಯ್ಕೆಯ ಸಂದರ್ಭದಲ್ಲಿ "ಸಾಹಿತ್ಯಿಕ ಸಾಧನೆ" ಏಕಮಾತ್ರ ಮಾನದಂಡವಾಗಿ ಉಳಿದಿಲ್ಲ; ಉಳಿಯಲೂಬಾರದು.

*

ನನ್ನ ಸಮಾರೋಪದಲ್ಲಿ ಬರಗೂರು-ಭಾಷಣದ ಒಂದು ಮುಖ್ಯ ಎಳೆಯನ್ನು ಹಿಡಿದು ಅತ್ತಿತ್ತ ಜಗ್ಗಾಡಿದೆ. 'ಸರ್ಜಿಕಲ್ ದಾಳಿ' - ವ್ಯಾಪಕ ಚರ್ಚೆಯಲ್ಲಿರುವ ಪದಪುಂಜ. ಕೇಂದ್ರದಲ್ಲಿ ಮೋದಿ ನೇತೃತ್ವದ ಬಿಜೆಪಿ ಸರಕಾರ ಬಂದ ನಂತರ ಇಂಥ ನುಡಿಗಟ್ಟುಗಳ ಹಾವಳಿ ವಿಪರೀತವಾಗಿದೆ. ನಮ್ಮ 'ಬದ್ಧ ವೈರಿ' ಎಂದು ಭಾವಿಸಲಾಗಿರುವ ನೆರೆಯ ಪಾಕಿಸ್ತಾನಿ ಸೈನಿಕ ನೆಲೆಗಳ ಮೇಲೆ ಇತ್ತೀಚೆಗೆ ನಮ್ಮ ಸೈನ್ಯ ನಡೆಸಿದ 'ನಿರ್ದಿಷ್ಟ ಉದ್ದೇಶದ ಕ್ಷಿಪ್ರದಾಳಿ'ಯ ನಂತರದ ರಾಜಕೀಯ ಚರ್ಚೆಗಳು ನಮಗೆ ಗೊತ್ತು.

ಬರಗೂರರ ಮಾತು ಇವು : "ದೇಶದ ಹೊರಗಿನ ಸೈನಿಕ ಸರ್ಜಿಕಲ್ ದಾಳಿಯನ್ನು ಮೆಚ್ಚುತ್ತಲೇ ದೇಶದ ಒಳಗಿನ ಸಾಮಾಜಿಕ ಸರ್ಜಿಕಲ್ ದಾಳಿಗಳನ್ನು ನಾವು ವಿರೋಧಿಸಬೇಕು. ಇವು ಯಾವುವು? ಜಾತಿವಾದ, ಕೋಮುವಾದ, ಲಿಂಗತ್ವ ಅಸಮಾನತೆ, ಆರ್ಥಿಕ ಅಸಮಾನತೆ - ಮುಂತಾದ ಸಾಮಾಜಿಕ ಸರ್ಜಿಕಲ್ ದಾಳಿಗಳನ್ನು ವಿರೋಧಿಸಿ, ಜಾತಿ ವಿನಾಶ, ಧಾರ್ಮಿಕ ಸೌಹಾರ್ದ, ಮಹಿಳಾ ನ್ಯಾಯ, ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳನ್ನು ಸ್ಥಾಪಿಸುವುದು ಸರ್ಕಾರ ಹಾಗೂ ಸಮಾಜದ ಜವಾಬ್ದಾರಿಯಾಗಬೇಕು. ...ಮಾನವೀಯ ಸಮಾಜ ನಿರ್ಮಾಣಕ್ಕೆ ಬದ್ಧರಾಗಬೇಕು. ಈ ಬದ್ಧತೆಯನ್ನು ಕನ್ನಡ ಸಾಹಿತ್ಯ ಸಂವೇದನೆಯಲ್ಲಿ ಕಾಣಬೇಕು".

ಜಗತ್ತಿನ ಯಾವುದೇ ಸಮಾಜವಾದಿ ಆಂದೋಲನದ ಮುಖ್ಯ ಆಶಯ ಇದೇ. ಕನ್ನಡದ ಬಂಡಾಯ ಸಾಹಿತ್ಯ ಚಳುವಳಿಯ ನೂರಾರು ಸಂವೇದನಾಶೀಲ ಚೇತನಗಳು ಈ ಕಾಯಕದಲ್ಲಿ ತೊಡಗಿಕೊಂಡಿವೆ. ಜನರಿಗೆ ಸುಲಭವಾಗಿ ಅರ್ಥವಾಗುವ ಮತ್ತು ಚಾಲ್ತಿಯಲ್ಲಿರುವ ನುಡಿಗಟ್ಟುಗಳ ಸುತ್ತ ವಿಚಾರಗಳ ವಿತರಣೆ ಮಾಡುವುದು ಕೂಡ ನಮ್ಮ ಜವಾಬ್ದಾರಿ. ಬರಗೂರು ಭಾಷಣ ಆ ನಿಟ್ಟಿನಲ್ಲಿದೆ.

ನಾನು ಒಂದು ಸಣ್ಣ ತಿದ್ದುಪಡಿ (ಅಮೆಂಡ್‌ಮೆಂಟ್) ಮಾಡಿದೆ. ಭಾರತೀಯ ಸೈನಿಕರ ದಾಳಿ 'ವೈರಿ'ಗಳ ಮೇಲೆ ಮಾಡಿದ್ದು ಮತ್ತು ಅದು 'ಕ್ಷಿಪ್ರ' ದಾಳಿ. ಆದರೆ ನಾವು ಚರ್ಚಿಸುತ್ತಿರುವ ಸಾಮಾಜಿಕ ದಾಳಿ ಭಾರತೀಯರು ಭಾರತೀಯರ ಮೇಲೆಯೇ ಮಾಡುತ್ತಿರುವ ದಾಳಿ; ಇದು ಈ ದೇಶದ ಬಹು ಸಂಖ್ಯಾತರ ಮೇಲೆ ವೈದಿಕಶಾಹಿ ಎಂಬುದು ಐದು ಸಾವಿರ ವರ್ಷಗಳಿಂದ ಮಾಡುತ್ತಿರುವ 'ನಿರಂತರ' ದಾಳಿ. ಇದನ್ನು ವಿರೋಧಿಸುವುದು ಕೂಡ 'ನಿರಂತರ' ಪ್ರತಿಕ್ರಿಯೆಯೇ ಆಗಬೇಕು. ನಮ್ಮ ಸಂವಿಧಾನದ ಮೇಲೆ ಮನಸ್ಮೃತಿಯ ದಾಳಿ ಇದು - ಎಂದು

ಸಂಕ್ಷಿಪ್ತವಾಗಿ ನಾನು ಹೇಳುತ್ತ, ಜಾಗತಿಕ ನೆಲೆಯಲ್ಲಿ ದೊಡ್ಡಣ್ಣ ಅಮೇರಿಕಾದಲ್ಲಿ ಜನಾಂಗವಾದಿ ಟ್ರಂಪ್ ಅಧ್ಯಕ್ಷನದು : ಏಕರೂಪಿ ಆರ್ಥಿಕ ನೀತಿಯನ್ನು ಇಡೀ ಜಗತ್ತಿನ ಮೇಲೆ ಹೇರುವ ಹುನ್ನಾರ; ನಮ್ಮಲ್ಲಿ ಕೋಮುವಾದಿ ಮೋದಿ ಸರಕಾರದ್ದು ಇಡೀ ದೇಶದ ಮೇಲೆ ಏಕರೂಪಿ ಸಾಂಸ್ಕೃತಿಕ ನೀತಿ ಹೇರುವ ಹುನ್ನಾರ. ಬಹು ದೊಡ್ಡ ವ್ಯಂಗ್ಯವೆಂದರೆ : ಇಬ್ಬರೂ 'ಪ್ರಜಾಸತ್ತಾತ್ಮಕ' ರೀತಿಯಲ್ಲಿಯೇ ಆಯ್ಕೆ ಆಗಿರುವುದು!

*

ನಾನು ಪ್ರಸ್ತಾಪಿಸಿದ ಮತ್ತೊಂದು ಮುಖ್ಯ ವಿಷಯ : ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸರಕಾರದ ಸಂಬಂಧ. ಇದು ಹಳೆಯ ವಿಷಯ ಮತ್ತು ಪ್ರತಿ ಸಮ್ಮೇಳನದ ಆಜೂಬಾಜು ಚರ್ಚೆಗೆ ಒಳಪಡುವ ವಸ್ತು. ಏಕೀಕರಣದ ಮೊದಲು ಮೈಸೂರು ರಾಜಮನೆತನ ಮತ್ತು ಏಕೀಕರಣದ ನಂತರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸರಕಾರಗಳು ಈ ಸಂಸ್ಥೆಯನ್ನು ಪೋಷಿಸುತ್ತಲೇ ಬಂದಿವೆ. ಇದು ಸಹಜ ಪ್ರಕ್ರಿಯೆ. ಆದರೆ ಇತ್ತೀಚಿನ ದಿನಮಾನದಲ್ಲಿ ಆತಂಕ ಪಡುವ ಬೆಳವಣಿಗೆ ಎಂದರೆ : 'ಅನುದಾನ' ನೀಡುವ ಸರಕಾರಗಳು ಪರಿಷತ್ತಿನ 'ವ್ಯವಹಾರ'ಗಳಲ್ಲಿ 'ಹಸ್ತಕ್ಷೇಪ'ಕ್ಕೆ ಪ್ರಯತ್ನಿಸುವುದು.

ರಾಯಚೂರು ಸಮ್ಮೇಳನದ ಸಮಾರೋಪದ ಒಂದು ಆಕರ್ಷಣೆ ಎಂದರೆ–ಇಬ್ಬರು ಮಾಜಿ ಮುಖ್ಯಮಂತ್ರಿಗಳು – ಎಚ್. ಡಿ. ಕುಮಾರಸ್ವಾಮಿ ಮತ್ತು ಬಿ. ಎಸ್. ಯಡಿಯೂರಪ್ಪ – ಗೌರವ ಅತಿಥಿಗಳಾಗಿ ಪಾಲುಕೊಳ್ಳಬೇಕಾಗಿದ್ದು. (ಹಾಲಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಮೊದಲ ದಿನ ಉದ್ಘಾಟನೆ ಮಾಡಿದ್ದರು). ನನಗೂ ಕುತೂಹಲ : ಇವರಿಬ್ಬರ ನಡುವೆ ನನ್ನ ಕುರ್ಚಿ. ನನ್ನ ಸಮಾರೋಪ ಭಾಷಣ.

ಹತ್ತು ವರ್ಷದ ಹಿಂದಿನ ನೆನಪು. ನನ್ನ ಕಸಾಪ ಅವಧಿಯ ಎರಡನೆಯ ಸಮ್ಮೇಳನ ಶಿವಮೊಗ್ಗದಲ್ಲಿ. ಆಗಿನ ಸಿಎಂ ಶ್ರೀ ಕುಮಾರಸ್ವಾಮಿ; ಡಿಸಿಎಂ ಶ್ರೀ ಯಡಿಯೂರಪ್ಪ – ಜಿಲ್ಲೆಯ ಉಸ್ತುವಾರಿ ಸಚಿವರು ಮತ್ತು ಸಮ್ಮೇಳನದ ರೂವಾರಿ. ಇಬ್ಬರೊಂದಿಗೂ ನನ್ನ ಜಟಾಪಟಿ. ಮಾಮೂಲಿನಂತೆ 'ಉದ್ಘಾಟನೆ'ಗೆ ಮುಖ್ಯಮಂತ್ರಿಗಳನ್ನು ಕರೆಯದೆ ಕೊನೆಯ 'ಸಮಾರೋಪ'ಕ್ಕೆ ಕರೆದಿದ್ದೆ. (ಅದೇ ಸರಿ – ಅಂತ ನನ್ನ ಅಭಿಪ್ರಾಯ) ಇದು ಕುಮಾರಸ್ವಾಮಿಯವರ ಅಸಮಾಧಾನ. ಇದಕ್ಕೆ 'ನೆವ' ಎಂಬಂತೆ, ನಾನು ಸರಕಾರದ 'ಶಿಷ್ಟಾಚಾರ'ಕ್ಕೆ ಅನುಗುಣವಾಗಿ ತಕ್ಕ ಮರ್ಯಾದೆಯೊಂದಿಗೆ 'ಆಮಂತ್ರಣ' ಸಲ್ಲಿಸಿರಲಿಲ್ಲವಂತೆ. ಇನ್ನು ಡಿಸಿಎಂ

ಯಡಿಯೂರಪ್ಪನವರು – (ಬಹುಶಃ ಸಂಘ ಪರಿವಾರದ ಒತ್ತಡದಿಂದಾಗಿ) – ಸಮ್ಮೇಳನದ ಅಧ್ಯಕ್ಷರ ಆಯ್ಕೆಯ ವಿಷಯದಲ್ಲಿ ಮತ್ತು ವಿಚಾರಗೋಷ್ಠಿಗಳ ವಿನ್ಯಾಸದಲ್ಲಿ ಅನಗತ್ಯವಾಗಿ ಹಸ್ತಕ್ಷೇಪಕ್ಕೆ ಪ್ರಯತ್ನಿಸಿದ್ದರು. ನಾನು ಬೆಳೆದು ಬಂದ ಹಿನ್ನೆಲೆಯಿಂದಾಗಿ ಮತ್ತು ಪರಿಷತ್ತು ಒಂದು ಸ್ವಾಯತ್ತ ಸಂಸ್ಥೆಯೇ ಹೊರತು ಸರಕಾರದ ಅಂಗವಲ್ಲ ಎಂಬ ಅರಿವಿನಿಂದಾಗಿ ತಣ್ಣಗಿನ ದನಿಯಲ್ಲಿಯೇ ಗಟ್ಟಿಯಾದ ನಿಲುವು ತಾಳಿದೆ. ಈ ತಾತ್ವಿಕ ಸಂಘರ್ಷವೂ ಸಾಕಷ್ಟು ಧೂಳಿ ಎಬ್ಬಿಸಿತ್ತು.

ಶಿವಮೊಗ್ಗೆಯ ಸನ್ನಿವೇಶ ಕಂಡವರು ಇಲ್ಲಿಯೂ ಏನಾದರೂ ಆದೀತು ಅಂತ ಅಂದುಕೊಂಡಿದ್ದರು. ಯಡಿಯೂರಪ್ಪ ಬಂದರು. ಆದರೆ ಕುಮಾರಸ್ವಾಮಿ ಗೈರು ಹಾಜರು. ಇಬ್ಬರೂ ಬರದಿದ್ದರೂ ನಾನು ಸಮಾರೋಪದಲ್ಲಿ ಸರಕಾರ ಮತ್ತು ಕಸಾಪ ಸಂಬಂಧ ಕುರಿತು ಮಾತಾಡುವವನೇ ಇದ್ದೆ. ಅದಕ್ಕೆ ತಕ್ಷಣದ ಪ್ರಚೋದನೆ : ವೇದಿಕೆಯ ಮೇಲೆ – (ಉದ್ಘಾಟನೆಯ ವೇಳೆಗೆ ಇದ್ದಂತೆ) – ಬರೀ ರಾಜಕಾರಣಿಗಳೇ ತುಂಬಿದ್ದು. ಅವರೆಲ್ಲ ಆ ಸೀಮೆಯ ಪ್ರಮುಖರೇ. ಸಮ್ಮೇಳನದ ಯಶಸ್ಸಿಗಾಗಿ ಕಾಯಾ ವಾಚಾ ಮನಸಾ ಶ್ರಮಿಸಿದವರು. ಎಲ್ಲರಿಗೂ ಗೌರವ ಸಲ್ಲಿಸಬೇಕಾದ್ದು ಪರಿಷತ್ತಿನ ಕರ್ತವ್ಯ ಕೂಡ. ಆದರೆ ಎಲ್ಲರಿಗೂ ಭಾಷಣ ಮಾಡುವ ಅವಕಾಶ. ಪಟ್ಟಿಯಲ್ಲಿರುವ ಎಲ್ಲರನ್ನೂ ಹೆಸರುಗೊಂಡು ಸಂಬೋಧಿಸುವುದು; ತಮ್ಮ ತಮ್ಮ ಸಾಧನೆ ಹೇಳಿಕೊಳ್ಳುವುದು; ಜನಸ್ತೋಮಕ್ಕೆ ಭರವಸೆ ನೀಡುವುದು. ನಾನು ಮನು ಬಳಿಗಾರ ಅವರನ್ನು ಕೇಳಿದೆ : "ನನ್ನ ಪಾಳೆ ಯಾವಾಗ?"

ಮಗ್ಗುಲಲ್ಲಿಯೇ ಇದ್ದ ಯಡಿಯೂರಪ್ಪನವರನ್ನು ಕಂಡು ನನಗೆ ಸ್ವಲ್ಪ ಹೊಟ್ಟೆಕಿಚ್ಚು. ಅವರು ನಡುನಡುವೆ ನಿದ್ದೆ ಮಾಡುತ್ತಿದ್ದರು. ನನಗೆ ದಾರಿಯಲ್ಲಿ ಕಂಡ ಫ್ಲೆಕ್ಸ್‌ವೊಂದರ ವಾಕ್ಯದ ನೆನಪು : ಶರಣ ನಿದ್ದೆಗೈದೊಡೆ ಜಪ ಕಾಣಿರೋ. ನನಗೆ ಆ ಭಾಗ್ಯ ಇರಲಿಲ್ಲ. ನಾನೂ ಕಣ್ಣು ಮುಚ್ಚಿದ್ದರೆ ಆಗಿಂದಾಗ ಟಿ.ವಿ.ಗಳಲ್ಲಿ 'ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿ ಮತ್ತು ರಾಜಕಾರಣಿಗಳ ಗಾಢ ನಿದ್ರೆ' ಎಂಬ ಬ್ರೇಕಿಂಗ್ ನ್ಯೂಸ್ ಗ್ಯಾರಂಟಿ.

(ಶಿವಮೊಗ್ಗೆಯ ವಿಷಯ ಹೇಳಿದೆ. ನನ್ನ ನಿಲುವನ್ನು ಸೂಕ್ಷ್ಮವಾಗಿ ಅರ್ಥ ಮಾಡಿಕೊಂಡ ಯಡಿಯೂರಪ್ಪ ಯಾವ ಅನಾಹುತವೂ ನಡೆಯದಂತೆ ಮನೆಯ ಯಜಮಾನನಂತೆ ಆ ಸಮ್ಮೇಳನವನ್ನು ಸಾಂಗಮಾಡಿಕೊಟ್ಟದ್ದು ನಾನೆಂದೂ ಮರೆಯಲಾರೆ.)

ರಾಯಚೂರು ಸಮ್ಮೇಳನಕ್ಕೆ ಸರಕಾರ ನೀಡಿದ್ದು ಬರೋಬ್ಬರಿ ನಾಲ್ಕು ಕೋಟಿ ರೂಪಾಯಿ. ಅಲ್ಲದೆ ಇಡೀ ಸಮ್ಮೇಳನದ ನಿರ್ವಹಣೆಯ ಜವಾಬ್ದಾರಿ ಜಿಲ್ಲಾ ಆಡಳಿತದ್ದು. ಜಿಲ್ಲಾಧಿಕಾರಿ ಶ್ರೀ ಎಸ್. ಸಸಿಕಾಂತ ಸೆಂಥಿಲ್ ಅವರು ಪ್ರಧಾನ ಸಂಚಾಲಕ ಮತ್ತು ಕೋಶಾಧ್ಯಕ್ಷರಾಗಿ ತಮ್ಮ ದಕ್ಷತೆ, ಕಾಯಕ ನಿಷ್ಠೆಯಿಂದಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ನಾಡಿನ ನಾನಾ ಕಡೆಯಿಂದ ಸರಿಯೆ; ಹೈದ್ರಾಬಾದ ಕರ್ನಾಟಕದ ಹಳ್ಳಿ-ಹಳ್ಳಿಗಳಿಂದ ಸಾಹಿತ್ಯಾಸಕ್ತರು ಮತ್ತು ಇತರರು ಸಾವಿರದ ಸಂಖ್ಯೆಯಲ್ಲಿ ಬಂದಾಗ ಪರಿಸ್ಥಿತಿ ನಿಭಾಯಿಸಲು ಸುಸಜ್ಜಿತವಾದ ಪೋಲೀಸ್ ಪಡೆ ತಯಾರಾಗಿತ್ತು. ನಮ್ಮ ಸಮ್ಮೇಳನಗಳು ವರ್ಷದಿಂದ ವರ್ಷಕ್ಕೆ ಪಡೆಯುತ್ತಿರುವ ಆಕಾರ ನೆನೆದರೆ ಇದೆಲ್ಲ ಅನಿವಾರ್ಯವೇ ಅನಿಸುತ್ತಿದೆ.

ಆದರೆ...

"ಸಮ್ಮೇಳನಗಳ ಜರುಗುವಿಕೆಯಲ್ಲಿ ಸರಕಾರದ ಪಾಲುಗಾರಿಕೆಯ ಪ್ರಮಾಣ ಹೆಚ್ಚು ಆದಷ್ಟೂ ಕ.ಸಾ.ಪರಿಷತ್ತು ತನ್ನ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚಾಗುತ್ತದೆ" - ಇದು ನನ್ನ ಆತಂಕ. ದಲಿತ - ಬಂಡಾಯ ಸಾಹಿತ್ಯದ ಮೊದಲ ದಿನದ ಗೋಷ್ಠಿಯಲ್ಲಿ ಬಂಜಗೆರೆ ಜಯಪ್ರಕಾಶ 'ಪ್ರಭುತ್ವ'ದ ಒಳನೆಲೆಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದರು. ಸರಕಾರ ಅಂದರೆ ಅಧಿಕಾರದಲ್ಲಿರುವ ರಾಜಕೀಯ ಪಕ್ಷ : ಅದೇ ಆಯಾ ಕಾಲದ ಪ್ರಭುತ್ವ. ಹೋರಾಟಗಳ ಮೂಲಕ ಅಧಿಕಾರಕ್ಕೆ ಬಂದ ಪಕ್ಷವೂ 'ಪ್ರಭುತ್ವ' ಪಡೆದ ನಂತರ ಭಿನ್ನಮತವನ್ನು ಹತ್ತಿಕ್ಕುವ ಕೆಲಸವನ್ನೇ ಮಾಡುತ್ತದೆ. ದಮನ ಎಂಬುದೇ ಪ್ರಭುತ್ವದ 'ನೀತಿ'.

ಬಂಡಾಯ ಚಳುವಳಿಯ ವೈಶಿಷ್ಟ್ಯ ಇದು : ಇಂಥ ಸೂಕ್ಷ್ಮ ವೈರುಧ್ಯಗಳ ಅರಿವಿನ ಬೆಳಕಿನಲ್ಲಿಯೇ ನಾವು ನಮ್ಮ ಗುರಿಯ ಕಡೆಗೆ ಸಾಗಬೇಕಾದ ಒಳ ಎಚ್ಚರವನ್ನು ಸಾಹಿತಿಗಳಲ್ಲಿ ಮೂಡಿಸುವುದು.

*

ಒಂದು ಅಪರೂಪದ ಘಟನೆ ದಾಖಲಾಗಲೇಬೇಕು ಇಲ್ಲಿ.

ಸಮಾರೋಪದ ವೇದಿಕೆಯಲ್ಲಿ ಅಧಿಕೃತವಾಗಿ ಇರಬೇಕಾಗಿದ್ದವರು ಕರ್ನಾಟಕ ಸರಕಾರದ ಉನ್ನತ ಶಿಕ್ಷಣ ಸಚಿವ ಶ್ರೀ ಬಸವರಾಜ ರಾಯರೆಡ್ಡಿ. ಆದರೆ ಮುಂದಿನ ಸಾಲಿನಲ್ಲಿಯೇ ಇರಬೇಕಾದವರು ಹಿಂದಿನ ಸಾಲಿನಲ್ಲಿ ಕುಳಿತರು. ಯಾರ ಒತ್ತಾಯಕ್ಕೂ ಮಣಿಯಲಿಲ್ಲ. ವ್ಯಗ್ರ ದನಿಯಲ್ಲಿ ಅವರ ವಾದ : 'ಇದು

ಸಾಹಿತ್ಯ ಸಮ್ಮೇಳನ. ರಾಜಕಾರಣಿಗಳು ಪಾಲುಗೊಳ್ಳಲಿ. ಆದರೆ ಅವರು ವೇದಿಕೆಯ ಮೇಲೆ ಮೆರೆಯಬಾರದು. ತಮ್ಮ ಪಾಳೆ ಬಂದಾಗ ಮಾತಾಡಿ ಮತ್ತೆ ತಮ್ಮ ಜಾಗಕ್ಕೆ ಮರಳಬೇಕು.' ಅಷ್ಟೊತ್ತಿಗಾಗಲೇ ವೇದಿಕೆ ಏರಿದ್ದ ಇತರ ರಾಜಕಾರಣಿಗಳಿಗೆ ಸಾಕಷ್ಟು ಮುಜುಗುರ ತಂದಿಟ್ಟ ಘಟನೆ ಇದು. 'ನಿಮ್ಮ ನಿಲುವಿಗೆ ನನ್ನ ಸಂಪೂರ್ಣ ಬೆಂಬಲ' – ಅಂತ ನಾನು ಕೈ ಕುಲುಕಿದೆ.

ಸಮ್ಮೇಳನದ ಅನೇಕ ಗೋಷ್ಠಿಗಳಲ್ಲಿ ನಾಡಿನ ವಿವಿಧ ಪಕ್ಷಗಳ ಪ್ರಮುಖರನೇಕರು–(ಬಸವರಾಜ ಬೊಮ್ಮಾಯಿ, ಎಚ್. ವಿಶ್ವನಾಥ್, ವೈ.ಎಸ್.ವಿ. ದತ್ತಾ, ಬಸವರಾಜ ಪಾಟೀಲ ಸೇಡಂ, ಬಿ. ಆರ್. ಪಾಟೀಲ. ಮುಂ.) – ಪಾಲುಗೊಂಡಿದ್ದರು. ನಾಡಿನ ರಾಜಕೀಯ ಬದುಕಿನ ಬೆಳ್ಳಿರೇಖೆಗಳಿವು. ರಾಯರೆಡ್ಡಿ ಅವರ ವಿವೇಕಯುತವಾದ ಮತ್ತು ಔಚಿತ್ಯ ಪೂರ್ಣ ನಿಲುವು ಅಭಿನಂದನೀಯ. ಅಂಥವರ ತಳಿ ಹೆಚ್ಚಾಗಲಿ.

*

ಇನ್ನೊಂದು ವಿಷಯದ ಬಗ್ಗೆ ಮನು ಬಳಿಗಾರರಿಗೆ ಅಭಿನಂದನೆ ಹೇಳಬೇಕು. ಪರಿಷತ್ತಿನ ವಿದ್ಯಮಾನಗಳಲ್ಲಿ ಇನ್ನೊಂದು ಬಗೆಯ ಅನಗತ್ಯ ಹಸ್ತಕ್ಷೇಪ ನಾವು ಕಾಣುವುದು – ಈ ರಾಜ್ಯದ ಮಠಾಧೀಶರ ವಲಯದಿಂದ. ಬಹುತೇಕ ಸಮ್ಮೇಳನದಲ್ಲಿ ನಾನಿದನ್ನು ಕಂಡಿರುವೆ. ರಾಯಚೂರಿನಲ್ಲಿ ನನ್ನ ಗಮನ ಸೆಳೆದದ್ದು – ಈ ವಲಯದ ಗೌರವಾನ್ವಿತ ಗೈರು ಹಾಜರಿ.

*

ಸರಕಾರಿ ಸೇವೆಯ ಅಪಾರ ಅನುಭವವಿರುವ ಡಾ. ಮನು ಬಳಿಗಾರ ಅವರ ಅವಧಿಯ ಮೊದಲ ಸಮ್ಮೇಳನ 'ಯಶಸ್ವಿ' ಸಮ್ಮೇಳನವೆಂದೇ ಹೇಳಬೇಕು. ಆದರೆ ಲೆಕ್ಕಾಚಾರ ಮೀರಿ ವಿವಿಧಾಸಕ್ತಿಗಳ ಜನ ಅಪಾರ ಸಂಖ್ಯೆಯಲ್ಲಿ ಬಂದಾಗ ಸ್ವಲ್ಪ ಹೆಚ್ಚು ಕಡಿಮೆ ಆಗುವುದು ಸಹಜ. ಮೂರು ದಿನಗಳ ಭರಪೂರ ಭೋಜನದ ಜೊತೆಗೆ ಇಂಥ ಚಿಲ್ಲರೆ ತೊಂದರೆಗಳನ್ನೂ 'ಹೊಟ್ಯಾಗ ಹಾಕ್ಕೊಂಡು ಬಿಡ್ರೆಪಾ' ಎಂದು ಹೇಳುವುದು ಅನಿವಾರ್ಯ. ಒಂದು ಅನುಭವದಿಂದ ಕಲಿತ ಪಾಠ ಮುಂದಿನ ಅನುಭವಕ್ಕೆ ಆಸರೆಯಾಗುವುದು ಖಚಿತ.

*

ಮುಂಬೈ ಕರ್ನಾಟಕದ ನನಗೆ ಹೈದ್ರಾಬಾದ ಕರ್ನಾಟಕವೆಂದರೆ ಮಗ್ಗುಲ ಓಣಿ. ರಾಯಚೂರೆಂದರೆ : ಶಾಂತರಸ, ಲಕ್ಷ್ಮೀದೇವಿ, ಮುಕ್ತಾ, ಚೆನ್ನಣ್ಣ, ಜಂಬಣ್ಣ,

ಎಸ್.ಜಿ. ಸ್ವಾಮಿ, ಅಲ್ಲಮ, ಬಸವಪ್ರಭು, ನೀರಮಾನ್ವಿ, ವೈಕೆಸಿ, ಮಲ್ಲಿಕಾರ್ಜುನ, ಗಜಲ್ ಗುಂಡಮ್ಮ, ಲಲಿತಾ ನಾಯಕ, ಜಂಬಲದಿನ್ನಿ, ಚುಕ್ಕಿ ಬಂಧುಗಳು... ಈ ಹಸಿ ಹಸಿ ನೆನಪುಗಳನ್ನು ಈ ಸಮ್ಮೇಳನ ಮತ್ತೆ ನೆನೆ ಹಾಕಿದಂತಿತ್ತು.

*

ಸಮಾರೋಪ ಬಿಟ್ಟರೆ ಉಳಿದಂತೆ ನಾನು ಮೂರೂ ದಿನ ಅಲ್ಲಿ ಇಲ್ಲಿ ಓಡಾಡಿಕೊಂಡೇ ಇದ್ದೆ. 'ಅವರು ಬಂದಾರೇನ್ರಿ', 'ಇವರು ಬಂದಿಲ್ಲೇನ್ರಿ' – ನಾನು ಎದುರಿಸುತ್ತಿದ್ದ ಪ್ರಶ್ನೆಗಳು. ಖರೆ. ಈ ಸಮ್ಮೇಳನದಲ್ಲಿ ಹಿರಿಯ ಮತ್ತು ಪ್ರಮುಖ ಸಾಹಿತಿಗಳ ಗೈರು ಹಾಜರಿ ಒಡೆದು ಕಾಣುವಂತಿತ್ತು. ಸಾಹಿತ್ಯಾಸಕ್ತರಿಗೆ ಅದೊಂದು ಸೆಳೆತ : ಪತ್ರಿಕೆ–ಟಿ.ವಿ.ಗಳಲ್ಲಿ, ಓದುವ ಪತ್ಯಪುಸ್ತಕಗಳಲ್ಲಿ ಕಂಡ ಮುಖಗಳನ್ನು ಇಡಿಯಾಗಿ ನೋಡಬೇಕು; ಕೈ ಕುಲುಕಬೇಕು; ಆಟೋಗ್ರಾಫ್ ಪಡೆಯಬೇಕು. ಈಗೀಗಂತೂ 'ಸೆಲ್ಫಿ'ಗಳ ಹಾವಳಿ – ವದನಾರವಿಂದ ಸದಾ ಅರಳಿರಲೇಬೇಕು.

ಹಿರಿಯ ಸಾಹಿತಿಗಳು?... ನವೋದಯ– ಪ್ರಗತಿಶೀಲರು ಯಾರೂ ಇಲ್ಲ; ಸಮನ್ವಯ–ನವ್ಯದವರು ಅನೇಕರಿದ್ದರೂ ಅವರಿಗೂ ಕುಂತರೆ ಕುಂಡಿ ನೋವು, ನಿಂತರೆ ಮಂಡಿನೋವು. ಬಂಡಾಯದವರಲ್ಲಿ ಕೈ–ಕಾಲು ಗಟ್ಟಿ ಇದ್ದವರು ಬಹಳ ಇದ್ದಾರೆ – ಅವರಲ್ಲೂ ಬಹಳ ಜನ ಬಂದಿರಲಿಲ್ಲ. ಕಸಾಪ ಅಧ್ಯಕ್ಷರು ಎಲ್ಲರನ್ನೂ ಒಳಗೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದು ನನಗೆ ಗೊತ್ತು.

*

ಮತ್ತೊಂದು ತಕರಾರು : ಏನ್ರೀ, ಈ ಪೋಲೀಸರ ಕಾಟ! ಸಾಹಿತಿಗಳನ್ನೂ ಸಹ ಒಳಗೆ ಬಿಡೋದಿಲ್ಲ!... (ಈ ಕುರಿತು ಪರಿಷತ್ತಿನ ಸ್ಥಳೀಯ ಪದಾಧಿಕಾರಿಗಳೇ ನಿಗಾ ವಹಿಸಬೇಕು)... ಪೋಲೀಸರಿಗೆ ತಮ್ಮ ಸ್ಟೇಶನ್ನಿನಲ್ಲಿರುವ ರೌಡಿ ಶಿಟರುಗಳ ಮುಖ–ಪರಿಚಯವೇ ಹೊರತು ಸಾಹಿತಿ–ಪಾಹಿತಿಗಳೆಲ್ಲ ಹೇಗೆ ಗೊತ್ತಾಗಬೇಕು? (ಅಕ್ಷರ ಲೋಕದಲ್ಲೂ ರೌಡಿ–ಶೀಟರುಗಳಿದ್ದಾರೆ – ಆ ಮಾತು ಬೇರೆ.)

*

ಹತ್ತೊಂಭತ್ತು – ಇಪ್ಪತ್ತನೆಯ ಶತಮಾನಗಳ ಹಾಗೆಯೇ ಇಪ್ಪತ್ತೊಂದನೆಯ ಶತಮಾನ ಕೂಡ ಅನೇಕ ಅರ್ಥಗಳಲ್ಲಿ ಪ್ರಚಂಡ ಚಂಡಮಾರುತ–ಸುನಾಮಿ–ಭೂಕಂಪ–ಜ್ವಾಲಾಮುಖಿಗಳ ಕಾಲವೇ ಆಗುವಂತೆ ತೋರುತ್ತಿದೆ. ಕನ್ನಡದ

ಅಕ್ಷರ ಲೋಕದಲ್ಲೂ ಕಂಪನಗಳು ಸುರುವಾಗಿವೆ. ಮುದ್ರಣ ಮಾಧ್ಯಮ ಆಯಿತು; ವಿದ್ಯುನ್ಮಾನ ಮಾಧ್ಯಮ ಆಯಿತು; ಈಗ ಸಾಮಾಜಿಕ ಜಾಲತಾಣಗಳ ಆರ್ಭಟ. ಹೊಸ ಹೊಸ ಸಮುದಾಯಗಳ ಭೂಗತ ಲೋಕಗಳು ಅನಾವರಣ ಗೊಳ್ಳುತ್ತಿವೆ. ಹೊಸ ಸಂಘರ್ಷಗಳಿಗೆ ಹೊಸ ವ್ಯಾಕರಣ, ಹೊಸ ನುಡಿಗಟ್ಟು,

ಇಂಡಿಯಾದ ಸಂದರ್ಭದಲ್ಲಿ ಬಲಪಂಥೀಯ – ಎಡಪಂಥೀಯರ ನಡುವೆ ಸಂಘರ್ಷದ ಗೆರೆಗಳು ಗಟ್ಟಿಯಾಗುತ್ತಿರುವಂತೆ ಕಾಣುತ್ತಿದೆ. ಬದುಕಿನ ಪ್ರತಿಬಿಂಬದ ಜೊತೆಗೆ ಗತಿಬಿಂಬವೂ ಆಗಿರುವ ಸಾಹಿತ್ಯ ಕೂಡ ಚಲನಶೀಲವಾಗುತ್ತಿದೆ.

ಪ್ರತಿವರ್ಷ ನಡೆಯುವ ಕಸಾಪದ ಸಾಹಿತ್ಯ ಸಮ್ಮೇಳನಗಳ ಜೊತೆಗೆ ಈಗ ಬೇರೆ ನೆಲೆಗಳಲ್ಲಿ ದೊಡ್ಡ ಪ್ರಮಾಣದ ಸಾಹಿತ್ಯ ಸಮಾವೇಶ ನಡೆಯುತ್ತಿವೆ. ಮೂಡುಬಿದರೆಯ 'ಆಳ್ವಾಸ್ ನುಡಿಸಿರಿ' ಮತ್ತು ಧಾರವಾಡದ 'ಸಾಹಿತ್ಯ ಸಂಭ್ರಮ'ಗಳು ಹೊಸ ಬಗೆಯ ಚರ್ಚೆಗಳಿಗೆ ಹಾದಿ ಮಾಡುತ್ತಿವೆ.

ಧಾರವಾಡದಲ್ಲಿ ಸಣ್ಣಗೆ ಸುರುವಾಗಿ, ಮೊನ್ನೆ ಮೂಡುಬಿದರೆಯಲ್ಲಿ ಕಣ್ಣು ಮೂಗು ಪಡೆದುಕೊಂಡು ಈಗ ಚರ್ಚೆಯ ರಂಗಮಧ್ಯಕ್ಕೆ ಬರಲು ಹೆಣಗುತ್ತಿರುವ 'ಮಧ್ಯಮ' ಎಂಬ ಹೆಸರಿನ 'ಮಾರ್ಗ'ದ ಬಗ್ಗೆ ರಾಯಚೂರು ಸಮ್ಮೇಳನದಲ್ಲಿ ಪ್ರಧಾನ ಪ್ರಸ್ತಾಪ ಆದೀತೆಂಬ ನನ್ನ ನಿರೀಕ್ಷೆ ಖರೆ ಆಗಲಿಲ್ಲ. ಸ್ಪಷ್ಟ ಎಡಪಂಥಿಯ ನಿಲುವಿನವರೇ ತುಂಬಿದಾಗ ಇಂಥ ನಿರೀಕ್ಷೆ ಅನಪೇಕ್ಷಣೀಯ. ಆದರೆ 'ಕನ್ನಡ ಪ್ರಭ'ದ ಗೆಳೆಯರಿಬ್ಬರು ಸಮ್ಮೇಳನದ ಬಾಬು ಜಗಜೀವನರಾಮ ಹೆಸರಿನ ಪಾದರಕ್ಷೆ ಮಾರಾಟದ ಮಳಿಗೆಯಲ್ಲಿ ನನ್ನನ್ನು ಹಿಡಿದು ಚರ್ಚೆಗೆ ಎಳೆದೇ ಬಿಟ್ಟರು. (ಮರುದಿನದ 'ಕನ್ನಡ ಪ್ರಭ'ದಲ್ಲಿ ಸಂದರ್ಶನ ಅಚ್ಚಾಯಿತು).

ಈ ಕುರಿತು ಸದ್ಯ ನನ್ನ ನಿಲುವು ಇದು :

೧. ಸಾಹಿತಿಗಳು ಸ್ವತಂತ್ರ ಜೀವಿಗಳು; ಅವರು ಯಾವುದೇ ಸಿದ್ಧಾಂತಕ್ಕೆ ಬದ್ಧರಾದರೆ ಅಷ್ಟರಮಟ್ಟಿಗೆ ಅವರ ಕಲೆ, ಸಾಹಿತ್ಯ ಊನ – ಇದು ಕನ್ನಡ ಸಾಹಿತ್ಯದಲ್ಲಿ ಹಳೆಯದಾಗಿರುವ ನಿಲುವು. ನವೋದಯ – ನವ್ಯದ ಸಂಧಿಕಾಲದಲ್ಲಿ 'ಸಮನ್ವಯ' ಎಂಬ ತಳಿ ಹುಟ್ಟಿದ್ದೇ ಹೀಗೆ.

೨. 'ಎಡ' ಅಥವಾ 'ಬಲ' ಎಂಬವು ಚರಿತ್ರೆ, ವರ್ತಮಾನಗಳನ್ನು ಗ್ರಹಿಸಲು, ಅರ್ಥೈಸಲು, ಅನುಕೂಲವಾಗುವ ತಾತ್ವಿಕ ದೃಷ್ಟಿಕೋನಗಳು. ಇವು ಸ್ಥಿರ ಬಿಂದುಗಳಷ್ಟೇ ಅಲ್ಲ; ಚಲನಶೀಲ ಮಾರ್ಗಗಳು.

೩. 'ಮಧ್ಯಮ' ಎಂಬುದು ಒಂದು ಬಿಂದು ಮಾತ್ರ. ಇಲ್ಲಿ ಎಡವೋ ಬಲವೋ ಮೇಲೋ ಕೆಳಗೋ ಎಂಬ 'ಆಯ್ಕೆ'ಯ ಸ್ವಾತಂತ್ರ್ಯವಿದೆ. ಆದರೆ ಅದನ್ನು ಚಲಾಯಿಸಿದರೆ 'ಮಧ್ಯಮ' ಎಂಬುದು ಉಳಿಯುವುದೇ ಇಲ್ಲ.

೪. ಯಾವುದೇ ಸಿದ್ಧಾಂತಕ್ಕೆ ಬದ್ಧರಾಗಬಾರದೆಂಬುದೂ ಒಂದು ಸಿದ್ಧಾಂತವವೇ. ಈ ನಿಲುವಿನವರು ನಮ್ಮ 'ಪಕ್ಷೇತರ' ಶಾಸಕರಿದ್ದ ಹಾಗೆ. ಅವರ ಸಿದ್ಧಾಂತ : ಅನುಕೂಲ ಸಿದ್ಧಾಂತ -> ಅವಕಾಶವಾದಿತನ.

ಸದ್ಯದ ನನ್ನ ನಿಲುವು ಪರಿಷ್ಕರಣೆಗೆ ಮುಕ್ತವಾದ ನಿಲುವು.

*

ಈ 'ಮಧ್ಯಮ'ಕ್ಕೆ ಸದ್ಯ ತಳುಕು ಹಾಕಿಕೊಂಡಿರುವ ಹೆಸರು : ಡಾ. ಗಿರಡ್ಡಿ ಗೋವಿಂದರಾಜ. ಸಾಹಿತ್ಯ ವಾಹಿನಿಯಲ್ಲಿ ಸಹಪಯಣಿಗರು ನಾವು : ದಿಕ್ಕು ಮಾತ್ರ ಬೇರೆ ಬೇರೆ.

ಇತ್ತೀಚೆಗೆ ಅವರ ಹಳೆಯ ಕವನವೊಂದು ನನ್ನ ಕೈಗೆ ಸಿಕ್ಕಿತು :

ಬ್ಯಾಸರ (೧೯೭೧)

ಎಡಕ ನೋಡಿದ್ರೂ ಕತ್ತಲಾ
ಬಲಕ ನೋಡಿದ್ರೂ ಕತ್ತಲಾ
ಮುಂದ ನೋಡಿದ್ರ ಕಾಣೂ ಹಂಗಿಲ್ಲ
ಹಿಂದಕ ನೋಡಾಕ ಹೆದರಿಕಿ

ಬ್ಯಾಸರಾಗಿ, ತಿರಿಗಿ ಮನಿಗೆ ಬಂದರ
ಮತ್ತೂ ಬ್ಯಾಸರ

ಗಿರಡ್ಡಿಯವರ 'ಮಧ್ಯಮ'ದ ಮೂಲ ಕತ್ತಲು, ಹೆದರಿಕೆ ಎಂಬ ಅನಾಥ ಪ್ರಜ್ಞೆ ಇರಬಹುದೆ?

■

ಫಲಿತಾಂಶ

ಸಂಕ್ರಮಣ ಸಾಹಿತ್ಯ ಸ್ಪರ್ಧೆ : ೨೦೧೬

ಸಣ್ಣ ಕತೆ

ಈರಯ್ಯ ಕಿಲ್ಲೇದಾರ – ಈನಿಂಕಿ (ಬೆಳಗಾವಿ)	ಬೀಜ
ಟಿ. ಗೋವಿಂದರಾಜು (ಬೆಂಗಳೂರು)	ಊರು ಮುಂದ್ಲಿ
ಹ.ಶಿ. ಭೈರನಟ್ಟಿ (ಧಾರವಾಡ)	ಸತ್ವ ಪರೀಕ್ಷೆ

ಲಲಿತ ಪ್ರಬಂಧ

ಜಿ. ಪಿ. ಕುಸುಮಾ (ಮುಂಬಯಿ)	'ಇಲ್ಲ' ಎನ್ನುವುದು ಹೇಗೆ?
ಬ್ಯಾಡನೂರು ನಾಗಭೂಷಣ (ತುಮಕೂರು)	ಜೀವಿ ಅಂದರೆ ಬುದ್ಧಿ ಜೀವಿಯೇ
ಬಿ. ಎನ್. ಸೊಲ್ಲಾಪುರೆ (ಬೀದರ)	ಗಾದೆಯ ಮೇಲೆ ಕುಳಿತುಕೊಂಡು

ಕಾವ್ಯ

ಈಶ್ವರ ಕಾಪಸೆ (ಬೆಂಗಳೂರು)	ಮುಗ್ಧತೆ ಮಾಯ
ಗಣಪತಿ ಹೆಗಡೆ (ತುಮಕೂರು)	ಶಿರವಿರದ ಶಿಲ್ಪ
ನಾಗರೇಖಾ ಗಾಂವಕರ (ಉ.ಕ.)	ಕಾಲಾತೀತ ತಲುಬು
ನಾಗೇಶ ತಳವಾರ (ಬೆಂಗಳೂರು)	ಶ್ರೀ ಮಾಚೆವ್ವ ದಲಿತರ ಖಾನಾವಳಿ
ಪ್ರಕಾಶ ಆರ್. ಕಮ್ಮಾರ (ಶಿವಮೊಗ್ಗ)	ತುರುಬು
ಪ್ರಕಾಶ ಬುದ್ದಿನ್ನಿ (ರಾಯಚೂರು)	ಅಸಂಗತ
ಮಧು ಬಿರಾದಾರ (ಕಲಬುರಗಿ)	ರೋಜಾ
ರೇಖಾ ಬನ್ನಾಡಿ (ಉಡುಪಿ)	ವಾರಸುದಾರರು
ರೇಣುಕಾ ಕಠಾರಿ (ಬೆಳಗಾವಿ)	ಗಜಲ್
ಸೋಮನಾಥ ಗೀತಯೋಗಿ (ವಿಜಯಪುರ)	ಅಗ್ನಿಕುಂಡ

ಹನಿಗವನ

ಗಾಣಿಗರ್ ಎನ್. ಎಸ್. (ಕಲಬುರಗಿ)	ತೆರೆದ ಗೋರಿ
ಚಂದ್ರಶೇಖರ ಗಟ್ಟಿ ಬೋಳೂರು (ದ.ಕ.)	ಮಿನಿ–ಸ್ಟಾರ್
ಜಂಬುನಾಥ ಕಂಚ್ಯಾಣಿ (ವಿಜಯಪುರ)	ಚಾರ್
ದೇವಕಿಸುತ (ಬೆಂಗಳೂರು)	ಕೇಕೆ–ಯಾಕೆ
ನದೀಮ ಸನದಿ (ಬೆಳಗಾವಿ)	ತೇಲಿದ ಹೊಗೆ
ನಿರ್ಮಲಾ ಪ್ರಭು (ಬೆಂಗಳೂರು)	ವಿದ್ಯೆ–ನಿದ್ದೆ
ಬಸವರಾಜ ಹುಡೇದಗಡ್ಡಿ (ಬೆಂಗಳೂರು)	ಬದಲಾವಣೆ
ಮಹಾಂತೇಶ ಮಾಗನೂರ (ಬೆಂಗಳೂರು)	ನಗರೀಕರಣ
ಮ. ಶ್ರೀ. ಮುರಳಿಕೃಷ್ಣ (ಬೆಂಗಳೂರು)	ಪೀಠ–ಉದರ
ಮೈತ್ರಿ ಭಟ್ಟ (ದ.ಕ.)	ಶ್ರಾವಣ
ವಿದ್ಯಾಸಾಗರ ದೀಕ್ಷಿತ (ಧಾರವಾಡ)	ಸಂಸಾರಿ
ಸಿದ್ಧಲಿಂಗಪ್ಪ ಹದಿಮೂರ (ವಿಜಯಪುರ)	ಚಕ್ಕಡಿ ಗಾಡಿ
ಯು. ಸಿರಾಜ ಅಹಮದ ಸೊರಬ (ಬೆಂಗಳೂರು)	ಶ್ರಮ
ಸಿ. ಹಾಲಸ್ವಾಮಿ (ಬೆಂಗಳೂರು)	ಸ್ತ್ರೀ ಶಕ್ತಿ
ಜಿ. ಎಸ್. ಹೆಗಡೆ (ಉ.ಕ.)	ದೊಡ್ಡನೋಟು–ಚಿಲ್ಲರೆ ನಾಣ್ಯ

■

ಬಹುಮಾನಿತ ಬರಹಗಾರರು

ಈರಯ್ಯ ಕಿಲ್ಲೇದಾರ (ಈನಿಂಕಿ) ಮೊ: ೯೭೩೧೫ ೭೫೧೧೯	:	ಕವಿತಾ ಪ್ರಕಾಶನ, ಗುಡಿಕಟ್ಟಿ (ಬೆಳಗಾವಿ) ೫೯೧ ೧೦೪
ಡಾ. ಟಿ. ಗೋವಿಂದರಾಜು ಮೊ: ೯೭೩೧೪ ೫೩೯೧೯	:	೭೮೫, ಮೇನ್–೪, ಕಿರ್ಲೋಸ್ಕರ್ ಬಡಾವಣೆ, ಹೆಸರುಘಟ್ಟ ರಸ್ತೆ, ಬೆಂಗಳೂರು ೫೬೦ ೦೭೩
ಹ. ಶಿ. ಭೈರನಟ್ಟಿ ಮೊ: ೮೭೬೨೧ ೦೨೭೧೫	:	ಭಾಗೀರಥಿ ನಿಲಯ, ವಿನಾಯಕನಗರ ಧಾರವಾಡ ೫೮೦ ೦೦೧.
ಜಿ. ಪಿ. ಕುಸುಮಾ ಮೊ: ೦೯೦೨೯೦ ೭೭೧೩೬	:	ಅಮೇಯ ಸಿ.ಹೆಚ್.ಎಸ್, ಬಿ–ವಿಂಗ್ ೧೦೫ ಎನ್. ಎಸ್. ಮಂಕಿಕರ್ ರೋಡ್ ಸಿಯಾನ್ (ಇ), ಮುಂಬೈ ೨೨.
ಬ್ಯಾಡನೂರು ನಾಗಭೂಷಣ ಮೊ: ೯೪೪೯೨ ೯೪೬೬೨	:	ಎಂ. ಆರ್. ಸರ್ವಿಸ್ ಸ್ಟೇಶನ್ ಹಿಂಭಾಗ ಸಿದ್ದೇಶ್ವರ ನಗರ, ಯಲ್ಲಾಪುರ–ಅರಕೆರೆ ತುಮಕೂರು ೫೭೨ ೧೦೧.
ಬಿ. ಎನ್. ಸೊಲ್ಲಾಪುರೆ ಮೊ: ೯೪೪೯೭ ೪೪೬೩೨	:	ಧರಿನಾಡು ಕನ್ನಡ ಸಂಘ ಕಮಲನಗರ (ಬೀದರ) ೫೮೫ ೪೧೭.
ಈಶ್ವರ ಕಾಪಸೆ ಮೊ: ೯೬೬೩೦ ೦೨೮೯೪	:	C/o. ಸಂತೋಷ ಕಾಪಸೆ, #೨೦೩, ೧೮೦೪/೭, ಕುಟೀರ ಅಪಾರ್ಟ್‌ಮೆಂಟ್ ಮೇನ್–೫, ಕ್ರಾಸ್–೧೦, ಹಂಪಿನಗರ ಬೆಂಗಳೂರು ೫೬೦ ೧೦೪.
ಗಣಪತಿ ಹೆಗಡೆ ಮೊ: ೯೪೪೯೧ ೧೬೮೬೮	:	ಪಯೋನಿಧಿ, ಮಾರುತಿ ನಗರ ನೃಪತುಂಗ ಹೈಸ್ಕೂಲ ಎದುರು ತುಮಕೂರು ೫೭೨ ೧೦೨.
ನಾಗರೇಖಾ ಗಾಂವಕರ ಮೊ: ೮೨೭೭೬ ೩೪೨೯೩	:	ಇಂಗ್ಲಿಷ್ ವಿಭಾಗ, ಪದವಿ ಪೂರ್ವ ಕಾಲೇಜು, ದಾಂಡೇಲಿ (ಉ.ಕ.) ೫೮೧ ೩೮೩

ನಾಗೇಶ ತಳವಾರ ಮೊ: ೯೦೩೫೩ ೯೭೦೦೯	:	ಕಾರ್ಯಕ್ರಮ ನಿರ್ಮಾಪಕ, ಬಿಟಿವಿ ಚಾನೆಲ್ ಕ್ರೆಸೆಂಟ್ ಟಾವರ್, ಕ್ರೆಸೆಂಟ್ ರಸ್ತೆ, ಬೆಂಗಳೂರು ೫೬೦ ೦೦೧.
ಪ್ರಕಾಶ ಆರ್. ಕಮ್ಮಾರ ಮೊ: ೮೭೬೨೦ ೫೫೪೦೬	:	ಹೃಷಿಕೇಶ, ರತ್ನಮ್ಮ ಬಡಾವಣೆ ಊರುಗಡೂರು, ನೀರಿನ ಟ್ಯಾಂಕ್ ಬಳಿ ಶಿವಮೊಗ್ಗ ೫೭೭ ೨೦೧.
ಪ್ರಕಾಶ ಬುದ್ದಿನ್ನಿ ಮೊ: ೯೦೦೮೦ ೩೯೦೧೭	:	ಬಡಿಗೇರ ಓಣಿ, ಹನುಮಂತನ ಗುಡಿ ಬಳಿ ಜಾಲಹಳ್ಳಿ (ರಾಯಚೂರು) ೫೮೪ ೧೧೬.
ಮಧು ಬಿರಾದಾರ ಮೊ: ೯೬೮೬೬ ೪೫೨೬೩	:	ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿ.ವಿ. ಕಡಗಂಚಿ (ಕಲಬುರಗಿ) ೫೮೫ ೩೧೧.
ರೇಖಾ ಬನ್ನಾಡಿ ಮೊ: ೯೮೪೪೨ ೮೪೨೧೩	:	ತಿಂಗಳ ಬೆಳಕು, ಜೆ.ಎಲ್.ಬಿ. ರಸ್ತೆ ವಡೇರ ಹೋಬಳಿ, ಕುಂದಾಪುರ (ಉಡುಪಿ) ೫೭೬ ೨೦೧.
ರೇಣುಕಾ ಕಠಾರಿ ಮೊ: ೯೯೦೧೪ ೩೯೦೧೨	:	C/o. ಅರುಣಕುಮಾರ ಕಠಾರಿ, ಕ್ರಾಸ್-೧, ಲಕ್ಷ್ಮೀನಗರ, ಕಾಕತಿ (ಬೆಳಗಾವಿ) ೫೯೧ ೧೧೩
ಸೋಮನಾಥ ಗೀತಯೋಗಿ ಮೊ: ೯೮೮೦೦ ೩೨೦೬೩	:	ಸಾಲೋಟಗಿ (ಇಂಡಿ-ವಿಜಯಪುರ) ೫೮೬ ೨೧೭
ಗಾಣಿಗರ್ ಎನ್. ಎಸ್. ಮೊ: ೯೯೭೨೪ ೩೧೩೧೧	:	ಕನ್ನಡ ವಿಭಾಗ, ಕರ್ನಾಟಕ ಕೇಂದ್ರೀಯ ವಿ.ವಿ. ಕಡಗಂಚಿ (ಕಲಬುರಗಿ) ೫೮೫ ೩೧೧
ಚಂದ್ರಶೇಖರ ಗಟ್ಟಿ ಬೋಳೂರು ಮೊ: ೯೪೪೮೭ ೪೭೬೩೩	:	ಅರಣ್ಯ ಸಂರಕ್ಷಣಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯತ್, ಮಂಗಳೂರು (ದ.ಕ.) ೫೭೫ ೦೦೬
ಜಂಬುನಾಥ ಕಂಚ್ಯಾಣಿ ಮೊ: ೯೯೦೧೧ ೧೧೭೩೪	:	ಕವಿ ಕೀರ್ತಿ, ಕೀರ್ತಿ ನಗರ ವಿಜಯಪುರ ೫೮೨ ೧೦೯.
ದೇವಕಿ ಸುತ ಮೊ: ೯೮೮೬೧ ೯೧೨೦೬	:	೧೭೨/ಬಿ-ಮೇನ್, ಜೀವನಹಳ್ಳಿ, ಸರ್ವಜ್ಞ ನಗರ, ಬೆಂಗಳೂರು ೫೬೦ ೦೦೫.

ನದೀಮ ಸನದಿ : #೧೪೧, ಸಿಂದೊಳ್ಳಿ
ಮೊ: ೯೭೨೦ ೯೪೧೮೪ (ಬೆಳಗಾವಿ) ೫೯೧ ೧೨೪

ಡಾ. ನಿರ್ಮಲಾ ಪ್ರಭು : #೧೨, ಜ್ಞಾನದೀಪ, ಕೃಷ್ಣಪ್ಪ ಲೇಔಟ್
ಮೊ: ೯೮೮೦೫ ೯೧೨೧೬ ಸಂಪಂಗಿನಗರ, ಆರ್.ಎಂ.ವಿ.-II
ಬೆಂಗಳೂರು ೫೬೦ ೦೯೪.

ಬಸವರಾಜ ಹುಡೇದಗಡ್ಡಿ : #೧೭೩೧/೧, ಮೇನ್ ೧-ಇ, ಡಿ-ಬ್ಲಾಕ್
ಮೊ: ೯೯೮೬೫ ೬೦೮೧೨ ರಾಜಾಜಿನಗರ, ಬ್ಲಾಕ್-೨
ಬೆಂಗಳೂರು ೫೬೦ ೦೧೦.

ಮಹಾಂತೇಶ ಮಾಗನೂರ : #೧೦೨, ವರ್ಷಿಣಿ ರೆಸಿಡೆನ್ಸಿ, ಕ್ರಾಸ್-೧೧
ಮೊ: ೯೯೮೦೦ ೨೨೧೫೫ ಪದ್ಮನಾಭನಗರ, ಬೆಂಗಳೂರು ೫೬೦೦೭೦

ಮೈತ್ರಿ ಭಟ್ಟ : ಇ/ಮ ರವಿಶಂಕರ ಕೆ. #೫-೩೯೨
ಮೊ: ೮೨೭೭೬ ೫೧೧೨೯ ಜಯದುರ್ಗ, ನೇತ್ರೆಕೆರೆ, ವಿಟ್ಲ
(ದ.ಕ.) ೫೭೪ ೨೪೩

ಮ.ಶ್ರೀ. ಮುರಳಿ ಕೃಷ್ಣ : #೩೮, ಕ್ರಾಸ-೩, ರಾಜ ಗಾರ್ಡನಿಯ
ಮೊ: ೯೪೮೧೨ ೦೦೯೬೦ ಲೇಔಟ್, ತುರಹಳ್ಳಿ, ಸುಬ್ರಹ್ಮಣ್ಯಪುರ
ಬೆಂಗಳೂರು ೫೬೦ ೦೬೧.

ವಿದ್ಯಾಸಾಗರ ದೀಕ್ಷಿತ : ಎಸ್.ಬಿ.ಆಯ್., ಕರ್ನಾಟಕ ವಿ.ವಿ. ಶಾಖೆ
ಮೊ: ೯೯೪೫೯ ೮೬೮೬೨ ಧಾರವಾಡ ೫೮೦ ೦೦೩

ಸಿದ್ದಲಿಂಗಪ್ಪ ಹದಿಮೂರ : ಕುರೇಶಿ ಕಾಲನಿ, ಸೈನಿಕ ಶಾಲೆ ಅಂಚೆ
ಮೊ: ೯೯೭೨೧ ೬೫೯೯೫ ವಿಜಯಪುರ ೫೮೬ ೧೦೨

ಯು. ಸಿರಾಜ ಅಹಮದ ಸೊರಬ : ಅಶ್ವಿನಿ ಮೆಡಿಕಲ್ಸ್, ಶ್ರೀನಿವಾಸ ಕಾಂಪ್ಲೆಕ್ಸ್
ಮೊ: ೯೭೪೩೯ ೦೮೮೭೬ ಸೊಂಡೆಕೊಪ್ಪ ರಸ್ತೆ
ಬೆಂಗಳೂರು ೫೬೧ ೧೨೩

ಸಿ. ಹಾಲಸ್ವಾಮಿ : #೬೭, ಶ್ರೀಮಾರುತಿ ಆಸ್ಪತ್ರೆ, ಲಿಂಕ್ ರಸ್ತೆ
ಮೊ: ೯೬೬೩೫ ೭೪೯೦೩ ಶೇಷಾದ್ರಿಪುರ, ಬೆಂಗಳೂರು ೫೬೦ ೦೨೦

ಜಿ.ಎಸ್. ಹೆಗಡೆ (ಆಮೋದ) : ಕೆ.ಎಚ್.ಬಿ. ಕಾಲನಿ, ಪ್ರಭಾತ ನಗರ
ಮೊ: ೮೭೬೨೧ ೫೦೫೧೯ ಹೊನ್ನಾವರ (ಉ.ಕ.) ೫೮೧ ೩೩೪.

ಬಹುಮಾನಿತ ಸಣ್ಣಕತೆ

ಬೀಜ

• ಈರಯ್ಯ ಕಿಲ್ಲೇದಾರ

"ಎದ್ದ ಕೂಡಲೇ ಇವು ಕರ ಮಕಾ ನೋಡಬಾರದು. ಪರದೇಶಿ ಆಕಳಾ ಕೊಂಬಿಲ್ಲಾ ಕೊಳಗಿಲ್ಲಾ, ಇತ್ತ ಆಕಳನೂ ಅಲ್ಲ. ಅತ್ತ ಹಂದಿನು ಅಲ್ಲ, ಶ್ಯಾನ್ಯಾ ಮಗಾ ಹೆಚ್ಚ ಹಾಲ ಹಿಂಡತೈತಿ ಅಂತ ತಗೊಂಡ ಬಂದ. ಯಾಡ ಬುಟ್ಟಿ ಧಾನೇ ಬೇಕು. ಗಟ್ಟಳ ಯಾಡ ಹೊರಿ ಮೇವ ಬೇಕು. ಒಂದೀಟ ಮೇವ ಕಡಿಮ್ಯಾದರ ಸಾಕ. ಮೇವ ಹಾಕಬರ್ರ್ಯೋ ಅಂತ ಒದರತೈತಿ" ಗೊಣಗುತ್ತ ತಾನು ಬಂದಿರುವ ಬಗ್ಗೆ ಸಾಕ್ಷಿ ಎಂಬಂತೆ ಕೈಯಲ್ಲಿರುವ ಕೋಲನ್ನ 'ಕಟ್' 'ಕಟ್' ಎಂದು ಸಪ್ಪಳ ಮಾಡಿ ಊರುತ್ತ ಯಲ್ಲಪ್ಪ ದನದ ಮನೆಗೆ ಹೋಗಿದ್ದ.

ಕೈಯಿಂದ ಹಿಡಿದರೆ ಕೈ ಸುಡುವುದೋ ಅಥವಾ ಕೈಯೆಲ್ಲಾ ವಿಷಮಯ ಆಗುವುದೋ ಎಂದು ಸಂಕೋಚಪಡುತ್ತ ರಾಮೂ ಗ್ವಾರಿಯಿಂದ ಸಗಣಿ ಬಳಿದು ಬುಟ್ಟಿ ತುಂಬಿಸುತ್ತಿದ್ದ. ಕಟ್ಟಿದಲ್ಲೇ ಹೇಲುವುದು ಮತ್ತು ಉಚ್ಚೆ ಹೊಯ್ಯುವುದು ಅದಕ್ಕೆ ರೂಢಿ ಆಗಿತ್ತು. 'ತಾನೆಷ್ಟು ತಿಂದಿರುವೆ ನೋಡಿ' ಎಂದು ಬಹಳಷ್ಟು ಸಗಣಿ ಹಾಕಿರುವುದನ್ನು ತೋರಿಸುತ್ತಿತ್ತು. ತನ್ನ ಕರುವನ್ನು ಹತ್ತಲು ಹಾತೊರೆಯುತ್ತ ಲೈಂಗಿಕಾಸಕ್ತಿ ತೋರ್ಪಡಿಸಿತ್ತು. "ಮನ್ನಿ ಮನ್ನೆರ ಕಟ್ಟಿಸಿಗೊಂಡ ಬಂದಿದ್ದೆಲ್ಲೋ. ದವಾಖಾನ್ಯಾಗ ಅದೆಂಥಾ ಬೀಜಾ ಹಾಕ್ತಾರೋ. ಬೀಜ ಏನರ ಕಂತ್ರಿ ಐತ್ಯೋ. ಆಕಳನ ಗೊಡ್ಡ ಬಿತ್ತೋ. ಐದಾರ ಸಾರಿ ಆದರೂ ಕಟ್ಟವಲ್ತು. ಬೆದಿಗಿ ಬಂದs ಬರತೈತಿ. ನಾಳೆ ಸುಕ್ರಾರ ಹೊಂಗಲ ಸಂತಿಗಿ ಹೊಡದಬಿಡು." ಹಾದಾಡುವಲ್ಲಿ ಬಿದ್ದ ದಂಟನ್ನು ಕೋಲಿನಿಂದ ಬದಿಗೆ ಸರಿಸುತ್ತ, ಹೆಗಲ ಮ್ಯಾಲಿನ ಧಡಿ ಧೋತರಾ, ತಲಿ ಮ್ಯಾಲಿನ ಪಟಗೆ ಕೈಯಿಂದ ಹಿಡಿದು ಸರಿಪಡಿಸಿಕೊಂಡು ಗುಡಿ ಕಡೆ ಹೊರಟಿದ್ದ.

ಅವನ ಮಾತು ಕೇಳಿದರೂ ಕೇಳಿಸಿಕೊಳ್ಳದವನಂತೆ ತನ್ನ ಪಾಡಿಗೆ ತಾನು ಸಗಣಿಯ ಬುಟ್ಟಿ ಹೊತ್ತುಕೊಳ್ಳಲು ಬಗ್ಗಿದ್ದ. ಸಗಣಿ ಮತ್ತು ಉಚ್ಚೆಯಲ್ಲಿ ಎದ್ದಿದ್ದ ತನ್ನ ಬಾಲವನ್ನು ಬೀಸಿ ಅವನ ಮುಖಕ್ಕೆ ಹೊಡಿದಿತ್ತು. ಬಾಯಲ್ಲಿ ಹೊಕ್ಕ ಸಗಣಿ, ಉಚ್ಚೆಯನ್ನು ಉಗುಳುತ್ತ ಅಂಗಿಯ ತೋಳಿನಿಂದ ಗಲ್ಲವನ್ನು

ಒರೆಸಿಕೊಂಡ. "ಇದರವ್ವನ್ ಹಡಾ – ಯಾತಕ್ಕ ಹುಟ್ಟಿದ್ದೋ ಏನೋ" ಎಂದು ಶಪಿಸಿದ. "ಇಷ್ಟುಸಲ ದವಾಖಾನಿ ಬೀಜಾ ಹಾಕಿಸೆ ರೂಢಾ ಮಾಡೀದೇನು. ಯಾಕಾಗವಲ್ತು ಈ ಸಲ ಹೋರಿ ಬಿಡಿಸಿ ನೋಡತೇನು. ಕಟ್ಟತ್ತೈತೋ ಇಲ್ಲೋ. ಅನುಮಾನ ಪಡುತ್ತ ಕಡೀ ಕಾಲಕ್ಕ ಐತೆಲ್ಲ ಕಟಕರ ಕಾಚಾಗೋಳಿಗೆ ಮಾರಿದರಾತಿ. ಹೈನಾ ಮಾಡಾವರು ಗೊಡ್ಡ ಆಕಳಾ ತಗೋಳುದಿಲ್ಲಾ. ಕಟಕರಿಗ್ಹೆಂಗ ಮಾರೂದು? – ಮನದಲ್ಲೇ ಮರುಗಿದ. ಮರುಕಪಡುವುದಕ್ಕೂ ಒಂದು ಕಾರಣವಿತ್ತು. ತಾನು ಇಪ್ಪತ್ತು ಸಾವಿರ ಕೊಟ್ಟು ಖರೀದಿಸಿದ್ದ. ಈಗ ಐದಾರು ಸಾವಿರಕ್ಕೆ ಮಾರಬೇಕು. ಅದೂ ಕಟುಕರಿಗೆ...! ಯೋಳೆಂಟು ಸಾವಿರದ ಹೈನಾ ಮಾಡೇತಿ. ಹೊಲಕ್ಕ ಸಾಕಷ್ಟು ಗೊಬ್ಬರಾ ಕೊಟ್ಟೇತಿ. ಆದರೂ ತನ್ನ ಅಪ್ಪನಿಗೆ ಸೇರಿಕೆ ಬರವಲ್ತು. ಆರೆಕರೆ ಹತ್ತಿ ಹಾಕಿದೇನು. ಅದಕ್ಕ ಒಂದ ಕೀಡಿ ಬರೂವಂಗಿಲ್ಲ. ಒಂದ ರೋಗ ಬರೂವಾಂಗಿಲ್ಲ. ಔಷಧ ಹೊಡೆಯುವಂಗಿಲ್ಲ. ಎದಿಯುದ್ದಾ ಬೆಳದ ನಿಂತೈತಿ. ಕಂಪನಿ ಬೀಜ ಹೊಸಾದು. ಇನ್ನೇನ ಹೂವು ಕಾಯಿ ಸುರು ಆಗುವುದು, ಟೊಂಗಿಗೆ ಗೆಜ್ಜಿ ಕಟ್ಟಿದಂಗ ಕಾಯಿ ಒಜ್ಜೆ ಆಗೆ ಮುರಕೊಂಡು ಬೀಳಬೇಕ. ಸುಣ್ಣಾ ಗೊಜ್ಜಿದಂಗ ಹತ್ತಿ ಒಡದರ ಹೊಲಾ ಎಲ್ಲಾ ಬಿಳಿ ಬಂಗಾರ. ನೋಡವಂತ್ಯಾ ಎಪ್ಪಾ ಒಮ್ಮಿನೂ ನೀ ಲಕ್ಷದ ಮಕಾ ನೋಡಿಲ್ಲಾ. ನಾಕೈದ ಲಕ್ಷ ಉತ್ಪನ್ನ ತಗದ ತೋರಸತೇನು. ಆವಾಗಾರ ಖುಷಿ ಅಕ್ಕಿಯೋ ಇಲ್ಲೋ." ಒಳಗೊಳಗೆ ಪುಳಕಗೊಂಡಿದ್ದ.

ಊರು ಬಿಟ್ಟ–ದೂರದಲ್ಲಿರುವ ಕಲ್ಮೇಸ್ವರರ ಗುಡಿಯ ಮುಂದಿರುವ ಆಲದ ಗಿಡದ ಕೆಳಗಿನ ಕಟ್ಟೆಯ ಮೇಲೆ ದಿನಾಲು ಬೆಳಿಗ್ಗೆ ಮೂರ್‍ನಾಲ್ಕು ಮಂದಿ ಅಡ್ಯಾಡಿಕೊಂತ ಹೋಗಿ ಕುಂಡರತಿದ್ದರು. ಅಷ್ಟರಲ್ಲಿ ಯಲ್ಲಪ್ಪ ಗುಡಿ ಅಂಗಳಾ ಬಾಗಲಾ ಕಸಾ ಹೊಡದ. ಕೆರಿಗಿ ಹೋಗಿ ಕೈಕಾಲ ಮಾರಿ ತೊಳಕೊಂಡ ಒಂದ ಚೆರಗಿ ನೀರ ತಗೊಂಡ ಬಂದ ಗುಡಿ ಬಾಗಲದಾಗ ಚೆಂಪಡಿಸೆ, ಕಲ್ಮೇಶ್ವರನ ಮುಂದ ಉದ್ದಕ ಬಿದ್ದ. ಅಂವನ ಅಂಗಾರ ಹಣಿಗಿ ಹಚ್ಚಿಗೊಂಡ. ಬಾಯಾಗಟ ಹಾಕ್ಯೊಂಡ ಅವರ ಕೂಡ ಇಂವನೂ ಕುಂಡರತಿದ್ದ. ಕಲ್ಮೇಸರ ಗುಡ್ಯಾಗ ಶಾಸನ ಬರದ ಇಟ್ಟಾರಂತ. ಗುಡಿಕಟ್ಟಿ ಅಂದರs ಜಯದ ಕಟ್ಟಿ, ವಿಜಯದ ಕಟ್ಟಿ. ಗೋವಾದ ಕದಂಬರು ಕೆರಿಗೆ ಜಾಗ ಕೊಟ್ಟ ಕೆರಿ ಕಟ್ಟಿಸೆ ಕೆರಿ ಕಟ್ಟಿಮ್ಯಾಲ ಗುಡಿ ಕಟ್ಟೀದಾರಂತ. ಹಿಂಗಾಗೆ ಗುಡಿಕಟ್ಟಿ ಅಂತ ನಮ್ಮೂರಿಗೆ ಹೆಸರ ಬಂದೈತಿ. ಆ ಶಾಸನ ಉಸರ ಬಿಡದಂಗ ಓದಿದಾಂವಗ ಆ ಶಾಸನದ ಕಲ್ಲಿನ ಕೆಳಗ ಕೊಪ್ಪರಿಗಿ ತುಂಬ ಬಂಗಾರ ಇದ್ದುದ್ದು ಸಿಗತೈತೆಂತ ಹಿಂದಿಕಿನ್ಯಾವರ ಹೇಳಿದ್ದನ್ನ ಮೆಲಕ ಹಾಕುತ್ತಿದ್ದರು. ಹೊಟ್ಯಾಗಿಂದು ಬಾಯಾಗಿಂದು ಮಾತಾಡಿಕೋತಿದ್ದರು.

ಒಬ್ಬರಿಗೊಬ್ಬರು ಮರುಗುತ್ತಿದ್ದರು. ಕಾಳಜಿ ಮಾಡುತ್ತಿದ್ದರು. ನೀ ಹಂಗ ಮಾಡಬಾರದಿತ್ತು. ಹಂಗ ಮಾಡಬೇಕಿತ್ತು ಏನೆಲ್ಲಾ ಮಾತುಗಳ ಮನೆ ಕಟ್ಟುತ್ತಿದ್ದರು.

ಒಂದು ಹೆಣ್ಣು ನಾಯಿಗೆ ನಾಕೈದ ಗಂಡ ನಾಯಿಗೋಳು ಗಂಟ ಬಿದ್ದಿದ್ದೂವ. ಒಂದು ಗಂಡು ನಾಯಿ ಯಾಕಾದರೂ ಸಾಸಿವಿ ಕಾಳಿನಷ್ಟ ಸುಖಕ್ಕ ಹಂಬಲಿಸಿದೆನೋ ಎಂದು ತನ್ನದನ್ನು ಹೊರತೆಗೆದುಕೊಳ್ಳಲಾಗದೆ ಒಳಗೆ ಇಡಲಾಗದೆ ಚಡಪಡಿಸುತ್ತಿತ್ತು. ಅದನ್ನು ಕಂಡೂ ಕಂಡೂ ಉಳಿದ ಗಂಡುಗಳು ತಮಗೂ ಅದೇ ಗತಿ ಆಗುವುದೆಂದು ಗೊತ್ತಿದ್ದೂ, ಬೇರೆ ಕರೆಯಲ್ಲಿ ನಿರತವಾಗಿದ್ದ ಮೊಬೈಲಗೆ ಮತ್ತೆ ಮತ್ತೆ ಕರೆ ಮಾಡುವ ಚಂದಾದಾರರಂತೆ ಕರೆ ಮಾಡಲು ಮುಂದಾಗಿದ್ದವು. ನಿನ್ನ ಗಂಡಸ್ತನಾ ಎಷ್ಟ ಐತಿ ಅನ್ನೋದು ಗೊತ್ತಾತಿ. ಸಾಕ ನಿಂದು ತಕ್ಕೋ. ಹೆಣ್ಣಾಯಿ ಹೇಳುತ್ತ ಯಲ್ಲಪ್ಪನ ಮೈಮೇಲೆ ಹೋಗಿತ್ತು. ಗಂಡ ನಾಯಿಗೆ ಸುಖವೋ ದುಃಖವೋ ತಿಳಿಯದೆ, ತನ್ನದು ಹೊರಗೆ ಬಂದರೆ ಸಾಕೆನಿಸಿತ್ತು.

'ಹಚ್ಚಿ' 'ಹಚ್ಚಿ' ಎಂದು ಗದರಿಸುತ್ತ ಹೇಳಿ ಕೇಳಿ ಜೋಕುಮಾರನ ಬೆದಿ ಹಂಗಾಮಿದು. ಮನಸ್ಯಾರಿಗೂ ನಾಯಿಗೋಳಿಗಿದ್ಹಂಗ ಒಂದು ಹಂಗಾಮಿದ್ದರs..., ಒಂದ ನಾಯಿಗೆ ನಾಕೈದ ಗಂಟ ಬಿದ್ಹಂಗ, ಒಂದ್ಹೆಣ್ಣಿಗೆ ನಾಕೈದ ಗಂಡ ಗಂಟ ಬೀಳೂವಂಗ ಆಗಿದ್ದರ.. ಎಂದು ಯೋಚಿಸುತ್ತ ಏಳಗೊಡದ ಹೆಂಥಾ ವಿಚಾರಗೋಳ ಬರಾಕ್ಹತ್ತೀದುವ. ಅದೂ ದೇವರ ಗುಡಿ ಮುಂದ ಎಂದು ಕೊಳ್ಳುತ್ತ 'ಎದ್ರೀ?' ಎಂದು ಎಲ್ಲರಿಗೂ ಕೈ ಮುಗಿದ. ಅವರೂ ಪ್ರತಿಯಾಗಿ 'ಎದ್ದೀವ ಎದ್ರೀ' ಎಂದು ಕೈಮುಗಿದರು.

'ಬೆಂಗಳೂರಿಂದ ಯಾವಾಗ ಬಂದೀರೀ ಮಾಸ್ತರs?' ಯಲ್ಲಪ್ಪ ಕಟ್ಟೆಯ ಮೇಲೆ ಕೂಡ್ರುತ್ತ ಕೇಳಿದ. 'ನಿನ್ನೆ ಮಧ್ಯಾನಕ್ಕ ಬನ್ನಿ ಯಲ್ಲಪ್ಪಣ್ಣಾ' ಹುಬ್ಬಿನ ಮೇಲಿನ ಕೂದಲು ಕಣ್ಣಿಗೆ ಚಪ್ಪರ ಹೊದಿಸಿದ ಹಾಗೆ ಕಾಣುವ ಮಾಸ್ತರು ಹೇಳಿದರು. 'ಬೆಂಗಳೂರ ಕಡೆ ಮಂದಿ-ಮಕ್ಕಳು, ಮಳಿ-ಬೆಳಿ ಹೆಂಗರೀ?' ತಲೆಯ ಮೇಲಿನ ಪಟಗೆ ತೆಗೆದು ತೊಡೆಯ ಮೇಲಿಟ್ಟುಕೊಳ್ಳುತ್ತ ಮತ್ತೊಂದು ಪ್ರಶ್ನೆ ಕೇಳಿದ.

'ನೀವ ಏನs ಅನ್ನರಿ, ನಮ್ಮೂರs ನಮಗ ಪಾಡ. ಓಣಿಗೋಣೀ ಹಾದಾಹಗಲಿ ಕದಾ ಕಟಿಗೊಂಡ ಇರತಾವು. ಮಂದಿ ಮಕ್ಕಳು ಭೇಟ್ಟಿ ಆಗೂವಂಗಿಲ್ಲ. ಗಾಡಿಗೋಳ ಓಡ್ಯಾಡದಿದ್ದರ ಓಣಿಗೋಣಿ ಸತ್ಹಂಗ, ಹೊಟ್ಟೆಂತೂ ಹಸೀತಿರಾಕಿಲ್ಲ. ಕುಂತಲ್ಲೇ ಕುಂಡರೂದು. ಎಷ್ಟಂತ ಪೇಪರ ಓದೂದು. ಟೀವಿ ನೋಡೂದು.

ಮಲಗೂದು? ಮಗಾ ಸೊಸಿ ಪಾಳೇದ ಮ್ಯಾಲೆ ಡ್ಯೂಟಿಗಿ ಹೋಗಾವರು. ಹೊತ್ತಂತೂ ನಿಂತಲ್ಲೇ ನಿಂತ್ಹಂಗ ಅನಸತಿತ್ತು. ಯಾಕಾದರೂ ಹ್ವಾದಿನ್ಯೋ ಅನ್ಸಿ. ನನ್ನ ಹೆಂಡತಿ ಕಣ್ಣಿಗೆ ಪರಿ ಬಂದಿದ್ದೂವ. ಅಲ್ಲೇ ಲೇಸರ ಚಿಕಿತ್ಸಾ ಮಾಡಸತೇವಂತ ಮಗಾ ಸೊಸಿ ಬಾಳ ದಿನದಿಂದ ಹೇಳಿಕೊಂತ ಇದ್ದರು. ದವಾಖಾನಿ ಬಿಲ್ ಕೇಳಿದರs ಬೀಪಿ ಇಲ್ಲದವರಿಗೂ ಬೀಪಿ ಸುರು ಆಗಬೇಕು. ಅವೇ ರೋಗಿಗಳ ಹಂತಾವ ಬರ್ತಿದ್ದುವೋ – ಡಾಕ್ಟರಗೋಳ ಹಂತಾ ರೋಗ ಐತೆಂತ ಹೇಳತಿದ್ದರೋ ಯಾರಿಗ್ಗೊತ್ತು?

ರೆಂಟೆಯಂತೆ ಬಾಗಿದ ಬೆನ್ನು, ಕೆಳಗೆ ಮಾಡಿದ ಗೋನನ್ನು ಮೇಲೆತ್ತಿ 'ಸಾವುಕಾರ ಮಂದಿಗೆ ದೊಡ್ಡ ದೊಡ್ಡ ರೋಗಗೋಳು'. ವೊದೇಕಾರ ಇರಬದ್ರಯ್ಯ ಹೇಳಿದ. 'ಸಾವುಕಾರ ಮಂದ್ಯಾಕರೀ ಏನೇನೂ ರೋಗ ಇಲದಂತಾ ಬಡವ ಮಾಸ್ತರಗ ಎರಡ ದೊಡ್ಡ ರೋಗದ ಬೀಜಾ ಹಾಕೆ ಕಳಿಸಿಬಿಟ್ಟಿದಾರರೀ ಸ್ವಾಮಿ'. 'ಅದ್ಹೆಂಗರೀ?' ವಯಸ್ಸಿನಲ್ಲಿ ಎಲ್ಲರಿಗಿಂತ ಸಣ್ಣವ ಆಗಿದ್ದರೂ ವಯಸ್ಸಾದವರ ನೆರಳಿನಂತೆ ವರ್ತಿಸುವ ಹುಲಮನಿ ಚೆನ್ನಪ್ಪ ಹೆಗಲ ಮೇಲಿನ ಹಸಿರು ಟಾವೆಲ್‌ನ್ನು ತೊಡೆಯ ಮೇಲಿಟ್ಟುಕೊಳ್ಳುತ್ತ ಕೇಳಿದ.

'ಮಾಮಾರ ನಿಮಗೂ ಹೆಂಗೂ ಅರವತ್ತ ದಾಟೇದಾವು. ಏನಂಬುದಕ್ಕೂ ಚೆಕಪ್ ಮಾಡಿಸಿಗೊಂಡ ಹೋಗರಿ.' ಸೊಸೆ ಚಾಲಿವುರದ ಹೇಳಿದಳು. ಅದಕ್ಕ ನನ್ನ ಹೆಂಡತಿ ಮಗಾ ಇಬ್ಬರೂ ದನಿಗೂಡಿಸಿದರು. ಮುಂಜೇಲಿಂದ ಸಂಜೀತನಕಾ ತವಾಸ ಮಾಡೂದು. ಪರೀಕ್ಷೆ ಮಾಡೂದರಾಗ ಹೊತ್ತ ಹ್ವಾದದ್ದು ಗೊತ್ತಾಗಲಿಲ್ಲ. ಒಬ್ಬೊಬ್ಬರ ಹಂತೇಕ ಒಂದೊಂದ ಪರೀಕ್ಷೆ. ಪರೀಕ್ಷೆದಾಗ ಪಾಸಾಗೂದು ಸಾಧ್ಯವೇ ಇಲ್ಲ. ನಾವೆಲ್ಲ ಒಂದ ತಪ್ಪ ಉತ್ತರಾ ಬಂದರೂ ಹುಡುಗೋರನಾ ಪಾಸ ಮಾಡತಿದ್ದೀವು. ಡಾಕ್ಟರಗೊಳು ಹಂಗಲ್ಲ. ಸಂಜೀಕ ರಿಪೋರ್ಟ್ ಕೊಟ್ಟರು. ಸಿಂವಿ ದೀನಸಾ ತಿನಬ್ಯಾಡರಿ. ಉಪ್ಪು ಬಹಳ ತಿನಬಾರದು ಎಂದು ಕರಾರು ಮಾಡಿದರು. 'ಶುಗರ ಮತ್ತು ಬೀಪಿ ಇದ್ದೀರಬೇಕು, ಮಾಮಾರ ನಾ ಅದಕ್ಕs ಹೇಳಿನ್ರಿ' ಎಂದಳು. ಆಗ ಕುಳಿತವರೆಲ್ಲ 'ನಾವೂ ಡಾಕ್ಟರ ಮಾರಿ ನೋಡುಲ್ಲೇ ಸಾಯುವಂಗಿಲ್ಲ ಅಂದ್ಹಂಗಾತಿ' ಎಂದು ತೀರ್ಮಾನಿಸಿದರು.

ದಿನಾಲೂ ಅವರು ಮಾತಾಡುತ್ತಿದ್ದರು. ಎಷ್ಟು ಮಾತಾಡಿದರೂ ಇನ್ನೂ ಮಾತುಗಳು ಉಳಿದಿವೆ ಎಂಬಂತೆ ಒಬ್ಬರಿಗೊಬ್ಬರು ಹೋಲಿಸಿಕೊಂಡು ನೋಡುವುದು ಮಾತಾಡುವುದು ಇದ್ದದ್ದೇ. ಅವರಷ್ಟೇ ಅಲ್ಲ. ಅವರ ಮಕ್ಕಳು, ಸೊಸ್ತ್ಯಾರು, ಹೆಂಡರು, ಅಣ್ಣ–ತಮ್ಮಗೋಳು ಎಲ್ಲರೊಂದಿಗೂ ಹೋಲಿಕೆಯ

ಮಾತುಗಳು ಹರಿದಾಡುತ್ತಿದ್ದವು. ಹೊಸ ಹೊಸ ರೂಪ ಆಕಾರ ಪಡೆದುಕೊಂಡ ಮತುಗಳು ಒಮ್ಮೆ ಹಿಂದಕ್ಕೆ ಹೋದರೆ. ಇನ್ನೊಮ್ಮೆ ಮುಂದಕ್ಕೆ ಹೋಗುತ್ತಿದ್ದವು. ಮತ್ತೆ ಒಮ್ಮೆ ನಿಂತಲ್ಲೇ ನಿಂತು ಬಿಡುತ್ತಿದ್ದವು. ಕಳ್ಳು ಬಳ್ಳಿಯಿಂದ ವೈರಿಯತನಕಾ, ಭೂಮಿಯಿಂದ ಸೀಮಿತನಕಾ ಪೊಲಮನಿಯಿಂದ ಮಳೆ-ಬೆಳೆಯ ತನಕಾ. ಪಂಚಾಯ್ತಿಯಿಂದ ಪಾರ್ಲಿಮೆಂಟತನಕ ಮಾತುಗಳು ಹಾಸು ಹೊಯ್ಯುತ್ತಿದ್ದವು. ಮಳೆಗಾಲ ಮುಗಿದು ಚಳಿಗಾಲ ಬಂದಿತ್ತು.

'ಇದೇನ್ರಿ ಸ್ವಾಮಿ ಥಂಡಿ ದಿನದಾಗ ಮಳಿ ಆಗಾವರಂಗ ಮಾಡ ಆಗಾಕ್ಹತ್ತೆಲ್ಲ' ಯಲ್ಲಪ್ಪ ಆತಂಕಗೊಂಡು ಕೇಳಿದ. 'ಇದು ಶೂನ್ಯ ಮಾಸ. ಸೂನೇದ ತಿಂಗಳಂತಾರು. ಈಗ ಮಳಿ ಬೀಜ ನಿಂದರತಾವು. ಖರೇ ಅಂದರ ಈಗ ಮಳಿ ಆಗಬಾರದು. ಮಂಜನು ಬೀಳಬಾರದು.' ಇರಬದ್ರಯ್ಯನ ಮಾತನ್ನು ತುಂಡರಿಸಿ; 'ಮಳಿಗೂ ಬೀಜ ಇರತಾವು? ಮಳಿ ಬೀಜ ಪೆಂತಾವರೀ, ಅವುನ್ನ ಹಿಡ್ಯಾವರ್‍ಯಾರು ಬಿತ್ತಾವರ್‍ಯಾರು. ಎಲ್ಲಿರತಾವರೀ?' ಆಶ್ಚರ್ಯದಿಂದ ಪ್ರಶ್ನೆಗಳ ಸುರಿಮಳೆ ಸುರಿಸಿದ ಯಲ್ಲಪ್ಪ. 'ಮಳಿಗೆ ಇರುವ ಹೆಸರುಗಳು ಪ್ರತಿದಿನ ಬರುವ ನಕ್ಷತ್ರಗಳ ಹೆಸರುಗಳೂ ಎರಡೂ ಒಂದೇ ಇರತಾವು. ಮಾತಿಗಿ ಬಂದ ಹೇಳಬೇಕೆಂದರ ಅಶ್ವಿನಿ ಮಳಿಯಿಂದ ಇಸಕ್ಕಿ ಮಳಿತಾನಕ ಬರುವ ನಕ್ಷತ್ರಗಳ ಹೆಸರಿನಿಂದ ಮಳೆಗಳನ್ನು ಕರೆಯುತ್ತಾರೆ. ಇವು ಮುಂಗಾರಿ ಮತ್ತ ಹಿಂಗಾರಿ ಬೆಳಿಗೆ ಅನುಕೂಲ ಆಗುವ ಮಳೆಗಳು. ಈ ನಕ್ಷತ್ರ ಇಂದ ಇರೂದು ರೋಹಿಣಿ ನಕ್ಷತ್ರ ಇಂದೇನಾದರೂ ಮಳಿ ಉದರಿದರ ಮುಂದಿನ ಮುಂಗಾರಿ ಹಂಗಾಮಿನ್ಯಾಗ ರೋಣಿ ಮಳಿ ಆಗೂದಿಲ್ಲ. ಹಿಂಗ ಐದಾರ ದಿನಾ ಮಳಿ ಉದರ್‍ಯಾಡಿಕೊಂತ ಇದ್ದರ ರೋಣಿ ಮಳಿಯಿಂದ ಹಿಡದ ಮಗಿ ಮಳಿ ತನಕಾ ಮಳಿ ಆಗೋದಿಲ್ಲಾ. ಅಂದರ ಮುಂದಿನ ವರಸ ಮುಂಗಾರಿ ಬೆಳಿ ಬರೂದಿಲ್ಲ. ಯಾಡ ವರಸದ ಹಿಂದ ಮುಂಗಾರಿ ಹಿಂಗಾರಿ ಬರಗಾಲ ಆಗಿತ್ತ. ಯಾಕಂದರ ಅದರ ಹಿಂದಿನ ವರಸ ಸೂನೇ ತಿಂಗಳದಾಗ ಹನ್ನೆರಡ ದಿನಾ ಒಂದಿನಾನೂ ಬಿಡದಂಗ ಮಳಿ ಜಿಟಿ ಜಿಟಿ ಉದರ್‍ಯಾಡಿತ್ತ.'

'ಇದೇನ ಕಟ್ಟು ಕಥಿಯಲ್ಲ. ಖರೇನ ಆದ ಸಂಗತಿ ಏನಪಾ. ನನ್ನಜ್ಜ ಅಂವೇನ ಕಲತಾಂವಲ್ಲ. ಮೇಲತಾರಿ ನೋಡತ್ತಿದ್ದಂತ. ಉಗಾದಿ ಅಮಾಸಿ ಹಿಂತಾ ದಿನ ಬರತೈತಿ. ಶೀಗಿ ಹುಣುವಿ ಹಿಂತಾ ದಿನ ಬರತೈತಿ ಅಂತ ಹೇಳತಿದ್ದ. ಅದ ದಿನಾ ಅದ ವ್ಯಾಳೇಕ ಸತ್ತ. ಮಳೀದು ಬೀಜದ್ದು ಇನ್ನೊಂದು ಕಥಿ ಮಜಾ ಐತಿ. ಅದನ್ನೂ ಅಂವನೇ ಹೇಳಿದ್ದ. ಏನಪಾ ಅಂದರ ಇಡೀ ಭೂಮಂಡಲದಾಗ

ಒಂದಿನಾನೂ ತಪ್ಪದಂಗ ಯಾವುದರ ದೇಸದ ಯಾವುದರ ಮೂಲ್ಯಾಗ ಮಳಿ ಆಗೂದು. ಯಾ ದಿನ ಮಳಿ ಆಗೂದುಲ್ಲಲ್ಲ. ಆ ದಿನಾ ಹುಟ್ಟಿದ ಪ್ರಾಣಿ, ಗಿಡಾ, ಮರಾ ಫಲಾ ಕೊಡೂದುಲ್ಲಾ. ಆ ದಿನಾ ಹುಟ್ಟಿದ ಗಂಡಿಗೆ ಗಂಡಸ್ತನಾ ಇರೂದಲ್ಲ. ಹೆಣ್ಣಿಗೆ ಬಂಜಿತನಾ ಬರೂದು ಅಂತ ಹೇಳತಿದ್ದಾ.' ಗೋನು ಮೇಲೆ ಮಾಡಿ ಇಷ್ಟೋತ್ತನಕಾ ಮಾತಾಡಿದ್ದರಿಂದ ಆಯಾಸವಾಗಿದೆ ಎಂದು ಗೋನು ಕೆಳಗೆ ಮಾಡಿ ಮಾತು ಮುಗಿಸಿದ.

'ಅದೇನೋ ಮಾರಾಯಾ. ಅದೆಂಥಾ ಬೀಜೋ ಏನೋ, ಹೆಂಥಾ ದಿನಾ ಹುಟ್ಟತೈತೋ ಗೊಡ್ಡ ಬೋಳೂದಲ್ಲಾ, ಕಾಂಗರೇಸೋ, ವಾಂಗರೇಸೋ ಅಂತಾರಲ್ಲಪ್ಪಾ ಹಾದಿ-ಬೀದಿ, ಹೊಲ ಗದ್ದಿ ಎಲ್ಲ್ಯೂ ಹುಸಿ ಹೋಗೂದಿಲ್ಲಾ. ಒಂದಕ್ಕ ಸಾವಿರ ಬೀಜಾ ಮಾಡೆ ಎಲ್ಲಿ ಬೇಕಾದಲ್ಲಿ ನೋಡಿದರೂ ಹುಟ್ಟೂದು ಬೆಳಿಯೋದು ನೋಡಿದರ ಅದು ಹುಟ್ಟಿದಲ್ಲೇ ಯಾವುದರ ಬೆಳಗೋಳ ಬೀಜಲ್ಲ. ಹುಲ್ಲ ಬೀಜಗೋಳು ಹುಟ್ಟೂವಂಗಿಲ್ಲ. ಯಾವ ಕಂಡ ಹಿಡಿದ್ದಾನೋ ಬೇಬರಿಸಿ ಬೀಜಾ. ನಮ್ಮ ಹೊಲದಾಗ ತಾನಾಗೇ ಹುಟ್ಟಿ ಬೆಳೆಯೂ ಹಕ್ಕರಕಿ, ಹಸರಾಣಿ, ಕಿರಕಸಾಲಿ, ಹರಿವಿ ಹಸರತಪ್ಪಲಾ ಹುಟ್ಟದಂಗ ಮಾಡೇತಿ. ದನಾ-ಕರಾ ತಿನ್ನು ಮೇಂವನು ಅಲ್ಲ. ಅದನ್ನ ಕೈಲೇ ಹಿಡದ ಕೀಳೂವಂಗಿಲ್ಲ. ಅದರಾಗ ಅಡ್ಯಾಡಿದರ ಚರಮ ರೋಗ ಬರತಾವು. ಯಾಂವ ತಂದಿದ್ದಾನಪಾ ಹಿಂತಾ ಕೆಟ್ಟ ಬೀಜಾ.' ಯಲ್ಲಪ್ಪ ರೋಷದಿಂದ ಹೇಳಿದ್ದ.

'ಬೆಳಿಯೂ ಭೂಮ್ಯಾಗ ಪ್ರಳಯದಾ ಕಸಾ' ಅಂತ ಅಣ್ಣ ಬಸವಣ್ಣ ಹೇಳಿದಾನಲ್ಲ. ಹಂಗs ಇದೊಂದು ಪ್ರಳಯದ ಕಸ. ಇದು ಪರದೇಶದಿಂದ ಬಂದದ್ದು. ಅಮೇರಿಕಾದಿಂದ ಗೋಧಿ ತರಿಸಿಕೊಂಡಾಗ ಗೋಧಿ ಕೂಡ ಈ ಕಸದ ಬೀಜ ಬಂದ ನಮ್ಮ ಬೆಳೆಯೂ ಭೂಮಿ-ಸೀಮಿ ತುಂಬಿಕೊಂಡ್ಯೆತಿ', ಮಾಸ್ತರು ಹೇಳುತ್ತಿದ್ದಂತೆ ಇರಬದ್ರಯ್ಯ 'ಅಡಿವ್ಯಾನ ದೆವ್ವ ಬಂದ ಗುಡ್ಯಾನ ದೇವರಾ ಓಡಿಸಿತೆಂತ ಹಂಗಾತಿ. ಈಗ ಬಂದಿರೋ ಬೀಟಿನೋ ಬ್ಯಾಟಿನೋ ಅಂತಾರಲ್ಲ. ಆ ಹತ್ತಿ ಬೀಜನು ಪರದೇಶದ್ದಂತ. ನಮ್ಮ ನಾಡಿಗ್ಯಾ ತಳಿಗೋಳ ಹೆಂತಾ ಚೆಲೋ ಬೆಳಿತಾವು. ಅವುನ್ನ ಬಿಟ್ಟ ಪರದೇಶಿ ಸೂಳಿಮಕ್ಳು ಯಾಕ ಪರದೇಶಿ ಬೀಜಕ ಗಂಟಬಿದ್ದಾರೋ.' ಎಂದು ಮರುಕದಿಂದ ಹೇಳಿದ. ಆಗ ಮಾಸ್ತರು 'ಹಾವೇರಿ, ರಾಣಿಬೆನ್ನೂರ ಕಡೆ ಈ ಬೀಟಿ ಹತ್ತಿ ಹುಟ್ಟಿ ಎದಿಯುದ್ದಾ ಬೆಳೆದರೂ ಒಂದ ಕಾಯಿಲ್ಲಂತ, ಹೂವು ಮಿಡಿ ಇದ್ದರ ಕಾಯಿ ಆದಾವು. ಇನ್ನ ಹತ್ತಿ ಎಲ್ಲಿಂದ ಬಂದೀತು. ಅಲ್ಲೀ ರೈತರು ಹೋರಾಟ ಮಾಡ್ಹಾಕತ್ತಿದ್ದಾರಂತ.

ಪೇಪರದಾಗ ಓದಿನ್ನಿ' ಎಂದು ಹೇಳುತ್ತಿದ್ದಂತೆ 'ಘಾತ ಆತೆಲ್ರೀ ಮಾಸ್ತರs' ಎಂದು ಯಲ್ಲಪ್ಪ ಹೌಹಾರಿದ. 'ಈಗ ನೂರಾ ಎಂಟು ಕಂಪನಿ ಬೀಜ ಬಂದಾವು. ನೀವು ಯಾವ ಕಂಪನಿ ಬೀಜಾ ತಂದೀರ್‍ಯೋ ಹೊಕ್ಕ ಹೋಗಿ ನೋಡಿರಿ.' 'ಏನಾಗೇತ್ಯೋ' ಎಂದು ಮಾಸ್ತರು ಸಮಾಧಾನದ ಮಾತಾಡಿದರು.

'ಎಮ್ಮಿ ತಿನ್ನು ಹಸಿ ದಂಟ ಬಾಯಾಗಿಂದ ಹಾದ ಮುಕಳ್ಯಾಗ ಬರತೈತೇನೋ ಅಂತ ನೋಡಿಕೊಂತ ನಿಲ್ಲು ಶ್ಯಾನ್ಯಾ ಮಂದಿ ರೈತರಿಗೆ ಬಾಳ ಉತ್ಪನ್ನ ಬರತೈತಿ. ಲಕ್ಷಗಟ್ಟಲೆ ಲಾಭ ಆಗೋದು ಅಂತ ಆಸೆ ಹಚ್ಚಿ ಮೋಸಾ ಮಾಡತಾರು. ನಾಯಿ ರೊಟ್ಟಿ ಬಾಯಾಗಿ ಒಡಕೊಂಡ ಕೆರಿದಂಡಿ ಮ್ಯಾಲ ಹೊಂಟಾಗ ಕೆರಿ ನೀರಾಗ ಮತ್ತೊಂದ ರೊಟ್ಟಿ ಐದ್ವೈತೆಂತ ತನ್ನ ಬಾಯಿಗಿನ ರೊಟ್ಟಿ ಕೆರಿ ನೀರಾಗ ಚೆಲ್ಲಿತೆಂತ. ನಮ್ಮ ರೈತರ ಗತಿನೂ ಹಿಂಗಾತಿ. ಗೊಡ್ಡ ಸೂಳಿಮಕ್ಕಳು ಗೊಡ್ಡ ಬೀಜಾ ಕೊಟ್ಟರಲ್ಲೋ.' ಎಂದು ತನ್ನ ಹೊಲದಲ್ಲಿ ಬೆಳೆದ ಹತ್ತಿ ಬೆಳಿ ನೋಡೆ ಹೊಲದಾಗಿನ ಗಿಡಕ್ಕ ಉರಲ ಹಾಕ್ಕೊಂಡ ಸಾಯಬೇಕಂತ ಮಾಡಿದ್ದ ಯಲ್ಲಪ್ಪ ತನ್ನ ಮಗನನ್ನು ಕೈಯಲ್ಲಿರುವ ಬಡಿಗೆಯಿಂದ ಕಾಲು ಮುರಿಯುವಂತೆ ಹೊಡೆಯಬೇಕೆಂದು ಮನೆಗೆ ಬಂದಿದ್ದ.

ರಾಮೂ ಬೀಜದ ಅಂಗಡಿಯವನಿಗೆ ತನ್ನ ಹೊಲ ತೋರಿಸಬೇಕೆಂದು ಹೋಗಿದ್ದ. ಬೀಜದ ಅಂಗಡಿಯವ 'ನಾ ಕೊಟ್ಟ ಬೀಜ ಹುಟ್ಟಿದರೆ ಮುಗೀತಿ. ಹುಟ್ಟಿ ಬೆಳದ ಮ್ಯಾಲ ಹೂವು ಕಾಯಿ ಆಗಿಲ್ಲ ಅಂದರ ಬೆಳೆಸಾವರ ತಪ್ಪ. ಹೊಲದಾಗೇನರ ಮಿಸ್ಟೇಕ್ ಇರಬೇಕೆ'ಂದು ಹೇಳಿದ್ದ. ರಾಮೂಗೆ ಸಿಟ್ಟ ತಡೆಯದೆ ರೋಷಗೊಂಡು ಕೇಳಿದಾಗ 'ಕಂಪನ್ಯಾವರ್‍ನ ಕೇಳ್ಬೇಕು' ಎಂದಿದ್ದ. ತನ್ನಪ್ಪನಿಗೆ ಮುಖ ತೋರಿಸಲಾಗದೆ ರಾಮೂ ಮನೆಗೆ ಬಂದಿರಲಿಲ್ಲ. ಯಲ್ಲಪ್ಪ ತನ್ನ ಅಳಿಯನಿಂದ ಕಂಪನಿ ಬೀಜಾ ತಯಾರಿಸು ಜಾಗಾ ಎಲ್ಲೇತಿ ಅನ್ನೋದು ಕೇಳಿ. ಅಲ್ಲಿಗೇ ಹೋಗಿದ್ದ.

'ಒಳಗ ಬಿಡೋ' ಬಡಿಗೆಯನ್ನು ಎತ್ತಿ ಹೇಳಿದ.

'ಬಿಡೂದುಲ್ಲಾ'

'ಯಾಕ ಬಿಡೂದುಲ್ಲೋ?'

'ಕಂಪನಿ ಮೀಟಿಂಗ ನಡದೈತಿ. ಅದೂ ರೈತರ ಸಲುವಾಗೇ ಮೀಟಿಂಗು. ಯಾರನ್ನು ಒಳಗಿ ಬಿಡಬಾರದಂತ ಸಾಹೇಬರ ಹೇಳಿದಾರು.'

'ರೈತರಿಲ್ಲದ ಮೀಟಿಂಗ ಹೆಂತಾದ್ದೋ?'

'ನೀ ಏನ ರೈತನs, ಹೆಂತಾ ರೈತ?'

'ಹೆಂಗ ಕಾಣಸ್ತೇನು, ಹೆಂತಾ ರೈತಂದರs?'

'ಸಣ್ಣ ರೈತೋ, ದೊಡ್ಡ ರೈತೋ, ಹಿಂದುಳಿದ ರೈತನೋ, ಪ್ರಗತಿಪರ ರೈತನೋ, ಹೈಟೆಕ್ ರೈತನೋ, ಸಾವಯವ ರೈತನೋ, ಕಂಪನಿ ರೈತನೋ, ನೀ ಮಾಡುತ್ತಿರುವುದು ರಾಸಾಯನಿಕ ಕೃಷಿಯೋ, ಸ್ವಂತ ಕಮತ ಐತ್ಯೋ, ಯಾರಿಂದಲಾದರೂ ಕಮತಾ ಮಾಡಸ್ತೀಯೋ, ಗುತ್ತಿಗೆ ರೈತನೋ?' ಎಂದು ಪ್ರಶ್ನೆಗಳ ಸುರಿಮಳೆ ಸುರಿಸಿದ.

'ಏನಲೇಪಾ ನನ್ನ ಮುಂದ ಹುಟ್ಟಿದ ಕರಾ ನೀನು. ಬಾಳ ಕಲ್ತೀಪಾ. ಮೇಟಿ ಒಕ್ಕಲಾ. ಸಣ್ಣ ಒಕ್ಕಲಾ, ದೊಡ್ಡ ಒಕ್ಕಲಾ, ಒಕ್ಕಲಿಗ್ಯಾರು, ಕೂಡ ಒಕ್ಕಲಿಗ್ಯಾರು, ಹಿರೇ ಕಮತಿಗ್ಯಾ ಅಂತ ಹಿಂಗೆಲ್ಲಾ ರೈತರನ್ನು ಹೆಸರಗೊಂಡ ಕರೀತಿದ್ದೀವು. ರೈತರದೆಲ್ಲಾ ಜಾತಿ ಒಂದು. ಕುಲಾ ಒಂದು. ಹೊಲಿ ಹದಿನೆಂಟ ಜಾತ್ಯಾವರೆಲ್ಲಾ ಕಮತಾ ಮಾಡತಾರಲ್ಲ. ಅವರದೆಲ್ಲ ಒಂದ ಜಾತಿ, ಅದು ರೈತರ ಜಾತಿ' – ಯಲ್ಲಪ್ಪ ವಿವರಣೆ ಕೊಟ್ಟ.

'ನೀ ರೈತ ಅನ್ನೂದಕ್ಕ ನಿನ್ನ ಹಂತೇಕ ಆಧಾರ ಏನೈತಿ?'

'ನನ್ನ ಹೊಲಕ್ಕ ಬಾ ತೋರಸ್ತೇನು' ಎಂದು ಮೀಸೆ ಹುರಿಮಾಡುತ್ತ ಹೇಳಿದ. 'ನಿನ್ನ ಹೊಲಕ್ಕ ನಾ ಯಾಕ ಬರ್ಲಿ' ಎಂದು ಕಾವಲುಗಾರ ಹೇಳುತ್ತಿದ್ದಂತೆ ಒಬ್ಬ ಕರಿಕೋಟಿನವ ಕುದುರೆಯಂತೆ ಟಕ್ ಟಕ್ ಹೆಜ್ಜೆ ಸಪ್ಪಳ ಮಾಡುತ್ತ ಬಂದಿದ್ದ. 'ಹಿರ್‍ಯಾರ ಅತ್ಲಾಗ ಸರೀರಿ. ನಮ್ಮ ಸಾಹೇಬರ ಬಂದರು.' ಎಂದವನೇ ಎದ್ದು ನಿಂತವನೇ ಸಲಾಮು ಹೊಡೆದು ಕದ ತೆಗೆದು ಅವನನ್ನು ಒಳಗೆ ಬಿಟ್ಟು, ಕದ ಮುಚ್ಚು ವಷ್ಟರಲ್ಲಿ ಈತ ಅವನ ಹಿಂದೆ ಒಳಗೆ ಹೊರಟಿದ್ದವನನ್ನು ಮತ್ತೆ ತಡೆದು ಕದ ಹಾಕಿಯೇ ಬಿಟ್ಟ.

'ಅವೆಂಥಾ ರೈತಲೇ, ಕರಿ ಬೂಟಾ, ಕರಿ ಕೋಟಾ, ಕರಿ ಚೊನ್ನ ಹಾಕ್ಯೊಂಡ ಕೊಳ್ಳಾಗೊಂದ ಅವನ ಫೋಟೋ ಜೋತಾಡಿಸಿಗೊಂತ, ಕುತಿಗ್ಯೊಂದ ಕರಿ ಅರಬಿ ಪಟ್ಟಿ ಕಟಿಗೊಂಡ ಎದಿಮ್ಯಾಲ ಜೋತಾಡಿಸಿಗೊಂತ. ತಲಿ ಮ್ಯಾಲ ಏನೂ ಇಲ್ಲ, ಬಕನೇತಿ ಬಾವಾ, ಕರೆಕ್ಕಿಯಂಥಾವಾ, ಮಕದ ಮ್ಯಾಲ ಮೀಸಿ ಇಲ್ಲಾ, ಹಿಂಥಾವಾ ಕಮತಾ ಮಾಡೂದ ಒತ್ತಾಟೆ ಇರಲಿ, ಹೊಲದ ಗಾಳಿನೂ ಬಡದಿಲ್ಲಾ. ಖರೇ ರೈತನ್ನ ನೋಡೆ 'ವೊವ್ವ' 'ವೊವ್ವ' ಅಂತ ನಾಯಿಯಂಗ

ಒವರತಿ. ಅಂವನ್ನ ಕಂಡ ನಾಯಿಯಂಗ ಬಾಲಾ ಗುಂಡಾಡಸತಿ. ಕಂಪನಿ ಕಂಪನಿ ಅಂತೀ, ನಿನ್ನ ಕಂಪನಿ ಹೆಂಥಾದಲೇಪಾ?'

'ಕಂಪನಿ ಅಂದರ ಅರ್ಧಾ ನಮ್ಮ ದೇಶದ್ದು, ಅರ್ಧಾ ಪರದೇಶದ್ದು. ಅದಕ್ಕs ಇಂಡೋ ಅಮೇರಿಕ ಅಂತ ಇದರ ಹೆಸರು. ನೀರು, ಹೊಲಾ, ಕರೆಂಟಾ ಮತ್ತು ದುಡಿಯುವ ಮಂದಿ ನಮ್ಮ ದೇಶದ್ದು. ಹಣ, ಬಂಡವಾಳ ಮತ್ತು ತಂತ್ರಜ್ಞಾನ ಅಮೇರಿಕಾದ್ದು. ಇಲ್ಲಿ ರೈತರ ಸೇವಾ ಮಾಡೂದು ಕಂಪನಿಯ ಧ್ಯೇಯ. ಚೊಲೋ ಬೀಜಾ ಕೊಟ್ಟ ರೈತರ್ನ ಉದ್ಧಾರ ಮಾಡೇತೆಂತ ನಮ್ಮ ಕಂಪನಿಗೆ ಸರಕಾರ ಪ್ರಶಸ್ತಿ ಕೊಟ್ಟಿದೆ' ಎಂದು ಅಭಿಮಾನದಿಂದ ಹೇಳಿದ.

'ಭೂಮಿ ತಾಯಿ ಮ್ಯಾಲಿ ನೆಂಬಿಗಿ ಇಟ್ಟ ಹಗಲಿ ರಾತರಿ ದುಡದ ದುಡದ ನನ್ನ ಮೈಕೈಯಾಗಿನ ಎಲಬ ಸಂವದ ಹ್ವಾದುವ. ಒಂದ ಮನಿ ಕಟ್ಟಿಸಿಗೊಳಾಕ ಆಗಿಲ್ಲ. ಅಷ್ಟs ಯಾಕ ಇದ್ದ ಮನಿ ಗಟ್ಟಿ ಮಾಡಿಕೊಳಾಕ ಆಗಿಲ್ಲ. ಗೊಡ್ಡ ಬೀಜಾಕೊಟ್ಟ ಹೊಲಾ ಬಡ್ಡ ಆತಿ. ಅದ್ಯಾಂವಲೇ ಈ ಕಂಪನಿಗೆ ಚೊಲೋ ಅಂದಾಂವಾ? ನಿಮ್ಮ ಪಾರಮ್ಮದಾಗ ಒಂದ ಜವಾರಿ ಗಿಡಾ ಇಲ್ಲಾ, ಎಲ್ಲಾ ಕಲಮ ಕಟ್ಟೀದುವ. ಮೂಲ ಬೇರು ಜವಾರಿ. ಮ್ಯಾಲ ಇರೂ ಗಿಡಾ ಕಂತ್ರಿ ಜಾತೀದು. ಬೆರಿಕಿ ಮಂದಿ ಕೂಡೇ ಬೆರಕಿ ಬೀಜಾ. ಬೆರಕಿ ಗಿಡಾ ತಂದೀರಿ. ಏನೆಲ್ಲಾ ಕಲಿಸೆ ರೈತರ್ನ ಮಳ್ಳ ಮಾಡೆ ಕಳ್ಳೆ ಮಳ್ಳೆ ಆಡಿಸೇ ಕೈ ಬಿಟ್ಟೀರಿ. ನಿಮ್ಮ ಸಾವಕಾರಿಕಿ ಎಲ್ಲಿಂದ ಬಂತಲೇ ಮಗನs. ರೈತರಿಗೆ ಮೋಸ ಮಾಡಿ ಗಳಿಸಿದೀರಿ. ದುಡ್ಡ ಮಾಡಾಕ ರೈತರಿಗೆ ಕಲಿಸಲಿಲ್ಲಾ. ಸಾಲ ಮಾಡಾಕ ಕಲಿಸೀರಿ. ಕಲಿತಾವರಿಲ್ಲದ ಕಾಲದಾಗ ಕಣದಾಗ ಹಂತಿ ತಿರಗತಿತ್ತು. ಸಾಲಾ ಸಮದಾ ಮಾಡೀರಾಕಿಲ್ಲಾ. ಕಬ್ಬಿನ ಗಾಣಾ ತಿರುಗುತ್ತಿತ್ತು. ಕೆಣಿ ಬೆಲ್ಲಾ ಕೆರಿಕಿ ಬೆಲ್ಲಾ ಕಬ್ಬಿನ ಹಾಲಾ ಬಂದಾವರಿಗೆಲ್ಲಾ ಹಂಗs ಕೊಡತಿದ್ದೀವು. ಭೂಮಿ ತಾಯಿಗೆ ನುವ್ವ ಆದೀತಂತ ಕಟ್ಟಿಗಿ ನೇಗಲಾ ಹೊಡೀತಿದ್ದೀವು. ಅದೇನೋ ಹಸರ ಬ್ಯಾಗಡೀದು ದೊಡ್ಡ ಗೂಡಾವಣದಂಗ ಕಾಣತೈತೆಲ್ಲ, ಅದರಾಗೇನರ ಬಂಗಾರದ ಗಿಡಾ, ರೊಕ್ಕದ ಗಿಡಾ ಬೆಳಿಸಿದಿರೇನ?' – ಯಲ್ಲಪ್ಪ ಕುತೂಹಲದಿಂದ ಕೇಳಿದ.

'ಅದು ಗ್ರೀನ್ ಹೌಸ್, ಅಂದರs ಹಸರ ಮನಿ. ಹೂವಿನ ಗಿಡಾ, ತರಕಾರಿ, ಬಾಳಿ ಸಸಿ, ಮೇಣಸಿನ ಸಸಿ ತಯ್ಯಾರ ಮಾಡತಾರು. ಬಣ್ಣ ಬಣ್ಣದ ಡೊಣ್ಣೆಗಾಯಿ, ಹೂವು ಮತ್ತು ತರಕಾರಿ ಬೆಳಿತಾರು. ಬಿಸಲ, ಗಾಳಿ, ಮಂಜು ಏನೂ ಬೀಳದಂಗ ಬಲಿ ಹಾಕಿದಾರು.' ಕಾವಲುಗಾರ ವಿವರಣೆ ಕೊಟ್ಟ. ಅಷ್ಟಕ್ಕೆ ಸುಮ್ಮನಾಗದೆ ಯಲ್ಲಪ್ಪ 'ಗಾಳಿ, ಬಿಸಲಾ, ಥಂಡಿ, ಮಳಿ, ಬೆಳದಿಂಗಳಾ ಏನೂ

ಬಡೀದಂಗ ಬೆಳಿ ಹೆಂಗ ಬೆಳೆಸ್ತಾರೋ? ಗಾಳಿ ಬಿಸಲಾ, ಮಳೆ ಬೆಳಿಗೂ ಬ್ಯಾಡಾ. ನಿಮಗೂ ಬ್ಯಾಡಾ, ಹಂತಾ ಕಾಳುಕಡಿ ತಿಂದಾವರು ಕಮತಾ ಹಾಳ ಮಾಡೀರೆಲ್ಲೋ, ಗುಂಡದೆನಿ, ಗಟ್ಟಿದೆನಿ, ಜ್ವಾಳದ ಬೀಜಗೋಳಿದ್ದವ. ನಮ್ಮ ಹೊಲಕ್ಕ, ನಮ್ಮ ಹವಾಕ್ಕ ಹೊಂದಲಂತಾ ಬೀಜಾ ತಂದಿರಿ. ಚಿತ್ರದಾಗಿನ ಹತ್ತಿ ಗಿಡಾ, ಹೂವಾ, ಕಾಯಿ, ಹತ್ತಿ ತೊಳಿ ಏನ ಚೆಂದ ಅದಾವಂತ ರೈತರು ಮಳ್ಳ ಆದರು. ನಿಮ್ಮನ್ನ ಹಂಗs ಬಿಡೂದುಲ್ಲಾ, ಕಾಲಮರಿಲೆ ಬಡದ ಗಳೇ ಹೊಡೆದದ್ದು, ಬೀಜದ್ದು, ದುಡದದ್ದು, ಗೊಬ್ಬರದ್ದು ಎಲ್ಲಾ ಖರ್ಚು ವಸೂಲ ಮಾಡತೇನು' ಎಂದು ಕಾಲಾಗಿನ್ನುವ ಕೈಯಾಗ ಹಿಡಿದಿದ್ದ.

'ನೀವು ಯಜಮಾನರ ಅದೀರಿ, ನಾನೂ ನೌಕರಿ ಮಾಡಾಂವಾ. ಅವರ ಕೈಯಾನ ಆಳ. ನನ್ನ ಬಡದರ ಏನಾಗದು. ಕೋಟಿಗಟ್ಟಲೆ ಲಾಭಾ ತಿನ್ನು ಕಂಪನ್ಯಾವರ್ನ ಹಿಡಿದ ಬಡೀರಿ. ಆದರs ಸರಕಾರಾ ಪೋಲೀಸರು ಕಂಪನ್ಯಾವರ ಕಿಸೇದಾಗ ಅದಾರನ್ನುದು ನೆನಪಿನ್ಯಾಗಿಟಗೊರ್ರಿ', ಎಂದು ಸಮಾಧಾನದಿಂದ ಹೇಳಿದ ಕಾವಲುಗಾರ. 'ಈಗ್ಡೆಂಗೆ ಮೆತ್ತಗಾದಿ. ಸೃಷ್ಟಿ-ಮಾಡೂ ಬ್ರಹ್ಮರಂತಾ ರೈತರಿಗೆ ಬಸ್ಮಾಸುರನಂತಾ ಕಂಪನ್ಯಾವರು ಗೊಡ್ಡ ಬೀಜಾ ಕೊಟ್ಟೀದಾರಲ್ಲ. ಅವರ ಹೆಂಡರು ಮಕ್ಕಳು ಬಂಜಿ ಆಗಲಿ.' ಹಿಡಿ ಶಾಪ ಹಾಕಿದ್ದ. ಇಳಿ ವಯಸ್ಸಿನಲ್ಲೂ ರಕ್ತ ಬಿಸಿಯಾಗಿ ರೋಷದಿಂದ ಕುದಿಯುತ್ತಿತ್ತು. ಅಷ್ಟರಲ್ಲಿ 'ಎಲ್ಲಿ ಅದಾರಲೇ ಆ ತುಡುಗ ಸುಳಿಮಕ್ಳು. ಅವರ ರುಂಡಗಳನ್ನು ಚೆಂಡಾಡುವೆವೆ'ಂದು ನೂರಾರು ರೈತರ ಹಿಂಡು ಬಡಿಗೆ, ಕೊಡಲಿ, ಕುಡಗೋಲು ಹಿಡಿದು ಬಂದಿದ್ದರು. ಕಾವಲುಗಾರನನ್ನು ಎಳೆದೊಗೆದರು. ಬಾಗಿಲನ್ನು ಒದ್ದು ಕೆಡವಿ ಒಳಗೆ ನುಗ್ಗಿದರು.

ಮಿಟಿಂಗು ಈಟಿಂಗು ಮಾಡುವವರನ್ನೆಲ್ಲಾ ಬಡಿಗೆಗಳಿಂದ ಬಡಿದರು. ಕೊಡಲಿ ಬೀಸಿದರು. ಕೋಟು ಟಾಯ್‌ಗಳನ್ನು ಕಿತ್ತೆಸೆದರು. ಕಂಪ್ಯೂಟರ್‌ಗಳನ್ನು ಎತ್ತಿ ಒಗೆದು ಪುಡಿ ಪುಡಿ ಮಾಡಿದರು. ಪೋಲೀಸರ ಗಾಡಿ ಬಂದೇ ಬಿಟ್ಟಿತ್ತು. ಅವರ ಕೈಯಾಗಿನ ಬಡಿಗೆಗಳು ಮಾತಾಡತೊಡಗಿದವು. 'ಕೋರ್ಟು, ಕಛೇರಿ, ಪೋಲೀಸರು ಇದಕ್ಕs ಇದ್ದಾರ? ಕಂಪನ್ಯಾವರ ತಪ್ಪ ಮಾಡೀದಾರು. ರೈತರು ಮೋಸ ಹೋಗಿದಾರು. ರೈತರ ಪರವಾಗೇ ಇರಬೇಕಿತ್ತು. ಕೆಟ್ಟ ಬೀಜಕ್ಕ ಹುಟ್ಟಿದಾವರು ಕೆಟ್ಟದ್ದರ ಕಡೆ ಆಗಾವರು' – ಮರುಕದಿಂದ ಎಲ್ಲಪ್ಪ ಮುಖ ಕೆಳಗೆ ಮಾಡಿದ್ದ.

■

ಬಹುಮಾನಿತ
ಸಣ್ಣಕತೆ

ಊರುಮುಂದ್ಲಿ

● ಟಿ. ಗೋವಿಂದರಾಜು

ಝಾಡಿಸಿ ಒದ್ದಿದ್ಕೆ, ಜಂತೆಗೆ ತಗ್ಲಿ, ಮೂಲೆಗೆ ಕೊಯ್ಕಂತ ಮುದ್ರುಸುತ್ಕಂಡ್ ಬಿದ್ದ. ದಡುಕ್ಕುನ ಎದ್ದು, ಅದೇ ಮಕ್ಕೆ ವಾಟ ಕಿತ್ತು.

ಸಕ್ಕಟೆ ಸರೊತ್ತು, ಎಲ್ಲಾ ಉಂಡೂ ತಿಂದೂ ಹಾಲ್ಗೆ ಎಪ್ಪಾಕಿದಂಗೆ ಮಕ್ಕಂಡಿದ್ರು. ಅವರವರ ಆಯಾಸ, ಥರಾವರಿ ಗೊರಕೇ ಸದ್ನಾಗೆ ಈ ಅಬ್ಬರದ ಸದ್ದನ್ನ ಕೇಳೋ ಸ್ಥಿತೀಲಿ ಯರೂ ಇರಲಿಲ್ಲ. ಆದ್ರೆ, ಒಬ್ಬಳಿದ್ಲು, ಗಬ್ಬೂರು ಸಿಗವ್ವ ಅವಳಿಗೆ ರಾತ್ರೆನಾಗ ನಿದ್ದೆ ಬರೋದು ಕಷ್ಟವಾಗಿತ್ತು. ಎಲ್ಲಾರೂ ಮನಗಿದಾಗ ಇವಳೂ ಒಂದು ಗೊಂಗಡೀನ್ನ ಕಾಲ ಮ್ಯಾಲ್ ಎಳಕಂಡು, ಮೂಲ್ಯಾಗೆ ಒಬ್ಬಂಟಿ ಬಿದ್ದಕಂಡು, ರೆಪ್ಪಿಗೆ ರೆಪ್ಪೆ ಬಲವಂತಾಗಿ ಅದುಮಿಕೊಂಡರೂ ಕಣ್ಣಿಗ್ ನಿದ್ದೆ ಕವಿಯೋದ್ ಅಷ್ಟಕ್ಕಷ್ಟೇ ಆಗಿತ್ತು. ಅದರಾಗೂ, ಮನೇಗೆ ಯಾವದಾನ ಹೊಸ ಗಂಡ-ಯಂಡ್ರೂನ ಚೆಕ್ ಮನೇಗೆ ಬಿಟ್ಟ ದಿನವಂತೂ ಕಣ್ಣುಗಳೆರಡೂ ಕೊಳ್ಳಿದೆವ್ವ ಆಗೋವು; ಇಡೀ ರಾತ್ರೆ ಉರಿದುರಿದು ನಿಟ್ಟುಸುರಿಡ್ತಿದ್ಳೋ.

ಅವತ್ತಂತೂ, ಎರಡು ಬೆಕ್ಕುಗಳು ಕಾವಿಗೆ ಬಂದು, ಸಂಪ್ಲುನಾಗೇ ಕಿರ್ರೋ ಮರ್ರೋ ಅನ್ನೋ ಸದ್ದೇ ನೆವನಾಗಿ, 'ನಿಮ್ ವಂಸ ನಾಸವಾಗೋಗ, ಇಲ್ಗೇ ಬಂದ್ರಾ...ನಮ್ ನಿದ್ದೇ ಕೀಳಾಕೆ...' – ಅಂತ ಅದ್ದಲಿಸಿದ್ರೂ, ಅವು ಇವುಗಳಿಗೆ ಕ್ಯಾರೆ ಮಾಡಿರಲಿಲ್ಲ. ಅವುಗಳ ಸದ್ದಿಗಿಂತ ಇವಳ ಅರಚಾಟವೇ ಸ್ಯಾನೆ ಆದಾಗಂತೂ, ಒಂದು ಸಾರಿ, 'ಅಯ್ಯೋ, ಅವುಗಳ ಲೋಕಾರೂಡೀಗೆ ನೀನ್ಯಾಕೆ ಮನಸ್ ಕೆಡಿಸ್ಕಂಡು ನಮ್ ನಿದ್ದೇಗೂ ಬಂಗ ಮಾಡ್ತೀ, ತೆಪ್ಪಗೆ ಬಿದ್ಕೋ...' ಅಂತ ಅಯ್ಯ ಪೇಚಾಡಿಕೊಂಡಿದ್ದ.

ಅವುಗಳ ಲೋಕಾರೂಡೀ ಕಟ್ಕಂಡು ನನಿಗೇನು ಆಗಬೇಕು; ಅಲ್ಲಿ, ಕತ್ಲು ಕ್ವಾಣೇಗೆ ಕಲ್ಲೂ–ನೀರೂ ಕರಗೋ ಲೋಕಾರೂಢೀ ಸದ್ದನ್ನಾದ್ರೂ ಕೇಳಿಸ್ಕಣಾನ ಅಂದ್ರೆ, ಇವು ಅದ್ಕೂ ಕಲ್ಲಾಕ್ತಾವಲ್ಲಾ... ಅಂತ, ಮನಸ್ನಾಗೆ ಅಲವತ್ತುಕೊಂಡಿದ್ಲು, ಹಳೂಚ್ಗೆ ಆಗತ್ತಿದ್ದಂಗೇ, ಅವರು ಎದ್ದು ಈಚೆಗೆ ಬತ್ತಿದ್ದಂಗೇ, ಕ್ವಾಣೇಗೆ ಹೋಗಿ, ಸೋಬನಾದ ಕಂಬಳಿ ಏನಾಗ್ಯದೆ, ಹೆಣ್ಣಮ್ಮನ ಮಕದ ಕುಮಕುಮ, ತಲೆ ಕೂದ್ಲು, ಹೂವ... ಎಲ್ಲಾನೂ ನ್ಯಾರ್ಪವಾಗಿ ನೋಡುತ್ತೇ, ಕಾರ್ಯಫಲ ಏನೂ

ಎಂತ ಅನ್ನೋದನ್ನ ತಿಳಿಯೋದು ಬೇರೆ ಹೆಂಗುಸರ ಪದ್ಧತಿ ಆದ್ರೆ, ಕಣ್ಣಲ್ಲಿ ಕಾಣದಿದ್ರೂ, ಕಿವಿಯಾಗೇ ಕೇಳೀ, ಆಗಿಂದಾಕ್ಲೇ, ಹಣ್ಣೋ, ಕಾಯೋ ಅಂತ ತಿಳಿಯೋ ಜಾಣ್ಮೆ ಈ ವಮ್ಮಂದು. ಹೊತ್ತೀಲೆ ಮನೆ ಹೆಂಗುಸ್ರು ಅಡ್ಗೇ ಮನ್ಯಾಗೋ, ಬಚ್ಲೂನಾಗೋ ರಾತ್ರೆನಾಗೆ ಇಂಗಿಂಗಾಗದೆ ಅಂತ ಪಿಸು ಪಿಸುನ ಮಾತಾಡ್ಕಂತಿದ್ರೆ, 'ಅಯ್ಯೋ, ಸುವ್ವಯ್ ನಾರೀರ, ನಂಗೆ ರಾತ್ರೆನಾಗೇ ತಿಳ್ಕಂಡೆ..' ಅಂತ ಮಳ್ಮಳ್ಳಗೆ ನಗೋಳು. ಅಂಥೋಳಿಗೆ ದಢಾರಂತ ಕದ ಹಾರಾಕ್ಕಂಡು ಯಾರಾದ್ರೂ ಓಡಿದ್ರೆ ತಿಳಿಯಾಕಿಲ್ಲವಾ!

'ಲೇ..ಲೇ....ಲೇ....., ಎದ್ದೋಳ್ರೀ, ಬ್ಯಾಗ; ಯಾರೋ ಆಚ್ಗೆ ಓಡಿದಂಗಾಯ್ತು...'

– ಎದೆ ಬಾಯಿ ಹಾರಂಗೆ ಕೂಗಾಕಿದ್ಳು. ಸಕ್ಕಟ್ಟೆ ಸರೊತ್ತು; ಎಲ್ಲಾರ್ಗೂ ಅದೇ ತಾನೇ ಮಪ್ರ ಹತ್ತಿತ್ತು. ನಿದ್ದೆ ಬರದ ಮಂಪರಿನಾಗೆ ಏನೋ ಕನವರಿಸ್ಕಂಡಿರಬದೂಂತ, ನಿದ್ದೆಗಣ್ಣಲ್ಲೇ ಅವರು ಪಕ್ಕುಕ್ಕೆ ಮಗುಚಿಕೊಂಡರೂ, ಇವಳ ಅರಚಾಟಕ್ಕೆ ಕಣ್ತೆರೆಯಲೇಬಾಕಾಯಿತು. 'ಅಯ್ಯೋ, ಅದ್ಯಾಕೆ ಹಂಗೆ ಹುಯ್ಯಲೆಬ್ಬಿಸ್ತೀಯೇ... ಏನಾಯ್ತೂ...ಆಗಬಾರದ್ದೂ...?' – ಅಂತ ಮನೆ ಯಜಮಾನ ಅಲ್ಲಿಂದಲೇ ಕೂಗಿದ. ಅವಳದು ಮತ್ತದೇ : 'ಯಾರೋ ಆಚ್ಗೆ ಓಡಿದಂಗಾಯ್ತು.., ಬ್ಯಾಗ ಎದ್ದು ನೋಡ್ರೀ..'

ಅನುಮಾನವಾಗಿ, ತಲಬಾಗಲ ಕಡೆ ಕಣ್ಣಾಡಿಸಿದರೆ, ಕದ ಹಾರೊಡೆಯೋದು ಕತ್ತಲಲ್ಲೂ ಕಾಣ್ತು; ತಂಪು ಗಾಳಿ ಸುಳಿದದ್ದು ಅನುಮಾನ ಧೃಢ ಮಾಡ್ತು; ಎದೆ ಹೊಡಕೊಳ್ಳಾಕೆ ಸುರುವಾಯ್ತು : ಕಳ್ಳರೇನಾದ್ರೂ ನುಗ್ಗಿದ್ರಾ..? ತಟಕ್ಕನ ಕಡ್ಡಿ ಗೀರಿ ತಲೆದೆಸಿ ಇಟ್ಟುಕೊಂಡಿದ್ದ ಬುಡ್ಡಿ ಹಚ್ಚಿದ. ಆ ಬೆಳಕು, ಸದ್ದಿಗೆ ಹೆಂಗಸರು ಬಟ್ಟೆ ಸರಿಮಾಡಿಕೊಳ್ಳುತ್ತಲೇ, ಹೌಹಾರಿ ಎದ್ದರು. ನಿದ್ದೆಗಣ್ಣಿಗೂ, ಮಂಕು ಬೆಳಕಿಗೂ ಏನೂ ತೋಚದೆ, ಸುತ್ತಾ ಮಿಕಿ ಮಿಕಿ ನೋಡಿದರು. ಕೈದೀಪ ಹಿಡಿದೇ ಇಡೀ ಕೋಣೆಯನ್ನೇ ಅಜಮಾಸು ಮಾಡಿದ ಯಜಮಾನ, ಏನೊಂದೂ ತೋಚದೆ, ಏನಾದರೂ ಸುಳಿವಿಗಾಗಿ ಆತಂಕದಿಂದಲೇ, ಬಾಗಿಲತ್ತ ಹೆಜ್ಜೆ ಹಾಕಿದ. ಮನೆಯಾಕೆಯ ಕಂಗಳು ಕಾತರದಿಂದಲೇ ಸೋಬನದ ಕೋಣೆಯತ್ತ ನೋಡುತ್ತಲೇ ಅವಳಿಗೂ ಆತಂಕ; ಕಿರು ಬಾಗಿಲು ದೊಡ್ಡದಾಗೇ ಬಾಯಿ ಬಿಟ್ಟುಕೊಂಡಿತ್ತು! ಆ ರಾತ್ರಿಗಾಗಿಯೇ ಹಚ್ಚಿಕ್ಕಿದ್ದ ಹಣತೆಯ ಮಂದ ಕಾಂತಿ ಅದನ್ನು ತೆರೆದು ತೋರುತ್ತಿತ್ತು. 'ದೀಪ ಕಳ್ಳುಯ್ಯಬ್ಯಾಡ್ರೀ; ಹೊತ್ತುಟ್ಟ ಉರೀಲಿ...' ಅಂತ ಅವರಿಗೆ ಮೊದಲೇ ಹೇಳಿತ್ತು; ದೀಪ ಉರೀತಿತ್ತು. 'ಬಾಕ್ಲ

ಕದ ಮುಚ್ಕಂಡೆ ಇರಲಿ, ಬೆಳಗಾನ ತಗೀಬ್ಯಾಡೀ...' ಅಂತ ಹೇಳಿ, ಕದಾನ ತಾವೇ ಮುಂದಕ್ಕೆ ಎಳಕಂಡು ಬಂದಿದ್ದು ಮಾತ್ರ ಪಾಲನೆ ಆಗಿರಲಿಲ್ಲ.

'ಸಿವೀ..., ಸಿವಮ್ಮಾ...'

– ನಿಂತಲ್ಲಿಂದಲೇ ಮೆದುವಾಗಿ ಕೂಗಿದಳು; ಸದ್ದಿಲ್ಲ. ಏನು, ಮೈಮರೆಯೋವಷ್ಟು ನಿದ್ದೇಲಿ ಬಿದ್ದರೋ, ಹೊಸಾ ಗಂಡ ಹೆಂಡ್ತಿ..? ಮನಸಿನಾಗೆ ಮೂಡಿದ ಪ್ರಶ್ನೆಗೆ ತಾನೇ ನಾಚುತ್ತಾ, ಮತ್ತೂ ತುಸು ದನಿ ಹೆಚ್ಚಿಸಿ, '...ಏನಪ್ಪಾ ಬೈರೂ..., ಮಗಾ, ಎದ್ದೀಯೇನಪ್ಪಾ...?' – ಮಗನನ್ನೇ ಕೂಗಿ ಕರೆದಳು. ಉಹುಂ ಒಳಗಿಂದ ಹರಾ ಇಲ್ಲ, ಶಿವಾ ಇಲ್ಲ! ಎದ್ದು ಕಾಲು ಮಡಿಯಾಕೆ ಏನಾದರೂ ಆಚೆಗೀಚೆಗೆ ಹೋದರಾ? ರಾತ್ರೆ ಹೊತ್ನಾಗೆ ಮಾಡ್ಬೇಕಾದ್ರೆ ಇಲ್ಲೇ ದನೀನ್ ಕೊಟ್ಟಿಗೆ ಮೂಲ್ಯಾಗಿರೋ ಬಚ್ಚಲೀಗೇ ಹೋಗೋದು ಅಭ್ಯಾಸ. ಅದು ಬಿಟ್ಟ ಇಂಥಾ ಗವ್ವತ್ತಲ್ಲಲ್ಲಿ ಆಚೇಗ್ಯಾಕೆ ಹೋದ್ರೂ...? ಇವರಿಗೆ ಅಷ್ಟೂ ಬುದ್ಧೀ ಬ್ಯಾಡ್ವಾ...; ಇನ್ನಾ ಹುಡುಗಾಟವಾ...!

ರಾತ್ರೇನಾಗ ಉಂಡಿದ್ದು ಎಲ್ಲೋ ಯತ್ವಾಸಾಗಿ, ಎಲ್ಬುಕ್ ಗಿಲ್ಬುಕ್ ಹೋದರೋ...? ಇರಬೌದು; ಆ ಅವಸುರಕ್ಕೇ ತಡೀನಾರದ, ಬಾಕ್ಲು ಹಾರೊಡಕಂಡೇ ಓಡೋಗ್ಯವರೆ, ನೋಡು; ಯಾವದಾನ ನಾಯೀಗೀಯಿ ಒಳ್ಕಿಕ್ಕೆ ನುಗ್ಗಿದ್ರೆ ಏನ್ ಗತೀ..! ಎಂಥಾ ಹರಾಸು ಇಲ್ಲದೋವು; ಈಗಲೇ ಹಿಂಗಾದ್ರೆ, ಮುಂದಿನ್ನೆಂಗೆ ಬಾಳಾಟ ಮಾಡ್ಯಾರು... – ಅಂತ ಮನಸಿನಾಗೇ ಗೊಣಗಿಕೊಂಡವಳು, 'ಅತ್ತತ್ತಾ ಹೋಗಿ ನೋಡ್ರೀ, ಅಲ್ಲೆಲ್ಲಾನ ಪಕ್ಕ ಕಂಡಾರೇನೋ...' ಅಂದಳು. ಗಾಳೀಗೆ ಸೊಡರು ಆರೋದಾತೂ.. ಅಂತ ಬಲಗೈ ಹಸ್ತವನ್ನ ಬಾಗಿಸಿ, ಜ್ವಾಲೆಗೆ ಅಡ್ಡ ಮಾಡಿಕೊಂಡು, ನಿಧಾನಕ್ಕೆ ಮೆಟ್ಟುಗಾಲು ಇಕ್ಕಂಡೇ ತಲಬಾಗಲ ಕಡೆ ಹೋಗಿ, ಕಾಣದ ಬೆಳಕಲ್ಲಿ ಕತ್ತಲನ್ನು ಇರಿಯುವಂತೆ ಸುತ್ತಾ ಕಣ್ಣು ಹಾಯಿಸಿದ. ನರಮನುಸನ ಉಸುರು ಎಲ್ಲೂ ಕೇಳಲಿಲ್ಲ. ಯಜಮಾನನ ಆಗಮನ ಕಂಡು ಅಲ್ಲೆಲ್ಲೋ ದೂರದಲ್ಲಿ, ಊರಾಚೆ ದಿಕ್ಕಿಗೆಂಬಂತೆ ಬೊಗಳುತ್ತಿದ್ದ ಕುನ್ನಿಯೊಂದು ಇವನ ಕಡೆ ಓಡಿಬಂದು, ಮತ್ತೊಮ್ಮೆ ಕತ್ತಲೆಡೆಗೆ ಮೊಗವೆತ್ತಿ ಬೋಽಽ... ಎಂದಿತು. ಮತ್ತೂ ದೂರದ ಬೇವಿನ ಮರದತ್ತಣಿಂದ ಗೂಬೆಯ ಗುಗ್ ಗ್ಗೂ.. ಸದ್ದು. ಥೂ, ಅಪಸಕುನ.. ಅಂತ ಬೇಸರಿಸಿ, ಒಳ ಬಂದವ, 'ಅಲ್ಲೆಲ್ಲೂ ಕಾಣ್ತಾ ಇಲ್ಲ ಕಣೇ' ಅಂತ ಉಸುರಿದ. 'ಇನ್ನಾ ರವ್ವೋಟು ಅತ್ತತ್ತ ಹೋಗಿ ಕೂಗಾಕಾಕೆ ಆಗಲಿಲ್ವಾ..' – ಅಂತ ತಳಮಳಗೊಂಡಳು. ಇದೆಲ್ಲಾ ಗಮನಿಸುತ್ತಿದ್ದ ಚಿಗವ್ವಾ,

'ಅಯ್ಯೋ, ಅದೇನೋ ಅವರಿದ್ದ ಕತ್ತಲು ಕ್ವಾಣೇಯಿಂದಾನೇ ಸದ್ದು ಬಂದಂಗಾಯ್ತು...; ಅಲ್ಲೇ ವಸಿ ನೋಡ್ರೀ...' – ಅಂದಳು.

ಅಲ್ಲೂ ಇಚಾರಣೆ ಮಾಡೋದೇನೋ ಸರಿ. ಆದ್ರೂ, ಹೊಸಾ ಗಂಡ ಯಂಡ್ರು ಮಲಗಿರೋ ಕ್ವಾಣೇಗೆ ಏಕದಂ ಕಾಲಿಡೋದು ಗೌರವಾನ... ಅಂತ ಮನಸು ಹಿಂದೇಟು ಹಾಕಿದ್ರೂ, ಒಳೀಕೆ ಹೋಗದೇ ಇರಾಕಾಗಲ್ಲ, ಅಂತ ಸಮಾಧಾನ ಹೇಳಿಕೊಂಡು ಹೋಗಿ ಕೋಣೆ ಬಾಗಿಲಲ್ಲೇ ನಿಂತು, ಒಳೀಕೆ ನಿಧಾನಕ್ಕೆ ತಲೆ ಹಾಕಿ ದಿಟ್ಟಿಸಿದಳು ಮಂದ ಬೆಳಕಿನಲ್ಲಿ ಎಲ್ಲಾ ಅಸ್ಪಷ್ಟ. ಸುಣ್ಣ ಬಳಿಯದ ಗ್ವಾಡೆ ಪಕ್ಕುಕ್ಕೆ ಸುತ್ತಲೂ ಅಡಕಲು ಸಾಲು; ನಡುವೆ ಒಂದಿಷ್ಟುಂಬಲದ ಜಾಗದಲ್ಲಿ ಅವರು ಮಲಗೋ ಜಾಗ. ಮತ್ತಿಷ್ಟು ಇಣುಕಿದಳು: ಹಾಸಿದ ಕಂಬಳಿ ಕೆದರಾಡಿದೆ; ಆದರೆ, ಅದರ ಮೇಲೆ ಪವಡಿಸಿರಬೇಕಾದ ಯಾವೊಂದು ಜೀವದ ಸುಳಿವೂ ಇಲ್ಲ! ಅಂದರೆ...?!

ಹಂಗ್ಯಾಕೆ ಮಾಡಿರ್ತಾರೆ...! ಅಂಥಾ ಅಸಂದರ್ಪ ಏನಾಗಿದ್ದಾತೂ...?

ಯಾವ ಮಕನಾಗಿ ಯೇಚ್ನೆ ಮಾಡಿದ್ರೂ ಏನೂ ತೋಚದಂಗಾಯ್ತು. ಹೆಣ್ಣೇನೂ ಆಚೇದಲ್ಲ; ಸಧ್ಯ ತಮ್ಮನ ಮಗಳೇನೇ. ಇಬ್ರೂ ಆ ಮನೆ, ಇ ಮನೇಲಿ ಒಂದಿಗೇ ಆಡುಂಡು ಬೆಳೆದೋರೇನೇ; ಮದ್ವೇಗೂ ಒಪ್ಪಿಗಂಡಿದ್ರು, ಆದ್ರ ಏನಾಯ್ತು..?

ನಡೇ ನುಡಿ ಎಲ್ಲಾ ಆಗಿನ ಪದ್ಧತೀ ಪ್ರಕಾರಾನೇ ಆಗಿತ್ತು. ಗೌರೀ ಹಬ್ಬದಾಗೊಂದು ಒಳ್ಳೇ ದಿನಾನ ಮದ್ರೆ ಕುಲ್ಡ ಪುರೋಹಿತರಿಂದ ಕೇಳಿಕಂಡು, ಹುಡುಗೀ ಮನೇಗೆ ಹುಡುಗನ ಅಪ್ಪ ಅಮ್ಮ ಹೋಗಿ, ಒಂದು ಸೋಬನದ ಒಸಗೆ ಅಂತ ಹಾಕಿ, ಚಂಜೇ ವತ್ತಿಗೆ ಹುಡುಗೀ ಕರಕಂಡು ಬಂದು, ಅವತ್ತು ರಾತ್ರೀನಾಗೆ ಇದ್ದಿದ್ದು ಉಣ್ಣಾಕಿಕ್ಕಿ, ಒಂದು ಗೂಡಾಕಿ ಅಂತ, ಹಿಂದಲ ಕ್ವಾಣೆಗೆ ಕಳಿಸಿದ್ರು, ನಮ್ ಹಿಂದ್ಲು ಪಪ್ತಿ ಬಿಡೋದು ಬ್ಯಾಡ ಅಂತ ಚಿಗವ್ವ ಒತ್ತಡ ಮಾಡಿದ್ದರಿಂದ, ಇಲ್ಲೇ ಮಾಡಿದ್ರು, ಜತೇಗೆ, ಹೆತ್ತವ್ವನ ಒಳ ಮನಸ್ಸಿನಾಗೆ ಇದ್ದದ್ದೆಂದರೆ, ಮಗ ರವೋಟು ಎಳಂಪ್ಳು; ಹುಡುಗೀವಷ್ಟು ಬಲುಮೆ ಇಲ್ಲ; ಹೊಸಾ ಅನುಭವ, ಬೇರೆ; ಮಾಮನ ಮನ್ಯಾಗೆ ಅವಳ ಮುಂದೆ ಮಂಕಾಗಿಬಿಟ್ಟಾನು ಅನ್ನೋ ಆತಂಕವೂ ಇತ್ತು. ಆದರೆ... ಇವತ್ತು ಏನಾಯ್ತೋ ಕಾಣೆನಲ್ಲಾ, ಸಿವನೇ..!' – ಮನೆ ದೇವರು ಸ್ತೋತರಣೆ ಮಾಡಿಕೊಂಡಳು. ಹಾಗೇ ಎಲ್ಲರೂ ಹೊಸ್ತಿಲಲೇ ನಿಂತು, ಮಕ ಮಕ ನೋಡಿಕೊಳ್ಳುತ್ತಿರುವಾಗ, ಮೂಲೆಯ ಮಡಕೆಗಳ ನಡುವಿಂದ, ನಿಧಾನಕ್ಕೆ, '...ಅಮಾ,... ಅಯ್ಯೋ...' ಅನ್ನೋ

ಮೇಲುಸುರು ಕೇಳಿಬಂತು. ಬೆದರಿದ ಅವರು, ಕದದ ಹಿಂದಕ್ಕೆ ಹೋಗಿ, ಕಣ್ಣಾಡಿಸಿದರು...!

*

ದಬಾ..ದಬಾ...ದಬಾ...ದಬಾ...ಎಲ್ಲೋ, ಏನೋ ಸದ್ದು. ಒತ್ತರಿಸಿ ಬಂದಿದ್ದ ನಿದ್ದೆಯಲ್ಲಿ, ಯಾರದೋ ಮನೆ ಸದ್ದು... ಯಾರೋ ನೆಂಟರು ಮನೇಂದ ಹೊತ್ತು ತಪ್ಪಿ ಬಂದೋರು ಬಾಗಿಲು ತಗಿಸ್ತಾ ಅವರೇನೋ... ಅಂದುಕೊಂಡಳು, ನಿದ್ದೆಗಣ್ಣಲ್ಲೇ. ಆದರೆ, ಎಚ್ಚರಾದಂತೆ, ಅದು ತಮ್ಮದೇ ಮನೇದೆ ಅನ್ನೋ ಅನುಮಾನ ಬಂದದ್ದೇ, ದಡಕ್ಕನೇ ಕಣ್ ಬಿಟ್ಟು, ಮೊಣಕೈನಲ್ಲೇ ಗಂಡನ ಪಕ್ಕೆ ತಿವಿದಳು : 'ಎದ್ದೋಳು ಯಾರೋ ಬಾಗ್ಲು ಬಡಿಯಂಗವ್ರೆ..'

'ಏ, ನಮ್ಮನೀಗೆ ಯಾರ್ ಬಂದಾರೇ, ಇಷ್ಟೋತ್ನಾಗೆ, ನಿಂಗೆಲ್ಲೋ ಮಗ್ಳು ಕನಸೀಗೆ ಬಂದು ಕೇಳಿಸೀರಬೌದು; ಸುಮ್ನೇ ಬಿದ್‌ಕೋ; ಬೇಕಾದ್ರೆ ಹೊತ್ನಿಂಟೆ ಹೋಗಿ, ಕಷ್ಟ ಸುಖ ಇಚಾರ್ನೆ ಮಾಡ್ಕಂಡು ಬರೀವಂತೆ...' ಏಳಲಾರದ ಮನ ಭಾರಕ್ಕೆ, ಜೋರಾಗಿ ಆಕಳಿಸಿ ಕಣ್ಮುಚ್ಚಿದನು. ಆದರೆ, ಮತ್ತೆ ದಬಾ..ದಾಬಾ..ಸದ್ದು; ಸಾಲದ್ದಕ್ಕೆ 'ಅಮ್ಮಾ, ದೋ, ಬಾಕ್ಲು ತಗೀ ಬಾರ್ ದೋ' – ಮಗಳದೇ ಕೂಗು! ಎದೆ ಹೊಡ್ಕಳ್ಳಾಕೆ ಶುರೂವಾಯ್ತು; ಜೀವ ಬಾಯಿಗ್ಬಂದಂಗಾಯ್ತು; ನಾಲ್ಗೆ ಒಣಗಿ ದನೀನೆ ಹೊರಡದಂಗಾಯ್ತು. ದಡಕ್ಕನೆ ಎದ್ದೋಳೇ ಕತ್ತಲಲ್ಲೇ ಓಡಿದ್ಳು : 'ಏನೇ, ತಾಯೀ; ಬಂದೆ ತಾಳು...'

ಅಗುಣಿ ಹಿಂದುಕ್ಕೆ ತಳ್ಳಿ, ಕದ ತೆಗೆದರೆ, ಮಗಳೇ! ಅದೂ ಒಬ್ಬಳೇ!! ಭುಜದ ಮೇಲೆ ಕೈ ಹಾಕಿ, ಗಾಬರಿಯಿಂದ, 'ಯಾಕೆ ಮಗಾ, ಏನಾಯ್ತು..?'

'ಹೇ, ತಗಿ..ತಗೀ..'

ಸಿಡುಕುನಲ್ಲೇ ಒಳ ನಡೆದಳು. ಮತ್ತಷ್ಟು ಆತಂಕ, ಭಯದ ಅವ್ವನೂ ದಡ ದಡ ಹಿಂಬಾಲಿಸಿದಳು. ಅಷ್ಟೊತ್ತಿಗೆ ಯಜಮಾನ ದೀಪ ಹಿಡಿದು ಎದುರಾದನು.

'ಅಲ್ಲಾ ಕಣೇ, ಸಿವೀ; ಮಾತಿಲ್ ಕತೆಯಿಲ್‌ದೆ ಹಿಂಗೆ ರವ ರವ ಉರುದರೆ ನಮಗೇನೇ ತಿಳೀಬೇಕು? ಏನಾಯ್ತೇ? ಯಾರು ಏನಂದ್ರೇ...?'

'ಯಾರು ಏನಂದ್ರೆ ಸುಮ್ಮಕೇ ಬಿಟ್‌ಬಿಡ್ತೀನಾ..?'

'ಮತ್ತೇನಾಯ್ತುಂತ ಹೇಳೇ...?'

'ನಿನ್ ಗಂಡಾ ಏನಾದ್ರೂ ಅಂದನೇನಮ್ಮಾ..?' – ಅಪ್ಪನೂ ಪ್ರಶ್ನಿಸಿದ, ನನ್ನ ಮಾತಿಗೇನಾದರೂ ಬಾಯಿ ಬಿಟ್ಟಾಳೇನೋ, ಅಂತ.

'ಅವನೇನು ಗಂಡಾನಾ, ಅವನೆಂಥಾ ಗಂಡಾ? ಯಾರಿಗೇ ಆದ್ರೂ ಮಾನ ಮರ್‍ವಾದೆ ಇರಬೇಕು..'

ಅವಳು ಸಿಡಿಸಿದ ಮಾತುಗಳು ಆಗಿರಬಹುದಾದ ಏನೋ ಅನಾಹುತದ ಸೂಚನೆ ನೀಡಿದವು. ಅವನಿಂದ ಏನೂ ಕೈಲಾಗದೇ ಇವಳಿಗೆ ಸತಾಯಿಸಿರಬೌದೇನೋ...? ಅಂತ ಸಹಜವಾಗಿ ಊಹಿಸಿಕೊಂಡಳು. ನನ್ನ ಮಗಳು ಬೆಣ್ಣೆ ತುಪ್ಪ ತಿಂದು ಒಳ್ಳೇ ದುಂಡು ದುಂಡಾಗಿ ಬೆಳೆದ ಕೊನ್ನಾರಿ ಕುರಿ ಥರಾ ಅವಳೆ; ಇವಳನ್ನ ಸರಿಯಾಗಿ ಹಣೀ ಬೇಕಾದ್ರೆ, ಒಳ್ಳೇ ಕೊಂಬು ತಿರುಗಿದ ಪಟಲೀನೇ ಆಗಬೇಕು – ಅನ್ನೋದೂ ದಿಟವೇ. ಆದರೂ, ಕಂಡು ಕೇಳಿದ ನಮ್ಮದೇ ಹುಡುಗನ ಜತೆ ಹೆಂಗೋ ಅನುಸರಿಸ್ಕಂಡೋತಾಳೆ ಅಂತಾ ಮಾಡಿದ್ರೆ.. ಹಿಂಗಾಯ್ತಲ್ಲ! ಅವನು ಇಂತಾ ನಾಮರ್ದ ಇರಬಹುದೂಂತ ಯಾರಿಗೂ ಅನ್ನಿಸಿರಲಿಲ್ಲವಲ್ಲಾ! ಗಂಡುನ್ ತಾಕತ್ತು ಯಂಡ್ರಿಗ್ ಗೊತ್ತಾದಂಗೆ ಬ್ಯಾರೇರ್ಗೆ ತಿಳಿಯೋದು ಕಷ್ಟ... ಈಗ ಏನಪ್ಪಾ ಮಾಡೋದು ಸಿವನೇ ಅಂತ ತಲೆ ಮ್ಯಾಲೆ ಕೈ ಇಕ್ಯಂಡವಳು, ಗಂಡನಿಗೆ ಸನ್ನೆ ಮಾಡಿ ಅಲ್ಲೇ ನಿಲ್ಲ ಹೇಳಿ, ಮಗಳನ್ನು ತಳ್ಳಿಕೊಂಡು ಅಡುಗೆ ಕ್ವಾಣೇಗೆ ಹೋಗಿ, ಕದಾನ ಎಡಗಾಲಲ್ಲೇ ಮುಂದಕ್ಕೆ ನೂಕಿಕೊಂಡಳು.

*

ಮಗಳು ಹೇಳಿದ್ದು ಕೇಳುತ್ತಿದ್ದಂಗೇ ಅಳಬೇಕೋ, ನಗಬೇಕೋ ತಿಳೀಲಾರದೆ ಒದ್ದಾಡಿದಳು, ತಾಯಿ. ದಿನ ಬೆಳಗಾಗುತ್ತಿದ್ದಂಗೇ, ಸುತ್ತಮುತ್ತಲ ಜನಕ್ಕೂ ಪುಕಾರಾಗಿ, ಅವರು ಇದೆಂಥಾ ಸೋಜಿಗ, ಹೀಗೂ ಉಂಟೇ...! ಅಂತ ಅಂದುಕೊಡವರಿಗಿಂತ, ನಗಸಾರದ ಕತೆ ಮಾಡ್ಕೊಂಡು ಖುಸಿ ಪಟ್ಟಿದ್ದೇ ಹೆಚ್ಚಾಯಿತು. ಬೇರೆ ಜನ ಏನು, ಶಿವಮ್ಮನೇ ಅದುನ್ನೆಲ್ಲಾ ನೆನಪು ಮಾಡಿಕೊಂಡರೆ, ಇವತ್ತು ಒಳಗೊಳಗೇ ಮುಸಿಮುಸಿ ನಕ್ಕಂತಾಳೆ. ಆದ್ರೂ, ಅವತ್ತು ನೀವು ಮಾಡಿದ್ದು ಸರೀನಾ..? – ಯಾರಾದ್ರೂ ಕೇಳಿದ್ರೆ, ತಕ್ಷಣ, ಬಿಲ್ ಕುಲ್ ಸರೀ– ಅಂತಾನೇ ವಾದಿಸ್ತಾಳೆ; 'ಹೆಣ್ ಮಕ್ಳೀಗೂ ಒಂದು ಮಾನ ಕೇಳಬೇಕು – ಅಂತ ಗಂಡ ಆದೋನಿಗೆ ತಿಳಿಯಾಕಿಲ್ಲವಾ? ಹೆಣ್ಮಕ್ಳು ಅಂದ್ರೆ, ಏನ್ ಹುಟ್ಟೋವಾಗಲೇ ಎಲ್ಲಾ ತಿಳಕಂಡು ಬಂದಿರ್‍ತಾರಾ...?' – ಅನ್ನೋ ಅವಳ ಖಡಕ್ ನುಡೀಗೆ ಬಾಯಿ ಬಿಡೋದೇ ಕಷ್ಟ ಆಗ್ತದೆ.

'ಏನಾದ್ರೂ ಅವನು ನಿನ್ನ ಸೋದರಮಾವ. ಅವನಿಗೂ ಹಿಂಗೆ ಮಾಡಬೌದಾ..?'

'ಚಿಕ್ಕೋರಿದ್ದಾಗಲೂ ನಾವು ಒಂದಿಗೇ ಆಡಿ, ಉಂಡು, ಕತೆ ಹೇಳ್ಕಂಡು ಮಕ್ಕಂತಿರಲಿಲ್ಲವಾ; ಹಂಗೇ-ಅಂತಾ ಮನಗಿ, ನಿದ್ದೆ ಮಾಡ್ತಿರೋವಾಗ, ಅವನು ದಬಕ್ಕನ ಮ್ಯಾಲ್ಬಿದ್ದು ನನ್ ನೆರಿಗೇನೇ ಬಿಚ್ತಾನಲ್ಲಾ! ಬೆಳೆದ ಹೆಮ್ಮಕ್ಳು, ಸ್ಯಾಲೆ ಸ್ಯರಿಗೆ ಕಳೀದಂಗೆ ಮಾನವಾಗಿ ಇರಬೇಕೂ – ಅಂತ ನಮ್ಮಜ್ಜಿ ಯೇಳೋಳು. ಹಂಗಿರೋವಾಗ, ಇವನು ಹಿಂಗೆ ಮಾಡಾಕೆ ಬಂದ್ರೆ ಬಿಡ್ತೀನಾ? ನನ್ನ ಮಾನಬಂಗ ಮಾಡೋನು ಇವನು ಮಾವ ಅಲ್ಲ, ಅಂತ ಸಿಟ್ಟತ್ತಿ, ಝಾಡಿಸಿ ಒದ್ದೆ ನೋಡು...'

'ಇದೆಲ್ಲಾ ಲೋಕಾರೂಡೀ ಕಣಮ್ಮಾ; ನಾವೆಲ್ಲಾ ಬಾಳಿ ಬದುಕಿದ್ದೇ...' ಅಂತ ಯಾರು ಎಷ್ಟು ಹೇಳಿದ್ರೂ ಸುತಾರಾಂ ಒಪ್ಪಲಿಲ್ಲ. 'ಸೋಬನ ಸಾಸ್ತರ ಅಂದ್ರೆ ಹಿಂಗಿಂಗೆ ಅಂತ ನನಿಗೆ ಮದ್ಲೇ ಯಾರೂ ಹೇಳಿಕೊಟ್ಟಿರಲಿಲ್ಲವಲ್ಲಾ.. ಅಷ್ಟಕ್ಕೂ ನನಗೆ ಅವತ್ತಿನ ಮಾವಾ ಇಸ್ಟ ಆಗಿದ್ದ; ಇವತ್ತಿನೋನು ಬಿಲ್‌ಕುಲ್ ಒಲ್ಲೆ...' ಅಂತ ತಲೆ ಕೊಡವಿಬಿಟ್ಟಳು. ಕೊಡತೀಲಿ ಹೊಡೆದಂಗೆ ಆಯಸ್ಥಾನಕ್ಕೆ ಬಿದ್ದ ಒದೆತುಕ್ಕೆ ಜೀವ ಧಿಲ್ಲನಿಸಿ, ಮೇಲುಸುರು ಕಳ್ಕೋದಂಗಾಗಿ ಕುಸಿದು ಬಿದ್ದಿದ್ದ ಭೈರನಿಗೂ ಅವತ್ತಿನದು ನೆನಪು ಮಾಡಿಕೊಂಡರೆ ಚಳೀಜರ ಬಂದಂಗಾಗಿ, ನಡ ಕುಗ್ಗಿಡಕಂಡು ಕೂತುಬಿಡ್ತಾನೆ. 'ಅಯ್ಯಪ್ಪಾ, ಇನ್ನ ಅವಳ ಸಾವಾಸಾನೇ ಬ್ಯಾಡಪ್ಪ, ಜೀಮಾನ ಪುರಾ ಒಬ್ಬಂಟಿಯಾಗಿ ಬೇಸ್ಕಂಡು ತಿಂದ್ರೂ ಅವಳ ಸಂಗಾಟ ಇರಲ್ಲ' – ಅಂತ ತಲೆ ಒದರಿಬಿಟ್ಟ. ಹಿರೀಕರೆಲ್ಲಾ ಎಷ್ಟೆಲ್ಲಾ ಬುದ್ದಿ ಮಾತು ಹೇಳಿದ್ರೂ ಅವರು ಕೇಳದಾಗ, ಇನ್ನಾ ಬಲವಂತವಾಗಿ ಅವರ್ನ ಒಂದುಗೂಡಿಸೋದು ಯಾರಿಗೂ ಒಳ್ಳೇದಲ್ಲ, ಅವರ ಹಣೇಬರಾನೇ ಇಸ್ಟು – ಅಂತ ಸುಮ್ಮನಾದರು.

ಆದರೆ, ಅಪ್ಪ ಅಮ್ಮಂಗೆ ಹಾಗೆ ನಿರಮ್ಮಳವಾಗಿ ಇರೋಕಾಗಿಲ್ಲ. ಒಂದೆರಡು ವರ್ಷ ಕಳೆದು, ಈ ನೋವು-ನೆನಪು ಎಲ್ಲಾ ಮಾಯತಿದ್ದಂಗೇ, ಬೈರನ ಮನೇಲಿ ಬೇರೇ ಸೊಸೇನ ಮನೆ ತುಂಬಿಸಿಕೊಂಡರು. ಆದರೆ, ಸಿವಿ ಅಮ್ಮನಿಗೆ ಮಾತ್ರ ಕುಂತಾಗ ನಿಂತಾಗೆಲ್ಲ ಇದೇ ದೊಡ್ಡ ಯಾತನೆ ಆಗೋಯ್ತು. ಬೆಂಕಿ ಕೆಂಡಾನ ಮಡಿಲಲ್ಲಿ ಕಟ್ಟಿಕೊಂಡು ಮಲಗಂಗಾಯ್ತು. ಅದೇ ಕೊರಗು ಹತ್ತಿಕೊಂಡು ಮೂಲೆ ಹಿಡಿದ್ಲು. ವರ್ಷೊಂಬತ್ತು ದಿನದಾಗೆ ಜೀವಾನೇ ಬಿಟ್ಟಳು. ಅತ್ತ ಮಗಳು, ಇತ್ತ ಜೀವಕ್ಕೆ ಜೀವ ಕೊಡಂಗಿದ್ದ ಹೆಂಡತಿ ಹಿಂಗಾದ ಮೇಲೆ, ಸಿವಿ ಅಪ್ಪಾನೂ ದಿನ ದಿನಕ್ಕೆ ನವೀತಾ ಹೋದ; ಒಂದಿನ ಕಣ್ಮುಚ್ಚಕಂಡ.

ಈಗ ದಿಕ್ಕಿಲ್ಲದ ಮನೇಗೆ ಸಿವೀನೇ ದಿಕ್ಕು. ಆವರೆಗೆ, ಲೋಕಾ ಕಾಣದಂಗೆ ಇದ್ದ ಹುಡುಗಿಗೆ ಒಂದೇ ಸಾರಿ ಲೋಕ ಧಿಗ್ಗನೆ ಎದುರು ತೆರಕೊಂತು. ಮನೇಗೆ ಒಂಟಿ ಇರೋದು ಕಷ್ಟ ಅಂತ ಆದಮ್ಯಾಲೆ ಒಂದು ಮಗಾ ಆದ್ರೂ ಸಂಗಾಟ ಇರಬೇಕು. ಮಗಾ ಅಂತ ಆಗಬೇಕಾದರೆ, ಗಂಡಾ ಅನ್ನೋನು ಇರಬೇಕು. ಆದರೆ, ನನಗೀಗ ಗಂಡು ಹುಡುಕಿ ಮದುವೇಂತ ಮಾಡೋರ್ಯಾರು? ಈಗಾಗಲೇ ಜನ ತಲಾಗೊಂದು ಆಡ್ತಾರೆ. ಅಂಥೋರು ಮುಂದೆ ನಾನು ಕಂಡ ಕಂಡೋರ್‌ಗೆಲ್ಲಾ ಸೆರಗು ಹಾಸಾಕೂ ಆಗಲ್ಲ; ಯಾರ ಸಂಗಾಟ ಕೂಡಿಕೆ ಮಾಡಿಕೊಳ್ಳಾದೂ ಆಗಾಕಿಲ್ಲ – ಅಂತ ತೀರ್ಮಾನ ಮಾಡಿಕೊಂಡಳು.

ಇವಳು ದನ ಮೇಸಾಕೆ–ಅಂತ ಹೋದಾಗ, ಪಕ್ಕದರೋನೊಬ್ಬ 'ಏನೇ ಹುಡ್ಗೀ, ನಿಮ್ ದನಾ ಬಿಟ್ಟು ನಮ್ ವಲಾನೆಲ್ಲಾ ಮೇಸ್ತೀಯಾ..?' – ಅಂತ ಕೊಳಿಹುಂಜನ ಥರಾ ಬರೋನು. ಇವಳು ತಲೆ ಬಗ್ಗಿಸ್ಕಂಡು ಮೌನವಾಗಿದ್ರೆ, 'ಹಿಂಗೆ ಮಳ್ಳೀ ಥರಾ ಇದ್ದಿದ್ಕೇ, ಕಟ್ಟಿಗಂಡೋನ್ಗೇ ಕೈ ಕೊಟ್ಟು ಬಂದಿದ್ದು..; ಏನ್ ಸೀಮ್ಯಾಗಿಲ್ಲದೋಳು ಇವಳು...' – ಕಿಚಾಯಿಸೋನು. ಅವಳು ಸುಮ್ಕಗಿರೋದ್ನೆ ಸದರ ಅಂತ ತಿಳಕಂಡು, ಇನ್ನೊಂದು ದಿನ, 'ಹೇ, ಹುಡುಗೀ, ಉಳ್ಳೋರು, ಬಿತ್ತೋರು ಇಲ್ಲದ ಬೋರೆ ತಕ್ಕು ಥರಾ ಯಾಕೆ ಹಾಳಾತೀ? ನನ್ ಜತೆ ಬಂದುಬಿಡು, ನಿನ್ನ ಒಳ್ಳೆ ಎಲೆ ತ್ವಾಟದ್ ಥರಾ ಮಡಕ್ಕಂತೀನಿ...' – ಅಂತ ಮೆಲ್ಲಗೆ ಮೀಸೆ ಕುಣಿಸಿದ.

ಇವಳ್ನ ಹಿಡಿದು ಬೆಂಕಿ ಕೊಂಡುಕ್ಕೆ ಎಸೆದಂಗಾಯ್ತು. ಮೈಯೆಲ್ಲಾ ಸಿಡಿದೋಯ್ತು; ಅದೇನ್ ಆವೇಶ ಬಂತೋ, ಸೀರೆ ಸೆರುಗ್ನ ಸೊಂಟುಕ್ ಸಿಕ್ಕಿಸ್ಕೊಂತ, 'ನನ್ನನ್ನೇ ಮಡಿಕ್ಕಂತೀನಿ... ಅಂತೀಯ...! ಅದರ ಬದ್ಲು ನಿನ್ನೇ ಇರಿಸ್ಕಂತೀನಿ, ಬಾ, ನನ್ ಜತೆ ಒಕ್ಕೊತನ ಮಾಡು. ನೀನೇನೂ ಕದ್ದೂ ಮುಚ್ಚಿ ಬರಾದ್ ಬ್ಯಾಡ, ನಿಮ್ ಮನೇ ಮುಂದ್ಕೆ ಬಂದು ನಾನೇ ಕರಕಂಬತ್ತೀನಿ, ಆಯ್ತಾ...?'

ನಡು ಬೀದಿಯಲ್ಲಿ ನಿಲ್ಲಿಸಿ ರಪಾ ರಪಾ ಬಡಿದಂಥಾ ಮಾತು ಕೇಳಿ, ಅವನೂ ಕುದ್ದೋದ : 'ನಿನ್ನಂಥಾ ಗಡೀ ಮೀರಿ ನುಂಗಿದೋಳ್ನ ನಂಬಿದೋನಿಗೆ ಪಂಗನಾಮ ಹಾಕಿಬಿಡ್ತೀಯ, ಕಣೇ; ಸುಮ್ನೆ ಇದ್ರೆ, ಹಾಕಬಾರದ ಕಡೆ ಕೈ ಹಾಕೋಕು ಹೇಸದೋಳು ಅಲ್ಲ, ನೀನು. ಹಿಂಗೆ ನಿಗರಾಡ್ತಾ ಇರು, ಇಸ್ಟರಾಗೇ ನಿನ್ ಪೊಗರು ಮುರೀತೀನಿ..' ಅಂತ ಅಬ್ಬರಿಸಿ ಹೋಗಿದ್ದ. 'ಹೋಗಯ್ಯೋ; ನಾನೇನೂ ಗತಿಗೆಟ್ಟ ನಾಯೀಥರಾ ಕಾಯ್ಕಂಡು ಕುಂತಿಲ್ಲ; ನಿನ್ನಂಥಾ ಲುಚ್ಚಾ ಕಟ್ಕೋ ಬದಲು, ಯಾರಾನ ಬೀದ್ಯಾಗೋಗೋ ಮಾನವಂತನ ಗರತಿ ಆಗಿ

ಬಾಳ್ವೆ ಮಾಡ್ತೀನಿ...' ಅಂತ ಅಬ್ಬರಿಸಿದ್ಳು. ಇಂಥಾ ದುಸ್ವರ ನೆರೆ ಹೊರೇಗೆ ನಾನೂ ಉಸಾರಾಗಿ ಇರಲೇಬೇಕು – ಅನ್ನೋದು ಅವಳಿಗೆ ಮನದಟ್ಟಾಯ್ತು. ಎಷ್ಟು ದಿನಾಂತ ನಾನೂ ಒಂಟಿ ಪಿಸಾಚೀ ಥರಾ ಇರಾಕಾತದೆ; ಒಂದು ದಾರಿ ಕಂಡುಕೊಳ್ಳಬೇಕು... ಅಂತ ದುಡ ಮಾಡಿಕೊಂಡಳು.

ಇವಳ ಸ್ಥಿತಿಗೆ ಮರುಗಿದ ಕೆಲವು ಹಿತೈಸಿಗಳು ಇನ್ನೊಂದು ಮದುವೆ ಮಾಡಿಸುವ ಪ್ರಯತ್ನ ಮಾಡಿದರು. ನಾನು ಮದುವೆ ಆಗಿ, ಗೌರವದಿಂದ ನೋಡ್ಕಂತೀನಿ ಅನ್ನೋ ಯುವಕರೇ ಮುಂದೆ ಬರಲಿಲ್ಲ. ಎರಡು, ಮೂರನೇ ಮದುವೇಗೋ, ಕೂಡಾಣಿಕೆಗೋ ಆದರೆ, ಎಲ್ಲಾನಾ ಓಗ್ಲಿ, ಆತೀನಿ ಅಂತ ಕನಿಕರಿಸಿದವರೇ ಹೆಚ್ಚು. ಅದಕ್ಕೆ ಅವಳು ತಯಾರಿರಲಿಲ್ಲ. 'ಏನಿದ್ದರೂ, ನನ್ನದು ನನ್ನದೇ ಬದುಕು ಆಗಬೇಕು, ಅದಾಗಿದ್ದರೆ, ಹೀಗೇ ಇದ್ದರೂ ಹೆದರಲ್ಲ' – ಅಂದಳು. 'ನಿಮ್ಮಿಂದ ಆಗದಿದ್ದರೆ, ಅಂಥಾ ಕಾಲುಕ್ಕೆ ನಾನೇ ಹುಡಿಕ್ಯಂತೀನಿ..' – ಎಂದೂ ಗಟ್ಟಿಯಾಗಿ ಉತ್ತರಿಸಿದ್ದಳು.

*

'ಏನ್ರೀ, ನಿಮಗೆ ಮದ್ವೆ ಆಗ್ಯದಾ...?'

'ನಂದು ಮದ್ವೆ ಆಗ್ಯಾದೋ, ಇಲ್ಲವೋ ಅನ್ನೋದು ಮುಕ್ಯ ಅಲ್ಲ; ನಮ್ದು ದರ್ಮದಾಗೆ ನಾವು ಎಷ್ಟು ಬೇಕಾದರೂ ನಿಖಾ ಮಾಡ್ಕಂಬೌದು. ಅದ್ಸರಿ; ನನ್ನತ್ರ ಸಾಮಾನುಗಳ ಯಾಪಾರ ಕೇಳೋರೇ ಶ್ಯಾನೆ ಜನ; ನೀನು, ನಿಖಾ ಅಂತ ಕೇಳಿದ್ದು ಯಾಕೆ?'

'ಸುಮ್ಮನೇ ಕೇಳ್ದೆ...; ಊರೂರು ಸುತ್ತುತ್ತೀಯ, ಯಾಪಾರುಕ್ಕೇ ಅಂತ. ಪಾಪ, ನಮ್ಮದೂ ತಮ್ಮದೂ ಅಂತ ನೋಡೋರು ಮನ್ಯಾಗೆ ಯಾರಾನಾ ಅವರೋ, ಇಲ್ಲವೋ ಅಂತ...'

'ನನ್ನ ವಟ್ಟೆ ತುಂಬೋದೇ ಕಸ್ಟ. ಇನ್ನೊಂದು ಜೀವುಕ್ಕೆ ಯಾಕೆ ನೋವು ಮಾಡೋದೂ...' ಆಕಾಶದತ್ತ ಮುಖಾ ಮಾಡಿದ.

'ನಿನ್ ಜತೆ ನಾನೂ ಯಾಪಾರ, ಸಾಪಾರ ಮಾಡಿ ದುಡೀತೀನಿ...'

'ಅಯ್ಯೋ, ನಂದು ಒಂದು ಕಾಲು ಕುಂಟು...'

'ನಂದು ಎಲ್ಲೂ ಗಟ್ಯಾಗವೆ'

ಅವಳ ಗಟ್ಟಿ ದನಿಯ ಮಾತು ಕೇಳಿದ್ದೇ ಅವನು ಗಕ್‌ಪಟ್ಲು ಆಗಿ ನಿಂತುಬಿಟ್ಟ. ತಕ್ಷಣ, 'ಬ್ಯಾಡಾ, ಬ್ಯಾಡಾ..., ಜನಾ ನಮ್ಮುನ್ನ ಸುಮ್ಮನೇ ಬಿಡಲ್ಲ...' ಅಂತ ಒಂದೇ ಉಸುರಿಗೆ ಒದರಿ, ಹೋಗಾಕೆ ಹೆಜ್ಜೆ ಎತ್ತಿದ. ಅಡ್ಡ ಬಂದ ಅವಳು, 'ಹಂಗೆಲ್ಲಾ ಆಗಕಿಲ್ಲಾ; ನಾನು ಮನಸು ಮಾಡಿದ್ದು ಆಗ್ಯದೆ; ನೀನು ಒಲ್ಲೇ ಅಂದ್ರೆ, ನಿನ್ನ ಬೆನ್ನಾಡಿ ಬತ್ತೀನಿ; ಎಲ್ಲಿದ್ರೂ ಎಳಕಂಡು ತತ್ತೀನಿ. ಅಂದುಕೊಳ್ಳೋರೆಲ್ಲಾ ನಮ್ ಕೈ ಹಿಡಿಯಲ್ಲ. ಆದ್ರೆ, ಒಂದ್ ವಿಸ್ಯ : ನೀನು ನನಿಗೆ ಮಾತ್ರ ನಿಯತ್ತಾಗಿರಬೇಕು; ಬ್ಯಾರೆ ಯಂಡ್ರು ಗಿಂಡ್ರು ಅನ್ನಬಾರದು...' ಅವಳ ಗಟ್ಟಿ ಮನಸು ಅವನನ್ನು ಮುಟ್ಟಿತು.

*

ಗಂಡ ಯಾಪಾರುಕ್ಕೆ ಹೋದರೆ, ಇವಳು ಹಸ ಮೇಸ್ಕಂಡು ಬರೊಳು. ಈ ಊರಾಗೆ ಅಂಗಡಿ ಇಲ್ಲ. ಸಾಮಾನು ಬೇಕಾದ್ರೆ ದೂರದ ಊರಿಗೆ ಹೋಗಬೇಕು, ಇಲ್ಲಾಂದ್ರೆ, ವಾರುದ್ ಸಂತೆ ಕಾಯಬೇಕು. ಅವಳೊಂದು ಉಪಾಯ ಮಾಡಿ, ಬೀಡಿ, ಬೆಂಕಿಪಟ್ನ, ಹೊಗೆಸೊಪ್ಪು, ಕಡ್ಡಿಪುಡಿ, ಮಕ್ಕಳು ತಿನ್ನೋ ಪಾಪಂಪಪ್ಪು... ಇಂಥಾ ಚಿಲ್ಲರೆ ಮಾಲು ತರಿಸಿ ಅವುನ್ನೆಲ್ಲಾ ಒಂದು ಮಂಕರಿನಾಗೇ ಇಕ್ಯಂಡು ಯಾಪಾರ ಸುರು ಮಾಡಿದ್ಳು. ತಿಂಗಳೊಪ್ಪತ್ತಿನಲ್ಲಿ ಕುದುರಿಕೊಳ್ಳುತ್ತಿದ್ದಂಗೇ, ಟ್ರಂಕು ತರಿಸಿ, ಅದರಲ್ಲಿ ಇಕ್ಯಂಡು ಯಾಪಾರ ಮಾಡಿದ್ಳು. ಊರ ಜನಕ್ಕೂ ಕೈಗೆಟುಕಂಗೆ ಇದ್ದುದರಿಂದ, ಅತ್ತತ್ತ ಇದ್ದೋರೆಲ್ಲಾ ಇತ್ತ ಬರಂಗಾಗಿ ಇವರು ತಂದಿದ್ದೆಲ್ಲಾ ನಿಕಾಲ್ ಆಗಿಬಿಡೋದು. ಯಾಪಾರ ಹೆಚ್ಚಿದಂಗೆ, ಇವರ ಅಂಗಡೀನೂ ಹೆಚ್ಚಾಯ್ತು. ಸಂತೆಪ್ಯಾಟೇಲಿದ್ದಂಗೆ ನಾವೂ ಟೀ, ಕಾಫೀ, ಬೊಂಡ ಮಾಡಾಣಾಂತ ಮಾಡಿದ ಮ್ಯಾಲೇ ಅಂಗಡಿ ಬಣ್ಣಾನೇ ಬದಲಾಯ್ತು. ಮೊದಲಾದ್ರೆ, ಬೀಡಿ, ಬೆಂಕಿಪಟ್ನ ತಗೊಂಡು ಹೊಲ, ಮನೇಗೋತಿದ್ದೋರು, ಈಗ ಅಲ್ಲೇ ತಾಸು, ಅರ್ಧ ತಾಸು ಕುಂದ್ರಂಗೆ ಆಗಿ, ಸವಮ್ಮನ ವೋಟ್ಲಂಗಡಿ ಹಳ್ಳಿಯ ಗಂಡಸರ ಪ್ರಮುಖ ಠಿಕಾಣೀ ನೆಲೆಯೂ, ವ್ಯವಹಾರ ಜಾಗವೂ ಆಯಿತು. ಪ್ಯಾಟೆ ವಹಿವಾಟು ಕಂಡಿದ್ದ ಗಂಡ ಒಂದೊಂದು ಹೊಸ ಪಿಲಾನು ಮಾಡುತ್ತಿದ್ದಂಗೇ, ಯಂಡ್ರೂನೂ ಅದನ್ನ ಹೆಚ್ಚು ಮಾಡೋಕೆ ತಲೆ ಓಡಿಸುತ್ತಿದ್ದಳು. ಅವನು ಊರು ಮೇಲೆ ಯಾಪಾರುಕ್ಕೆ ಹೋಗೋದು ಬ್ಯಾಡಾ ಅಂದಳು. ಅರ್ಥವಾಗದಿದ್ದರೂ, ಹೆಂಡರ ಮಾತಿಗೆ ಬೆಲೆ ಕೊಟ್ಟನು. ಜನಾನೂ ಬ್ಯಾಸರ ಮಾಡಿಕೊಳ್ಳದೆ, ಹಳ್ಳು, ಹುಚ್ಚೆಳ್ಳು, ಸೀಗೇಕಾಯಿ, ಬೇವಿನ ಬೀಜ, ಇಪ್ಪೆ ಬೀಜ... ಇವನ್ನೆಲ್ಲಾ ಇಲ್ಲಿಗೇ ತಂದು

ಮಾರಂಗೆ ಆದರು. ಮಾರಿದ ಮೇಲೆ, ಹಂಗೇ ಅಂಗಡೀ ಯಾಪಾರ, ಹೋಟಲು ರುಚೀನೂ ನೋಡ್ಡೋರು. ವಹಿವಾಟು ಏರುತ್ತಿದ್ದಂಗೆ, ಊರು ಮುಂದಲ ಒಬ್ಬರ ಹಳೆ ಮನೇನ ಪಡೆದರು. ಈಗ ಅದು ಊರು ಮುಂದಲ ಸಿವಮ್ಮನ ವ್ಹೋಟ್ಲಂಗಡಿ ಅನ್ನೋ ಗುರುತಿನ ತಾಣ ಆಯ್ತು. ಅಲ್ಲಿ ಸಿವಮ್ಮ ಹಾಕಿದ್ದೆಲ್ಲಾ ಯಾಪಾರ, ಮುಟ್ಟಿದ್ದೆಲ್ಲಾ ಬಂಗಾರ ಅನ್ನಂಗಾಯತು. 'ಚಿಲ್ಲರೆ ಅಂಗಡೀನೋ, ಚಿನ್ನದ ಅಂಗಡೀನೋ..' ಅಂತ ಹಿರೀಕರು ಯೇಳೋದು ದಿಟಾ. ನೋಡು; ನಮಗ್ಯಾರಿಗೂ ಈ ತಲೇನೇ ಓಡಲಿಲ್ಲ... ಅಂತ ಕೆಲವರು ಪೇಚಾಡಿಕೊಂಡು, ಬೊಂಡ ಕುರುಕಿ ಹೋಗುತ್ತಿದ್ದರು.

ಲಕ್ಷ್ಮೀ ಎಲ್ಲಾ ಕಡೀಂದ ಒದ್ದಕೊಂಡು ಬಂದು ಇಲ್ಲಿ ಸರೀಬೇಕಾದರೆ ನಾವು ಏನು ಮಾಡಬೇಕು – ಅನ್ನೋದು ಸಿವಮ್ಮನಿಗೆ ಅರ್ಥವಾಗಿ ಹೋಯಿತು. ಪಾತ್ರೆ ಸಾಮಾನು ಅಡ ಇಕ್ಕಾಳಾದು, ಹೊಲಾ, ಮನೆ ಭೋಗ್ಯಕ್ಕಾಕ್ಕಳ್ಳೋದು, ಹಸ, ಕುರಿ ಪಾಲಿಗೆ ಮೇಸಾಕೆ ಬಿಡಾದು... ಹಳ್ಳೀ ಬದುಕು ಅಂದರೆ, ಒಂದೇ, ಎರಡೇ... ಲೇವಾದೇವಿ ಸಿವಮ್ಮ ಆದಳು; ಸಾವುಕಾರ ಸಿವಮ್ಮನೂ ಆದಳು. ಅಡ ಇಕ್ಕಿದೋರು ಬಿಡಿಸ್ಕೊಳ್ಳೋಕೆ ಆಗದಾಗ, 'ಈ ಊರುಮುಂದ್ಲಿ ದೆಸಿಂದ ನಮ್ ಮನ್ಯಾಗೆ ಉಣ್ಣಾಕೆ ಒಂದು ತಣಿಗೆ ಚಂಬು ಇಲ್ಲದಂಗೆ ಆಯಿತು' – ಅಂತ ನಿಟ್ಟುಸುರು ಇಡೋರು ಹುಟ್ಟಿಕೊಂಡರು. ಎಲ್ಲಿಂದಲೋ ಬಂದು ಇಲ್ಲಿ ಇಷ್ಟೆಲ್ಲ ಬಲವಾಗಿ ಬೆಳೆದ ಸಿವಮ್ಮನ ದಾಂಪತ್ಯಕ್ಕೆ ಕೆಲವರು 'ಜಿಹಾದ್'ನ ಬಣ್ಣ ಹಚ್ಚಿ, ಅವಳ ಬೇರು ಕೀಳುವ ಕಿತಾಪತಿಯ ಫಿಲಾನೂ ಮಾಡಿದರು. ಆದರೆ, ಆ ಹೊತ್ತಿಗೆ ಸಿವಮ್ಮಿನ ಹೋಟಲಂಗಡಿ ರುಚಿ ಕಂಡಿದ್ದ ಫಲಾನುಭವಿಗಳು, ಸಾಲದ ಉದ್ರಿಗಳು ನೀಡಿದ ಬೆಂಬಲದಿಂದ, ಊರ ಪಂಚಾಯ್ತೀಲಿ ತಾವೇ ಟಿಕೆಟ್ ಕೊಡಿಸಿ ಗೆಲ್ಲಿದಿದ್ದರಿಂದ ಸಿವಮ್ಮ ಮೆಂಬರೂ ಆದಳು; ಅದೆಲ್ಲಾ ಮೀರಿ, ಮೀಸಲಾತಿ ಪಂಚಾಯ್ತಿ ಅಧ್ಯಕ್ಷೆ ಪಟ್ಟವೂ ಸಿಕ್ಕಿಬಿಟ್ಟಿತು. ಹೀಗೆ ತಾನಾಗಿ ದೊರೆತ ಅವಕಾಶಗಳಿಂದ ಸಿವಮ್ಮ ತನ್ನಂಥಾ ಹೆಂಗಸರ ಕಷ್ಟ ಸುಖಗಳಿಗೆ ಏನಾದರೂ ಮಾಡಬೇಕೆಂಬ ಮನಸ್ಸು ಮಾಡಿದ್ದು ಅವಳ ಬದುಕು, ಮನಸ್ಸಿಗೆ ಸಹಜವಾಗಿಯೇ ಇದ್ದಿತು. ಅಂತೂ ಆ ಅವಧಿಯಲ್ಲಿ ಮಾಡಿದ ಮಹಿಳಾ ಪರ ಸೇವೆಗಳಿಗೆ ರಾಷ್ಟ್ರ ಮಟ್ಟದ ಪದಕ ದೊರೆತಾಗ, 'ಸಿವಮ್ಮ–ಅಂದರೆ, ಸಾಮಾನ್ಯಾನಾ...!'–ಎಂದೂ ಜನ ಕೊಂಡಾಡಿದರು.

*

‘ಶಿವಮ್ಮನವರೇ, ಊರಾಚೆ ಇದ್ದವರು ಊರು ನಡುವಿಗೆ, ಅಲ್ಲಿಂದ ಊರು ಮುಂದಕ್ಕೇ ಬಂದು ನಿಲ್ಲುವಂತಹ ಬದುಕು ಮಾಡಿದವರು ನೀವು. ಕಷ್ಟದಲ್ಲಿದ್ದು, ಮುಂದೇನು...? ಅನ್ನುವ ಮಹಿಳೆಯರಿಗೆ ಯಾವ ಕಿವಿ ಮಾತು ಹೇಳ್ತೀರಿ...’

– ಏನೂ ಇಲ್ಲದ ಸಂಕಷ್ಟದ ಸ್ಥಿತಿಯಿಂದ ಬಂದು, ಏನೆಲ್ಲಾ ಸಾಧಿಸಿದ, ಪುರುಷ ಪ್ರಾಬಲ್ಯದ ಸಾಮಾಜಿಕ ಅಡೆತಡೆಗಳನ್ನು ಧೈರ್ಯದಿಂದ ಎದುರಿಸಿ ಮುನ್ನುಗ್ಗಿದ ಗಟ್ಟಿಗಿತ್ತಿ ಮಹಿಳೆಯರನ್ನು ಕುರಿತ ಕಾರ್ಯಕ್ರಮದಲ್ಲಿ ನಿರೂಪಕಿಯು ಶಿವಮ್ಮ ಅವರನ್ನು ಬಹು ಉತ್ಸುಕತೆಯಿಂದ ಸಂದರ್ಶಿಸುತ್ತಿದ್ದರು. ‘ಸಾಮಾನ್ಯವಾಗಿ, ಕತೆಗಳಿಗೆ ಮಧ್ಯದಲ್ಲಿಯೋ, ಅಂತ್ಯದಲ್ಲಿಯೋ ಕ್ಲೈಮಾಕ್ಸ್ ಬರುತ್ತದೆ. ಆದರೆ, ಶಿವಮ್ಮನವರ ಬದುಕಿನ ಕತೆ ಶುರುವಾಗೋದೇ ‘ಕ್ಲೈಮಾಕ್ಸ್’ನಿಂದ; ಅಡಿಗಡಿಗೆ ಕ್ಲೈಮ್ಯಾಕ್ಸ್‌ಗಳು ಬರೋವಂತಹ ಅಪರೂಪದ, ಮಾದರಿ ಇವರು’ – ಎಂಬುದನ್ನೂ, ಬಹು ರೋಚಕವಾಗಿ ವರ್ಣಿಸಿದ್ದರು. ವೀಕ್ಷಕರು ನೇರವಾಗಿ ಮಾತಾಡುವ ಅವಕಾಶವನ್ನೂ ಕೊಟ್ಟಿದ್ದರು.

ಶಿವಮ್ಮನವರು ಉತ್ತರಿಸಲು ಬಾಯಿ ತೆರೆಯುತ್ತಿದ್ದಂತೆಯೇ, ವೀಕ್ಷಕರೊಬ್ಬರ ಆವಾಜು :

‘ಸಾಹಸೀ ಮಹಿಳೆಯರೆಂದು ತೋರಿಸುವ ಹುಮ್ಮಸ್ಸಿನಲ್ಲಿ ತಪ್ಪು ಮಾದರಿಗಳನ್ನು ತೋರಿಸುತ್ತಿದ್ದೀರಿ. ಇಂಥಾ ಶೋಗಳಿಂದ ನಮ್ಮ ಹೆಣ್ಣು ಮಕ್ಕಳಿಗೆ ಕೆಟ್ಟ ಪ್ರಚೋದನೆ ನೀಡಿದಂತಾಗುತ್ತದೆ. ದೇವರಿಗೆ ಸಮಾನನಾದ ಗಂಡನನ್ನು ಕಾಲಿನಿಂದ ಒದೆವಾಕೆಯನ್ನು ನಮ್ಮ ಸಂಸ್ಕೃತಿ, ಧರ್ಮ ಎಂದೂ ಒಪ್ಪುವುದಿಲ್ಲ... ಇಂಥಾ ಮಾದರಿಗಳ ಪ್ರಚಾರದಿಂದ ನಮ್ಮ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದೀರಿ... ಹೀಗೇ ಆದರೆ...’

ಪ್ರಸಾರವಾಗುತ್ತಿದ್ದ ದೃಶ್ಯ ಇದ್ದಕ್ಕಿದ್ದಂತೆ ಕತ್ತಲಾಗಿ, ರೆಕಾರ್ಡೆಡ್ ಜ್ಯೋತಿಷ್ಯ ಪ್ರಸಾರವಾಗತೊಡಗಿತು.

■

ಬಹುಮಾನಿತ
ಸಣ್ಣಕತೆ

ಸತ್ವ ಪರೀಕ್ಷೆ

• ಹ. ಶಿ. ಭೈರನಟ್ಟಿ

ನಾವು ಮೂವರು ಎಂದರೆ ಗೋಪಿ, ರಂಗ ಮತ್ತು ನಾನು. ಗೋಪಿಯ 'ಪರಿಮಳ' ಪತ್ರಿಕೆಯ ಆಫೀಸಿನಲ್ಲಿ ಕುಳಿತಿದ್ದೆವು.

ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಗೋಪಿ ನಮ್ಮನ್ನು ಕರೆಸಿಕೊಂಡಿದ್ದ. 'ಪರಿಮಳ'ದ ಓದುಗರಿಂದ ಚಿಕ್ಕ, ಅತಿ ಚಿಕ್ಕ ಕಥೆಗಳನ್ನು ಆಹ್ವಾನಿಸುವ ಯೋಜನೆಯನ್ನು ಆತ ಹಾಕಿಕೊಂಡಿದ್ದ. ಈಗಾಗಲೇ ಇತರ ಪತ್ರಿಕೆಗಳಲ್ಲಿ ಪ್ರಕಟವಾದ ಚಿಕ್ಕ ಚಿಕ್ಕ ಕಥೆಗಳನ್ನು ಸಂಗ್ರಹಿಸಿದ್ದ ಆತ ನಮ್ಮೆದುರಿಗೆ ಅವನ್ನು ಬಿಚ್ಚಿಟ್ಟ. ನಾನು ಕಣ್ಣು ಹಾಯಿಸಿದ ಕಥೆಗಳನ್ನು ರಂಗನಿಗೆ ಕೊಡತೊಡಗಿದೆ. ಅವನೂ ಅವುಗಳಲ್ಲಿ ತಲ್ಲೀನನಾಗಿ ತಿರುಗಿ ಗೋಪಿಯ ಕಡೆ ಸರಿಸುತ್ತಿದ್ದ.

ಗಾತ್ರದಲ್ಲಿ ಚಿಕ್ಕದಾದರೂ ಹಿರಿಮೆಯಲ್ಲೇನೂ ಕಡಿಮೆ ಇಲ್ಲ ಎಂಬ ಅಭಿಪ್ರಾಯ ನಮ್ಮಿಬ್ಬರದೂ ಆಯಿತು.

ಗೋಪಿ ಹೇಳಿದ – 'ಈಗಿನ ಧಾವಂತ ಯುಗದಲ್ಲಿ ನಮ್ಮ ಓದುಗರಿಗೆ ಇಂಥ ಚಿಕ್ಕ ಚಿಕ್ಕ ಕಥೆಗಳೇ ಬೇಕು. ಆದುದರಿಂದ ಒಂದು ಸ್ಪರ್ಧೆಯನ್ನೆ ಇಟ್ಟುಕೊಳ್ಳೋಣಾಂತ'

ಒಳ್ಳೆ ವಿಚಾರ ಅಂತ ಹುರುದುಂಬಿಸಿದೆವು.

ಗೋಪಿ ಚಹಾ ತರಿಸಿದ. ಚಹಾ ಕುಡಿಯುತ್ತಿದ್ದಂತೆ ರಂಗ ಮಾತಿಗಾರಂಭಿಸಿದ – 'ಬಹಳ ದಿವಸಗಳ ಹಿಂದೆ ಒಂದು ಚಿಕ್ಕ ಕಥೆಯನ್ನು ನಾನು ಓದಿದ್ದೆ. ವಿದೇಶಿ ಕಥೆಯದು. ಮೂಲ ಯಾವ ಭಾಷೆಯೋ ನೆನಪಿಲ್ಲ. ಇಂಗ್ಲೀಷಿಗೆ ಅನುವಾದಗೊಂಡಿತ್ತು. ನಂತರ ಯಾರೋ ಒಬ್ಬರು ಅದನ್ನು ಕನ್ನಡಕ್ಕೂ ಅನುವಾದಿಸಿದ್ದರು. ಕಥೆಯ ಶಿರ್ಷಿಕೆ...' ಎನ್ನುತ್ತ ತಲೆಗೆ ಕೈಯಿಟ್ಟ.

'ಕಥೆ ಹೇಳು' ಎಂದು ಒತ್ತಾಯಿಸಿದ ಗೋಪಿ.

'ಹೇಳೋದೇನು, ಬರೆದೇ ಕೊಡುತ್ತೇನೆ' ಎನ್ನುತ್ತ ಚಿಕ್ಕದೊಂದು ಹಾಳೆಯನ್ನೇ ತೆಗೆದುಕೊಂಡು ಅದರಲ್ಲಿ ಎರಡು ಭಾಗ ಮಾಡಿ ಪ್ರತಿಯೊಂದರಲ್ಲೂ ಕಥೆ ಬರೆದು ನಮಗೆ ಕೊಟ್ಟ.

ಶೀರ್ಷಿಕೆ : ಸ್ಥಿತಿಗತಿ

ಕಥೆ : ಆಗಿನ್ನೂ ಅಲ್ಲಿ ದೇವರಿದ್ದ.

ಮುಗಿದಿತ್ತು ಕಥೆ – ನಮ್ಮಿಬ್ಬರದೂ. ಉಳಿದ ಚಹಾವನ್ನು ಒಂದೇ ಗುಟುಕಿನಲ್ಲಿ ಮುಗಿಸಿದೆವು. ರಂಗ ಒಂದೊಂದೇ ಗುಟುಕು ಇಳಿಸುತ್ತಿದ್ದ.

ಗೋಪಿ ನಾನು ಪರಸ್ಪರ ಮುಖ ನೋಡಿ ಹುಬ್ಬೇರಿಸಿಕೊಂಡೆವು.

ಎಷ್ಟೋ ಹೊತ್ತು ಮೌನವೇ ಆವರಿಸಿತು.

ನಾನು ಹೇಳಿದೆ – 'ಒಂದೇ ಒಂದು ವಾಕ್ಯದಲ್ಲಿ ಹೇಳುವುದನ್ನೆಲ್ಲಾ ಹೇಳಿ ಮುಗಿಸಿಬಿಟ್ಟಿದ್ದಾನೆ ಕಥೆಗಾರ. ಶೀರ್ಷಿಕೆ ಕೂಡ ಸಮರ್ಪಕ. ಸ್ಥಿತಿಗೆ ಎಂಥಾ ಗತಿ' ಅದೂ ದುರ್ಗತಿ ಬಂದಿದೆ ನೋಡಿ, ದೇವರೇ ಅಲ್ಲಿಂದ ಹೊರಟು ಹೋಗಿದ್ದಾನೆ.' ದೀರ್ಘ ಉಸಿರು ಹೊರಹಾಕಿದೆ.

ಗೋಪಿ ದಂಗು ಹೊಡೆದು ಕುಳಿತುಬಿಟ್ಟಿದ್ದ.

ಆದರೆ ಏನಾದರೂ ಮಾತಾಡಲೇಬೇಕಲ್ಲ?

'ಅದ್ಭುತ ಕಥೆ' ಎಂದು ಮೊದಲು ಶರಾ ಹೊಡೆದು, 'ಎಷ್ಟು ಸೂಕ್ಷ್ಮವಾಗಿ ವಿಷಯವನ್ನೆಲ್ಲ ಒಂದು ವಾಕ್ಯದಲ್ಲಿ ಅಡಗಿಸಲಾಗಿದೆ ನೋಡಿ. ಇನ್ನೂ ಒಂದು ಸೂಕ್ಷ್ಮ ಎಂದರೆ ಕಥೆಗಾರನ ನಿರ್ಲಿಪ್ತತೆ. ಕತೆಯ ಕೊನೆಗೆ ಉದ್ಗಾರ ಚಿಹ್ನೆ ಕೊಡದೆ, ಪೂರ್ಣವಿರಾಮ ಕೊಟ್ಟಿದ್ದಾನೆ. ಅಲ್ಲಿಯ ಪರಿಸ್ಥಿತಿಯ ಕೊನೆಯನ್ನು ಪೂರ್ಣವಿರಾಮದೊಂದಿಗೆ ಮುಗಿಸಿಬಿಟ್ಟದ್ದಾನೆ. ಕಥೆಗೆ ಗಾಂಭೀರ್ಯತೆ ಇದರಿಂದಲೂ ಹೆಚ್ಚಾಗಿದೆ. 'ದಿ ಬೆಸ್ಟ್ ಸ್ಟೋರಿ' ಎಂದು ತೀರ್ಪು ಕೊಟ್ಟ.

ಸ್ವಲ್ಪ ಹೊತ್ತಿನ ಮೌನದ ನಂತರ ರಂಗ 'ಮೊದಲ ಸಲ ಈ ಕಥೆ ಓದಿದಾಗ, ಇದೇನು ಕತೆ, ಇಷ್ಟು ಚಿಕ್ಕದ್ದು ಕಥೆಯೇ, ಇದ್ಹೇಗೆ ಕಥೆಯಾಗುತ್ತದೆ' ಎಂದು ನನಗೆ ನಾನೇ ಪ್ರಶ್ನಿಸಿಕೊಂಡೆ.

'ಮೊದಮೊದಲು ಹಾಗನ್ನಿಸುವುದು ಸಹಜ' ಎಂದ ಗೋಪಿ, 'ಇದರಲ್ಲಿ ಕಥೆ ಹೇಗಿದೆ ಅನ್ನೋದಕ್ಕೆ ನಾನೊಂದು ಉದಾಹರಣೆ ಕೊಡುತ್ತೇನೆ, ಇಬ್ಬರೂ ಕಣ್ಮುಚ್ಚಿಕೊಳ್ಳಿ' ಎಂದ.

ನಾವು ಕಣ್ಮುಚ್ಚಿಕೊಂಡೆವು.

'ಕಲ್ಪಿಸಿಕೊಳ್ಳಿ, ಒಂದು ಕೆರೆಯಿದೆ. ಅದರಲ್ಲೊಂದು ಟೊಪ್ಪಿಗೆ ತೇಲುತ್ತಿದೆ. ಏನರ್ಥ?'

'ಯಾವನೋ ಒಬ್ಬ ತನ್ನ ಟೊಪ್ಪಿಗೆ ಚೆಲ್ಲಿ ಹೋಗಿದ್ದಾನೆ' ಎಂದ ರಂಗ. ಒಪ್ಪಲಿಲ್ಲ ಗೋಪಿ. ಅವನು ಕಲ್ಪಿಸಿದ್ದು ಬೇರೆ. 'ಟೊಪ್ಪಿಗೆಯ ಮಾಲಿಕ ಆ ಕೆರೆಯಲ್ಲಿ ಮುಳುಗಿ ಹೋಗಿದ್ದಾನೆ' – ಎಂದ.

ಗೋಪಿಯ ಕಲ್ಪನೆಯೂ ಸರಿಯೇ ಅನ್ನಿಸಿತು. ಗೋಣು ಹಾಕಿದೆವು.

ಗೋಪಿ ಮಾತು ಮುಂದುವರೆಸಿದ – 'ಸ್ಥಿತಿಗತಿಯಲ್ಲೂ ಅಂತರ್ಗತವಾಗಿದೆ ಕಥೆಯೊಂದು. ಕ್ರೌರ್ಯ, ಅಧರ್ಮ, ಅನೀತಿ, ಅಶಾಂತಿ ಇಂಥವೆಲ್ಲ ಗರಿಷ್ಠ ಮಟ್ಟ ಮುಟ್ಟಿರಬಹುದು. ಮನುಷ್ಯತ್ವವೇ ನಾಶವಾಗಿ ಹೋಗಿರಬಹುದು. ಕಥೆಗಾರ ಎಷ್ಟು ಜಾಣನೆಂದರೆ ದೇವರು ಹೊರಟು ಹೋಗಿದ್ದಾನೆ ಎನ್ನುವುದನ್ನೂ ಆತನೇ ಹೇಳಿಲ್ಲ. ಅದನ್ನೂ ಕಲ್ಪಿಸಿಕೊಳ್ಳಲು ನಮಗೇ ಬಿಟ್ಟಿದ್ದಾನೆ. ಅಲ್ಲಿಯವರೆಗೆ ಆತ ಅಲ್ಲಿದ್ದ. ಪರಿಸ್ಥಿತಿ ಹದಗೆಟ್ಟಮೇಲೆ ಬಿಟ್ಟು ಹೋಗಿದ್ದಾನೆ' – ಎಂದು ಕಥೆಯ ಅಂತರಂಗವನ್ನು ಬಿಚ್ಚಿಟ್ಟ.

'ಹೀಗೂ ಇರಬಹುದಲ್ಲ?' – ಎಂದು ಬಾಯಿ ಹಾಕಿದೆ ನಾನು. ಇಬ್ಬರೂ ನನ್ನತ್ತ ನೇರ ನೋಟ ಬೀರಿದರು.

'ನೀವಿಬ್ಬರೂ ಕೆಟ್ಟದ್ದನ್ನೇ ಯೋಚಿಸುತ್ತೀರಿ. ಈಗಿನ ಈ ಜಗತ್ತನ್ನು ನೋಡಿ ನೋಡಿ ಸಾಕಾಗಿ, ನಾನು ಇನ್ನೊಂದು ದೃಷ್ಟಿಯಿಟ್ಟು ನೋಡುತ್ತೇನೆ. ಅಧರ್ಮ ಜಾಸ್ತಿಯಾದಾಗ ದೇವರು ಹೊರಟು ಹೋಗುವುದಿಲ್ಲ. ಧರ್ಮ ಸಂಸ್ಥಾಪನೆಯಾದ ಮೇಲೆಯೇ ದೇವರು ಅಲ್ಲಿಂದ ಹೊರಟು ಹೋಗಿದ್ದಾನೆ' ಎಂದೆ.

ಗೋಪಿಯದೊಂದು ದೃಷ್ಟಿ, ನನ್ನದೊಂದು ದೃಷ್ಟಿ. ಯಾವುದು ಸರಿ, ಯಾವುದು ತಪ್ಪು? ಎರಡೂ ಸರೀನೇ?

'ನಿನಗೆ ಹೇಗನ್ನಿಸುತ್ತದೆ?' – ಎಂದು ಗೋಪಿ ರಂಗನನ್ನು ಕೇಳಿದ. ಅವನಾದರೂ ಏನು ತೀರ್ಪು ಕೊಡುತ್ತಾನೆ? ಯಾರಾದರೂ ಸರಿ ಅಂದರೆ ಇನ್ನೊಬ್ಬರದು ತಪ್ಪು ಅಂದಹಾಗಾಗುತ್ತದೆ.

'ನಮ್ಮ ಗುರುಗಳೊಬ್ಬರಿದ್ದರು. ಒಬ್ಬರು ಒಂದೇ ಒಂದು ಕಥೆ ಬರೆದರೂ ಅದನ್ನು ಎಷ್ಟು ಜನ ಓದುತ್ತಾರೋ ಅಷ್ಟು ಕಥೆಗಳನ್ನು ಬರೆದಂತೆಯೇ ಅಂತೆ. ಒಬ್ಬೊಬ್ಬರು ಒಂದೊಂದು ರೀತಿ ಅರ್ಥ ಮಾಡಿಕೊಂಡರೆ ಅವು ಬೇರೆ ಬೇರೆ ಕಥೆಗಳೇ ಆದ ಹಾಗಾಯ್ತಲ್ಲ?' – ಎಂದು ತನ್ನ ವಾದ ಮುಂದಿಟ್ಟ.

ನಾವಿಬ್ಬರೂ ನಮ್ಮ ಹುಬ್ಬುಗಳನ್ನು ಸಾಧ್ಯವಾದಷ್ಟು ಎತ್ತರಿಸಿದೆವು. ಮತ್ತೂ ಮುಂದುವರೆದ. 'ನೀವು ತಪ್ಪು ತಿಳಿದುಕೊಳ್ಳದಿದ್ದರೆ ಇನ್ನೂ ಒಂದು ವಿಚಾರ ಹೇಳ್ತೇನೆ' ಎಂದ. ನಾವಿಬ್ಬರೂ ಅವನ ಕಡೆ ನೋಡಿ 'ಹೇಳು' ಎನ್ನುವಂತೆ ಗೋಣು ಹಾಕಿದೆವು. ಹೇಳಿಯೇಬಿಟ್ಟ – 'ಕಥೆಗೆ ಅರ್ಥ ಅಂತ ಬೇಕೇ ಇಲ್ಲ' ಎಂದುಬಿಟ್ಟ. ನಾವಿಬ್ಬರೂ ನಿಬ್ಬೆರಗಾಗಿ ಅವನನ್ನು ನೋಡಿದೆವು.

'ಇದೇನೂ?' ಅಂದ ಗೋಪಿ.

ನನಗೆ ವಿಶ್ವಾಸವಿತ್ತು. ಅವನು ಸುಮ್ಮಸುಮ್ಮನೆ ಇಂಥ ಬೀಸುಹೇಳಿಕೆ ಬೀಸುವವನಲ್ಲ ಅಂತ. ಎಲ್ಲೋ ಏನೋ ಓದಿರಬಹುದು. ನನ್ನ ಊಹೆ ನಿಜವಾಗಿಯೇ ಇತ್ತು.

'ಒಂದು ಕಡೆ ಓದಿದ್ದೆ ನಾನು, ಬರೀ ಕಥೆಗೆ ಮಾತ್ರವಲ್ಲ. ನಮ್ಮ ಇಡೀ ಜೀವನಕ್ಕೆ ಅರ್ಥ ಅಂತ ಇರೋದಿಲ್ಲ. ನಾವು ನಮ್ಮ ಒಳ್ಳೆಯ ಕೃತ್ಯಗಳಿಂದ ಅದಕ್ಕೆ ಅರ್ಥ ತುಂಬಬೇಕಂತೆ' ಎಂದ.

ಗೋಪಿ ದೀರ್ಘವಾದ ಒಂದು ಉಸಿರು ಬಿಟ್ಟ.

ರಂಗನ ಮಾತು ನನಗೂ ಹಿಡಿಸಿತು. ಜೀವನಕ್ಕೆ ಅರ್ಥ ಹುಡುಕೋದರಲ್ಲೇ ಕೆಲವರು ತಮ್ಮ ಜೀವನದ ಅಮೂಲ್ಯ ಸಮಯವನ್ನು ಹಾಳು ಮಾಡಿಕೊಳ್ತಾರೆ. ತಮ್ಮ ಕರ್ತವ್ಯದ ಕಡೆ ಗಮನ ಕೊಟ್ಟು ಅಮೂಲ್ಯ ಕ್ಷಣಗಳನ್ನು ಸಾರ್ಥಕಮಯವಾಗಿಸಿಕೊಳ್ಳಬಹುದು.

'ಒಳ್ಳೆಯ ವಿಚಾರವನ್ನೇ ಹೇಳಿದ್ದಾನೆ ರಂಗ' ಎಂದು ಗೋಪಿ ನನಗೆ ಹೇಳಿದ. ರಂಗನ ಕಡೆ ಮೆಚ್ಚುಗೆಯ ನೋಟವನ್ನು ಹರಿಸಿ, 'ಕಥೆಯಲ್ಲಿ ಅರ್ಥ ತಾನಾಗಿಯೇ ಒಮ್ಮೊಮ್ಮೆ ಕಾಣಿಸದಿರಬಹುದು. ಆದರೆ ಸೂಕ್ಷ್ಮಗ್ರಾಹಿ ಮನಸ್ಸು ಕಥೆಯನ್ನು ಪತ್ತೆ ಹಚ್ಚುತ್ತದೆ. ಆದರೆ ಈ ಕಥೆಯಲ್ಲಿ ಅರ್ಥ ನಮಗೆ ಸ್ಪಷ್ಟವಾಗಿ ಕಾಣುತ್ತದೆ. ಕಥೆಗೆ ಮೂಲಭೂತವಾಗಿ ಬೇಕಾದುದು ಕಾಲ, ಸ್ಥಳ ಮತ್ತು ಕ್ರಿಯೆ. ಈ ಕಥೆಯಲ್ಲಿ ಮೂರೂ ಇವೆ. ಕ್ರಿಯೆಗೊಬ್ಬ ಕರ್ತೃ ಬೇಕು. ಕರ್ತೃ ಇಲ್ಲಿ ದೇವರಲ್ಲ, ದೇವರು ಹೋಗುವಂತೆ ಮಾಡಿದವರು. ಕ್ರಿಯೆಗೆ ಗಾಂಭೀರ್ಯ ಪ್ರಾಪ್ತವಾಗಿರುವುದು ಪರಿಣಾಮಕಾರಿಯಾಗಿದೆ. ದೊಡ್ಡ ಕಥೆಯಿಂದ ಬಿಂಬಿತವಾಗಬೇಕಿದ್ದ ವಿಷಯ ಒಂದೇ ಸಾಲಿನಲ್ಲಿ ಅಡಕವಾಗಿದೆ. ಅತ್ಯಂತ ಯಶಸ್ವಿ ಕಥೆ' – ಎಂದು ಘೋಷಿಸಿದ.

ಕಥೆಯ ಬಗ್ಗೆ ಚರ್ಚೆ ಅಲ್ಲಿಗೆ ಮುಗಿಯಿತು. ಬೇರೆ ವಿಷಯಗಳನ್ನು ನೆನಪಿಗೆ ತಂದುಕೊಂಡು ಅವುಗಳ ಬಗ್ಗೆಯೂ ಮಾತಾಡಿ, ಹರಟೆ ಹೊಡೆದು ನಮ್ಮ

ನಮ್ಮ ಮನೆಗೆ ಬಂದೆವು. ಕಥೆಯ ಆ ವಾಕ್ಯ ಮಾತ್ರ ಮೇಲಿಂದ ಮೇಲೆ ನೆನಪಿಗೆ ಬಂದು ಬೇರೆ ಬೇರೆ ಯೋಚನಗೆಳನ್ನು ಸ್ಫುರಿಸುತ್ತಿತ್ತು.

ಕ್ರೌರ್ಯ ಮಾನವನಿಂದ ಮಾನವನ ಮೇಲಷ್ಟೇ ಆಗಬೇಕೆಂದೇನಿಲ್ಲ. ಪರಿಸರದ ಮೇಲೂ ಆಗಬಹುದು, ಆಗುತ್ತಲಿದೆ. ಪರಿಸರದಲ್ಲಿ ಮಾಲಿನ್ಯ ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿದೆ. ಜಾಗತಿಕ ತಾಪಮಾನ ಏರುತ್ತಲಿದೆ. ಹೆಚ್ಚೆಚ್ಚು ಹಿಮ ಕರಗಿ ಸಮುದ್ರದ ಮಟ್ಟ ಏರಿಸುತ್ತಿದೆ. ದಡದಲ್ಲಿರುವ ಪಟ್ಟಣಗಳು ನೀರಿನಿಂದ ಆವೃತವಾಗಿ ಸಾವು ನೋವು ಸಂಭವಿಸುತ್ತಲಿವೆ. ಒಂದೊಂದು ಕಡೆ ಜಲಪ್ರಳಯವೇ ಆದಂತಾಗುತ್ತಿದೆ. ಮೂಲಭೂತ ಸೌಕರ್ಯಗಳಿಂದ ಜನ ವಂಚಿತರಾಗಿ ಕಾಲು ಕೀಳುತ್ತಿದ್ದಾರೆ, ಸುರಕ್ಷಿತ ಸ್ಥಳಗಳ ಕಡೆಗೆ ಧಾವಿಸುತ್ತಿದ್ದಾರೆ. ಸಾಮಾನ್ಯವಾಗಿ ಆಗ ದೇವರನ್ನೇ ಸಾಮಾನ್ಯ ಜನರು ಶಪಿಸತೊಡಗುತ್ತಾರೆ. ತಮ್ಮ ತಮ್ಮ ಕರ್ತವ್ಯಗಳನ್ನು ಮರೆಯುತ್ತಾರೆ. ವಾತಾವರಣದ ಸಮತೋಲನ ತಪ್ಪಿಸುವಲ್ಲಿ ತಮ್ಮದೂ ತಪ್ಪಿದೆ ಎಂಬುದನ್ನು ಮನಗಣುವುದಿಲ್ಲ. ಜನತೆ ಕಾಲ್ಕೀಳುವುದನ್ನೇ ಕಥೆಗಾರ ಸೂಚ್ಯವಾಗಿ ದೇವರೇ ಹೊರಟುಹೋದ ಎಂಬುದಾಗಿ ಕಲ್ಪಿಸಿ ಬರೆದಿರಬಹುದೇ?

ಇಂಥವೇ ಕಲ್ಪನೆಗಳು. ಇಡೀ ಜನಸಮುದಾಯವೇ ತಪ್ತಪ್ಪು ಹೆಜ್ಜೆಗಳನ್ನಿಡುತ್ತ ಹೋದಂತೆ.. ದೇವರು ಸ್ಥಳದಿಂದ ಸ್ಥಳಕ್ಕೆ, ದೇಶದಿಂದ ದೇಶಕ್ಕೆ ಕೊನೆಗೆ ಇಡೀ ಪೃಥ್ವಿಯಿಂದಲೇ ಹೋದಂತೆ ಕೆಟ್ಟ ಕೆಟ್ಟ ಕನಸುಗಳು... ಆ ಒಂದು ಚಿಕ್ಕ ಕಥೆ ಅಷ್ಟರ ಮಟ್ಟಿಗೆ ಪ್ರಭಾವ ಬೀರಿತ್ತು.

*

ಇಂಥದರಲ್ಲೇ ಗೋಪಿಯ 'ಪರಿಮಳ'ದ ಹೊಸ ಸಂಚಿಕೆ ಮಾರುಕಟ್ಟೆ ಪ್ರವೇಶಿಸಿತು. ಸ್ಪರ್ಧೆಯ ಬಗ್ಗೆ ವಿವರಗಳು ಇಡೀ ಪುಟವನ್ನು ತುಂಬಿಕೊಂಡಿದ್ದವು. ಯಾರು ಬೇಕಾದರೂ ಕಥೆ ಬರೆದು ಕಳಸಬಹುದಿತ್ತು, ಎಷ್ಟು ಬೇಕಾದರೂ ಕಳಿಸಬಹುದು. ತಮ್ಮ ವಿಳಾಸ, ಮೊಬೈಲ್ ಸಂಖ್ಯೆಗಳನ್ನು ಬೇರೆ ಪುಟದಲ್ಲಿ ಬರೆದು ಕಳುಹಿಸಬೇಕು.

ನಾಲ್ಕು ದಿನಗಳ ನಂತರ.. ಮಧ್ಯಾಹ್ನದ ಊಟ ಮುಗಿಸಿ ಸುಮ್ಮನೆ ಹಾಗೇ ಅಂಗಲಾಗಿದ್ದೆ. ಗೋಪಿಯ ಫೋನು ಬಂತು. ಈ ಹೊತ್ತಿನಲ್ಲಿ ಇವನದೇನು ಅಂತ ಫೋನ್ ಎತ್ತಿಕೊಂಡು 'ಏನ್ ವಿಶೇಷ?' ಎಂದು ಕೇಳಿದೆ.

'ಆ ದೇವರು ಇಲ್ಲಿಗೆ ಬಂದಿದ್ದಾನೆ' ಎಂದ, ನಗುತ್ತ.

ಬೇಗನೆ ನನಗೆ ಗೊತ್ತಾಗಲಿ ಎಂದು 'ಅದೇ ಆ ರಂಗನ ದೇವರು' ಎಂದ.

‘ಆಂ....?!’ ಎಂದೆ.

‘ಅದನ್ನು ಅವನು ಆಗಲೇ ರಚಿಸಿ ನಮಗೆ ತೋರಿಸಿದ್ದ. ಹಿತ್ತಲ ಗಿಡ ಮದ್ದಲ್ಲ ಅಂತ ನಾವಿಬ್ಬರೂ ಅದಕ್ಕೆ ಮಹತ್ವ ಕೊಡಲಿಲ್ಲ ಅಂದುಕೊಂಡು, ಬೇರೆ ದೇಶದ್ದು, ಓದಿದ್ದು... ಅಂತೆಲ್ಲ ಹೇಳಿ ವಿಷಯ ಮುಚ್ಚಿಟ್ಟಿದ್ದನಂತೆ. ಈವತ್ತು ಅವನಿಗೆ ಫೋನ್ ಮಾಡಿ ಕಥೆ ಬಂದಿದೆ ಅಂತ ಹೇಳಿದಾಗ ಎಲ್ಲವನ್ನೂ ಬಾಯ್ಬಿಟ್ಟ’ ಎಂದು ಗೋಪಿ ವಿವರಿಸಿದ.

‘ರಂಗ ಚಾಲಾಕಿ’ ಎಂದು ಅಭಿಪ್ರಾಯಪಟ್ಟು ನುಡಿದೆ.

‘ಎಷ್ಟೆಂದರೂ ನಿನ್ನ ಶಿಷ್ಯ ಅಲ್ಲವೇ?’ ಎಂದು ನನಗೇ ಮಾತು ತಿರುಗಿಸಿದ. ಮಾತು ಮುಂದುವರೆಸಿ ‘ಕಥೆಗಳ ಮಹಾಪೂರವೇ ಹರಿದು ಬರುತ್ತಿದೆ. ಎಲ್ಲವನ್ನೂ ನಿನಗೆ ಹೊತ್ತು ಹಾಕುತ್ತೇನೆ. ಯಾರಿಗೆ ಯಾವ ಬಹುಮಾನ ಕೊಡ್ತೀಯೋ ನೀನೇ ನೋಡು’ ಎಂತಲೂ ಹೇಳಿದಾಗ ‘ಇದೊಳ್ಳೆಯ ಸತ್ವಪರೀಕ್ಷೆ’ ಎಂದು ಮನದಲ್ಲಿಯೇ ಅಂದುಕೊಳ್ಳುವಾಗ ಹೊಸ ಯೋಚನೆ ಬಂತು. ಸಂಕಟ ಬಂದಾಗೆಲ್ಲ ನೆನಪಾಗುವವನೆಂದರೆ ಅವನೇ ವೆಂಕಟರಮಣ.

ಭಿಡೆ ಬಿಟ್ಟು ಹೇಳಿದೆ – ‘ನಿನಗೊಬ್ಬನಿಗೇ ಅಲ್ಲ, ಇಬ್ಬರಿಗೂ ಇದು ಧರ್ಮ ಸಂಕಟ ಅತವಾ ಕರ್ಮ ಸಂಕಟ. ಆ ದಿನ ಆ ಕಥೆಯ ಬಗ್ಗೆ ಅಷ್ಟೆಲ್ಲಾ ಚರ್ಚಿಸಿ ಈಗ ನಾವೇ ಅದನ್ನು ಇತರ ಕಥೆಗಳೊಂದಿಗೆ ಹೋಲಿಸಿ ನೋಡುವುದು ಸರಿ ಅನ್ನಿಸುವುದಿಲ್ಲ. ವೆಂಕಟರಮಣನಿಗೆ ಈ ಕೆಲಸ ಒಪ್ಪಿಸೋಣ’. ಅರ್ಥ ಮಾಡಿಕೊಂಡು ಒಪ್ಪಿದ.

ಸತ್ವ ಪರೀಕ್ಷೆಯಲ್ಲಿ ನಾವಿಬ್ಬರೂ ಸೋತಿದ್ದೆವು; ಕಥೆ ಗೆದ್ದಿತ್ತು.

ವೆಂಕಟರಮಣ ಅವರಿಂದಲೂ ಪ್ರಶಂಸೆಗೊಳಪಟ್ಟು ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗಳಿಸಿತ್ತು.

■

ಬಹುಮಾನಿತ
ಕವನಗಳು

೧. ಮುಗ್ಧತೆ ಮಾಯ!

● ಈಶ್ವರ ಕಾಪಸೆ

ಅಮ್ಮಾ ಅಪ್ಪಾ ನಮ್ಮಾ ಜೊತೆಯಲಿ
ತಮ್ಮಾ ತಂಗಿಯು ಯಾರಿಲ್ಲ ॥
ಅಕ್ಕಾ ಅಣ್ಣಾ ಅಜ್ಜಾ ಅಜ್ಜೀ
ಮಿಕ್ಕವರಾರೂ ಗೊತ್ತಿಲ್ಲ ॥೧॥

ಬೆನ್ನಿನ ಮೇಲಿನ ಕುರಿಮರಿ ಆಟದು
ಇನ್ನೂ ತನಕ ಗೊತ್ತಿಲ್ಲ ॥
ಬಗೆಬಗೆಯಿಂದಲಿ ಬಗಲಲಿ ಕೂಡಿಸಿ
ನೆಗೆದಾಡುವುದು ನೋಡಿಲ್ಲ ॥೨॥

ನಕ್ಕು ನಲಿಯುವ ಮುಗ್ಧತೆ ಸಮಯದಿ
ಚೊಕ್ಕಾ ಪ್ರೀತಿಯು ಸಿಗದಾಯ್ತು ॥
ಯಾರದೊ ಅಂಗಳ ಕಂಗಳ ಎದುರಲಿ
ಮೋರೆಯ ನೋಡುತ ತಿಂದಾಯ್ತು ॥೩॥

ನಿದ್ದೆಯು ಬಂದರೆ ಮಲಗಲು ನಮಗೆ
ಮುದ್ದಿನ ಮಾತೆಯ ಮಡಿಲಿಲ್ಲ ॥
ಅಕ್ಕರೆ ಅಮ್ಮನ ಬೆಚ್ಚನೆ ಅಪ್ಪುಗೆ
ಸಕ್ಕರೆ ನಿದ್ದಿಯ ಸುಖವಿಲ್ಲ ॥೪॥

ಬಾಟಲಿ ನೀರಿನ ಡಬ್ಬಿಯ ತಿಂಡಿಯ
ಬಾಟಲಿ ಗೆಳೆತನ ಬಾಲ್ಯದಲಿ ॥
ದೊಡ್ಡವರಾಗಲು ದೊಡ್ಡಾ ಬಾಟಲಿ
ಅಡ್ಡ ದಾರಿಯು ಬದುಕಿನಲಿ ॥೫॥

ವೃದ್ಧಾಶ್ರಮಗಳು ವೃದ್ಧಿಸಲಿಕ್ಕೆ
ಮುಗ್ಧಾಮಕ್ಕಳ ಶಾಪವದು ॥
ರೊಕ್ಕದ ಆಶೆಗೆ ಮಕ್ಕಳ ಮರೆತರೆ
ಪಕ್ಕಾ ಈಗಿನ ಶಿಕ್ಷೆಯಿದು ॥೬॥

ನಾಡಿನ ಆಸ್ತಿಯು ಮಗುವಿನ ಮುಗ್ಧತೆ
ಬಾಡುತಲಿರುವುದು ಬರಡಾಗಿ ॥
ಕೂಡಿಯೆ ಬಾಳಿರಿ ಎಲ್ಲರು ನೀವು
ಬೇಡುವೆ ನಿಮಗೆ ಶಿರ ಬಾಗಿ ॥೭॥

■

೨. ಶಿರವಿರದ ಶಿಲ್ಪ

● ಗಣಪತಿ ಹೆಗಡೆ

ಪ್ರಥಮ ಅಧ್ಯಾಯ

ಶಿರವಿರದ ಶಿಲ್ಪ ಸ್ವಾಗತಿಸುತ್ತಿದೆ ಪಂಚತಾರಾ ಹೊಟೆಲಿನ ಬಾಗಿಲಿನಲಿ
ಹರಡಿದೆ ಮಣಿಹಾರ ಬಿಚ್ಚು ಎದೆಯಲ್ಲಿ ತೆಳು ಸೆರಗು ಮುಚ್ಚಿದೆ
ಸ್ವಲ್ಪ, ಬಲವುಳ್ಳ ಕೈಗಳು ಕತ್ತಿಯಲಿ ತುಂಡಾಗಿವೆ ತೊಡೆ ಹೊರತು
ಕಾಲಿಲ್ಲ, ನಾಭಿಯ ಸುತ್ತ ಸುಡು ಸಿಗರೇಟಿನ ಏಟು
ಗುರಿ ಇಟ್ಟು ಹೊಡೆದಿದೆ ಕೈಕೋವಿಯ ಗುಂಡು

ದ್ವಿತೀಯ ಅಧ್ಯಾಯ

ಬರೆಯೋಣವೆಂದರೆ ಒಣಗಿಬಿಡುತ್ತದೆ ಶಾಯಿ
ನಿಬ್ಬು ಡೊಂಕಾಗಿ ನೇತಾಡುತ್ತದೆ ನಾಲಗೆ
ಸೆಟೆದು ನಿಲ್ಲುತ್ತದೆ ಪೆನ್ನು ಬಿಚ್ಚುಗತ್ತಿಯಂತೆ
ಕಲೆಯಿಲ್ಲದ ಬಿಳಿ ಕಾಗದ ಹತಾಶವಾಗಿ ಬಿದ್ದುಬಿಡುತ್ತದೆ ನೆಲಕ್ಕೆ

ಮೊದಲು ಕತ್ತಿಯಲ್ಲೇ ಕಾವ್ಯ ಬರೆಯುತ್ತಿದ್ದರಂತೆ
ರಕ್ತದಲ್ಲಿ ಅದ್ದಿ, ಶಾಸನಗಳು ಹೇಳುತ್ತವೆ
ಪುರಾಣ ಪುಣ್ಯಕಥೆಗಳು / ಹಲವು ಯುದ್ಧಗಳ ಕಥೆ

ತೃತೀಯ ಅಧ್ಯಾಯ

ಕೈಕಟ್ಟಿ ನಿಲ್ಲುತ್ತೇನೆ ಸುಳ್ಳು ಎದುರಾದಾಗಲೆಲ್ಲ
ಸತ್ಯದ ಕುರಿತು ವರದಿಸಲು; ಹ್ಯಾಟ್ ತೆಗೆದು ತಲೆ ತಗ್ಗಿಸಿರುತ್ತೇನೆ
ಸುಳ್ಳು ತಾಕೀತು ಮಾಡಿದೆ ಸತ್ಯ ಉಸಿರಾಡುತ್ತಿದೆ ಎಂದು
ಈಗ ಸತ್ಯ ಬದುಕಿದೆ ಉಸಿರಾಡದೇ ಬಹಳ ದಿನದಿಂದು

ಈಗೀಗ ಸತ್ತ ತಲೆ ಎತ್ತಿರುವುದನ್ನು ತಕರಾರು ಮಾಡಿದೆ ಸುಳ್ಳು
ತಲೆ ತಗ್ಗಿಸಿ ನಡೆದಿದೆ ಸತ್ಯ ಮುಖಾಮುಖಿ ದಿಕ್ಕಿಗಳ ನಡುವೆಯೆ
ನಡೆವ ದಾರಿಯ ತುಂಬ ಹುಸಿ ಹೆಜ್ಜೆಯ ಗುರುತು

'ನಾನೆಂದೂ ಹೇಳುತ್ತಿಲ್ಲ ಮಾಯೆ ಇರದೆ ಸತ್ಯ ಬದುಕದು ಎಂದು
ಮಾಯೆ ಎಂಬುದು ಹುಸಿ ಎಂದು' ಗಂಟಲು ಒಣಗಿದೆ
ಗಹಗಹಿಸುವ ಸುಳ್ಳನೆದುರೆ ತಡಕುತ್ತಿದ್ದೇನೆ ನೀರಿನ ಘಸೆಯನ್ನು

ಕೊನೆಯ ಅಧ್ಯಾಯ

ಮಗ ಕೈ ಮುಷ್ಠಿಯ ಬಿಗಿ ಹಿಡಿದಿದ್ದಾನೆ
ನೋಡುತ್ತಿದ್ದಾನೆ ಕಿಟಕಿ ಮೂಲಕ ನನ್ನ ವಿಚಾರಣೆಯನ್ನು
ತಲೆಬಗ್ಗಿಸಿ ಕೈಕಟ್ಟಿ ನಿಂತು ಸುಳ್ಳಿಗೆ ಒಪ್ಪಿಸುತ್ತಿರುವ ವರದಿಯನ್ನು...॥

■

೩. ಕಾಲಾತೀತ ತಲಬು

● ನಾಗರೇಖಾ ಗಾಂವಕರ

ಇದ್ದ ಬಿದ್ದ ಶಕ್ತಿಯನ್ನೆಲ್ಲಾ ಇಡಿಯಾಗಿಸಿ
ಕೊಂಡು ಹೊರಟೆ. ಉನ್ಮಾದ ತಡೆಯಲಾರದೇ
ಬಾಯಿ ತೆರೆದುಕೊಂಡೆ.
ಈಗ ಮೆಲ್ಲಲೇ ಬೇಕು ಕವಳ.
ಚಟ ಎಷ್ಟೆಂದರೂ ಚಟವೇ:
ಹುಡುಕಿದರೂ ಸಿಗಲಿಲ್ಲ ಸಂಚಿಯಲ್ಲಿ ನಾಲ್ಕಾಣೆ
ಹಂಗೆಲ್ಲ ಸಿಕ್ಕುವ ಸರಕಲ್ಲ.
ಎದುರಿಗೆ ಅದೇ ಹಳೆಯ ಶತ್ರು ಹಲ್ಲುಗಿಂಜುತ್ತ
ಧನದ ಥಾಲಿ ಹಿಡಿದ ಕೋರೆದಂತಗಳ ಧನಿಕ

ಹಂಬಲಿಸಿ ಲೇಪಿಸಿದ ಲಿಪ್ಟಿಕ್ಕು, ಕ್ರೀಮು, ಮುಖಬಣ್ಣಗಳು
ಸೋತು ಸುಣ್ಣವಾಗಿವೆ.
ಒತ್ತಿ ಕುಳಿತುಕೊಳ್ಳಲಾಗದೇ ಶತ್ರುವಿನಂತೆ.
ಕಾಲ ಕೈಯಲ್ಲಿ ಸಿಕ್ಕು ತರಗೆಲೆಗಳಂತೆ

ಮುದುಡಿ,
ತುಪ್ಪೆಯಾಗಿರುವ ಚರ್ಮದ
ಸುಕ್ಕು ನೋಡಿ ಮುಸಿ ಮುಸಿ ನಗುತ್ತ,
ಲೇವಡಿ ಮಾಡುತ್ತಿವೆ ಶತ್ರುವಿನಂತೆ

ಈಗಷ್ಟೇ ಬಿಚ್ಚಿಟ್ಟ ಬಳೆ ಮಂಗಮಾಯವಾದಂತೆ.
ಹುಡುಕಿ ಹುಡುಕಿ ಸಾಕಾಗಿ
ಪ್ರಾಯ ದಕ್ಕಿಸಿಕೊಟ್ಟ ಶತ್ರುವಿಗೆ ಹಿಡಿಶಾಪ ಹಾಕುತ್ತ
ಕೈ ನೋಡಿಕೊಂಡೆ. ಅರೇ ಯಾವಾಗ ಕೈ ಸೇರಿತು,
ಮಂದಿ ಮಗಂದು? ಜಿಗುಪ್ಸೆಯಾದರೂ ಚಿನ್ನ ಚಿನ್ನವೇ?
ಶತ್ರುವಾದರೇನು?

ಮೇಲಿನ ಕೇರಿ ಮಾಯಣ್ಣನ ಮಗಳು
ಮೈನೆರೆದಾಳಂತೆ. ದೇವರಿಗೆ ಬಿಡ್ತಾರಂತೆ.
ಅದಕ್ಕೆ ಬಳೆ ನೆನಪಾಯ್ತು.

"ಹೀರೇಕಿ ನೀನು, ನಿತ್ಯ ಸುಮಂಗಲಿ.
ಹರಸಿ ಹೋಗು ಬಾ" ಎಂದಿದ್ದ.
ಯಾವ ಕಾಲದಲ್ಲಿದ್ದಾನೆ ಮಾಯಣ್ಣ.
ಕಾಲ ಯಾವುದಾದ್ರೇನೂ ಈಗೆಲ್ಲ?
ಹೈಟೆಕ್ಕು ಕಾಲವಂತೆ. ಹೊಸ ನಮೂನೆ ದಂಧೆಗಳು.
ಗೊನೆ ಕಡಿದ ಬಾಳೆಹಂಗ ಬದುಕು.
ಹರಕು ಚಾಪೆ ಹಂಗೆ ದೇಹ ಆಗುತ್ತೆ ಅಂತ ಗೊತ್ತಿಲ್ಲೇನು?
ಕಟಕಟ ಹಲ್ಲು ಕಡಿಯೋದ ಬಿಟ್ಟು ಬೇರೇನೂ ಮಾಡೋಕಾಗಲ್ಲ.

ಹರಕು ಕಚ್ಚೆ ಧಣಿಗೂ
ಮೆಳ್ಳೆಗಣ್ಣ ಪೂಜಾರಿಗೂ ಬೆಂಕಿ ಹಾಕ.
ಅರೇ ಶತ್ರು ಅಂದ್ರೆ ಯಾರು?
ಈ ಕವಳದ ತಲುಬಿಗಿಷ್ಟು ಹೊಗೆ ಹಾಕ ತೂ.. ತೂ..

■

೪. ಶ್ರೀ ಮಾಚಿವ್ವ ದಲಿತರ ಖಾನಾವಳಿ

• ನಾಗೇಶ ತಳವಾರ

ನಮ್ಮೂರ ಬಸ್ ಸ್ಟ್ಯಾಂಡ್ ಪಕ್ಕದ
ಖಾನಾವಳಿ ಭಾಳಾSSS ಫೇಮಸ್ಸು
ಇಲ್ಲಿನ ಮಸಾಲೆ ಪರಿಮಳ
ನಾಸಿಕದ ಕಿಂಡಿಯಿಂದ ಹಾದು
ತೊಗಲಿನ ಹಂಡೆಗೆ ಬೆಲ್ ಹೊಡೆದಾಗ
ಗಿರಾಕಿಗಳ ಉದ್ದನೆಯ ಕ್ಯೂ

ಕ್ಲೀನರ್ ಕಂ ಸಪ್ಲೈಯರ್ ನೀರು
ಚಿಮುಕಿಸಿ ಟೇಬಲ್ ಸಾಫ್ ಮಾಡಿ
ಗಿರಾಕಿಗಳತ್ತ ಕಣ್ಣಾಡಿಸಿದ್ರ
ಅರ್ಧ ಡಜನ್ ಮಂದಿ ಗಾಯಬ್
ಅಂಗಡಿಯ ಬೋರ್ಡ್ ಕಂಡಿರಬೇಕು

ಇಡೀ ಅಂಗಡಿ ಶೋಧಿಸಿದಾಗ
ಮೆನು ಗೋಡೆ ಕಾಣಿಸಿತು
ಅರೆಬರೆ ಬೆಂದ ಅಕ್ಷರಗಳ
ನಡುವೆ ವೆಜ್, ನಾನ್‌ವೆಜ್ ರೇಟ್
ಇಪ್ಪತ್ತಕ್ಕೆ ರೊಟ್ಟಿ, ನಲ್ಲವತ್ತಕ್ಕೆ ಚಿಕನ್

ಇದು ಎಲ್ಲರಿಗೂ ಸಮಾನತೆ ನೀಡಿದ ಖಾನಾವಳಿ
ಒಂದೇ ಟೇಬಲ್, ಕುರ್ಚಿ, ಪ್ಲೇಟ್, ಗ್ಲಾಸ್
ಕೈ ಮೇಲೆತ್ತಿ ಚೆಲ್ಲುವ ಸಂಪ್ರದಾಯವಿಲ್ಲ
ಹಿತ್ತಾಳೆ ತಟ್ಟೆ, ಲೋಟ ಬಿಸಾಕಿ
ಕೂರಿಸುವ ಋತುಮತಿ ಜಾಗವಿಲ್ಲ
ಮಡಿ ಮೈಲಿಗೆ ಪದಗಳು ಇಲ್ಲಿ ಕೇಳಿಸಲ್ಲ...

ಮತ್ತೆ ಬನ್ನಿ. ಜಾಗವನ್ನ,
ಮನುಷ್ಯ ಜಾತಿ ತಾನೊಂದೆ ವಲಂ
ಅಕ್ಷರ ಅಲಂಕರಿಸಿತ್ತು...

■

೫. ತುರುಬು

● ಪ್ರಕಾಶ ಆರ್. ಕಮ್ಮಾರ

ಹೆಂಗಸರ ತಲೆ ಮೇಲಿದ್ದ ತುರುಬು
ಇದೀಗ ಗಂಡಸರ ತಲೆಯೇರಿದೆ
ಹೆಂಗಸರನ್ನು ತಲೆ ಮೇಲೆ
ಹೊತ್ಕೊಂಡ್ರೆ ಏನಾಗುತ್ತೆ ಅಂತಾ ಗೊತ್ತು
ಅದಕ್ಕೆ! ತುರುಬಾದ್ರು ತಲೆಯೇರಲಿ
ಎಂಬ ಮನಸ್ಥಿತಿ ಗಂಡಸರದ್ದು
ಕಾಲೇಜು ಹುಡುಗ್ರು ಅದಕ್ಕೆ ಜೋತು ಬಿದ್ದು
ಇದೊಂದು ಹೇರ್ ಸ್ಟೈಲ್ ಮೋಜು ಅಂತಿದ್ದು

ಶಿವ ತನ್ನ ತುರುಬಿನಲ್ಲೇನೋ
ಗಂಗೆಯನ್ನಿರಿಸಕೊಂಡ ಹೆದರಿ
ಆದರೆ! ಇಂದಿನ
ಗಂಡು ಹೈಕಳ ತಲೆಯೇರಿದ
ತುರುಬಿನಲ್ಲಿ ಏನೇನುಂಟೋ
ಒಮ್ಮೆ ತಲೆ ಹಿಂಭಾಗದಲ್ಲಿರುತ್ತೆ
ಕೆಲವೊಮ್ಮೆ ನೆತ್ತಿಯ ಮೇಲಿರುತ್ತೆ
ದೊಡ್ಡ ತುರುಬು ಚಿಕ್ಕ ತುರುಬು
ಅದಕ್ಕೊಂದು ಬಲೆ ಚಂದ ಕಾಣಲು
ತುರುಬೀಗೆ ಮೊಗ್ಗಾಗಿ ಬಾರೋ
ಎಂದಳೊಬ್ಬ ಪ್ರಿಯತಮೆ

ಸೌಂದರ್ಯ ಇಮ್ಮಡಿ
ತುರುಬು ಆಕರ್ಷಣೀಯ
ದುಂಬಿ ಸುತ್ತಲು ಸುಳಿದಾಡಲು
ಓರೆಗಣ್ಣು ಹಾಯಿಸದೇ ಇರದು ಮನಸು
ತುರುಬಿಗಾಗಿ ಮುಗ್ಗರಿಸಿದವರೆಷ್ಟೋ
ತುರುಬಿನ ಹಿಂದೊಂದೊಂದು ಕಥೆಯುಂಟು

ಹಾರಾಡುವ ಕನಸಿಗೆ
ರೆಕ್ಕೆ ಪುಕ್ಕ ಹಚ್ಚುವ ಮನಸು
ಸ್ತ್ರೀ ಪುರುಷರೆಂಬ ಭೇದ ಭಾವ ಅದಕ್ಕಿಲ್ಲ

ಋಷಿ ಮುನಿಗಳು, ರಾಮನನ್ನು, ಬುದ್ಧನನ್ನು
ಬಿಡದ ತುರುಬು ನೆತ್ತಿಯೇರಿತ್ತು

ನಾನು ಎಲ್ಲರಿಗಿಂತ ಬ್ಯೂಟಿ
ಯಾರು ನನಗಿಲ್ಲ ಸಾಟಿ
ಬೀಸುವೆ ಎಲ್ಲರಿಗೂ ಛಾಟಿ
ಆಡುವೆ ಎಲ್ಲರ ಬೇಟೆ
ತುರುಬು ತರುಬದೇ ಇರದು!

■

೬. ಅಸಂಗತ...

● ಪ್ರಕಾಶ ಬುದ್ದಿನ್ನಿ

ಬಯಲೊಳಗೆ ಬಂದಿ
ಬಂದಿಯೊಳಗೂ ಬಯಲು
ಬದುಕು ಬಂದಿಯೋ ಬಯಲೋ
ತಿಳಿಯಬೇಕಿದೆ

ಬಣ್ಣ ಬಣ್ಣದ ಸಾವಿರದ ಮುಖವಾಡಗಳು
ಲೋಕದ ತುಂಬಾ
ಅಣಬೆಯಂತೆ ಹುಟ್ಟುತ್ತಿವೆ...

ಮಾತಿಗೂ ಮೌನಕೂ
ಸೂತಕದ ಕರಾಳ ಛಾಯೆ
ಮೊಗ್ಗು ಹೂವಾಗುವ ಮುನ್ನವೇ
ರಕ್ತದ ಕಲೆಗಳು ಅಂಟುತ್ತಿವೆ

ಮರಳಲಿ ಕಟ್ಟಿದ ಮನೆ
ಬೆನ್ನಿಗಂಟಿದ ನೆರಳು
ಕನಸೋ ನನಸೋ
ನಾನರಿಯೆ ಈ ಗಳಿಗೆ

ಗಾಯಗೊಂಡು ಒದ್ದಾಡುವ
ಬದುಕುಗಳ ಕಂಡು ಕಂಡು
ಹಸನ್ಮುಖಿಯಾದ ದೇವರಿಗೆ
ಹಾಲಿನಭಿಷೇಕ ನಿತ್ಯನೈವೇದ್ಯ

ಎಲ್ಲ ಇದ್ದು ಚಡಪಡಿಸುವ ಮನಕೆ
ವಾಸಿಯಾಗದ ರೋಗ
ಮದ್ದೆ ಇಲ್ಲದ ವೈದ್ಯನಲ್ಲಿ
ಶಿವನ ಕಡೆಯೇ ತೋರುಬೆರಳು

ಹಗಲು-ಇರುಳು
ಬೆತ್ತಲಾಗಿ ಗಾಯಗೊಂಡಿವೆ
ಹಣ್ಣಾದ ಬದುಕಿನ ತುಂಬ
ಬಾಂಧವ್ಯವಿಲ್ಲದ ಹುಣ್ಣುಗಳೇ
ಜೋತು ಬಿದ್ದಿವೆ

ಕಣ್ಣ ಕೌಡಿಗೆಳೆಲ್ಲವೂ
ಅಪಶಕುನ ನುಡಿದಿವೆ
ಹಾದಿಗುಂಟ ಮಂಡಕ್ಕಿ
ಮಡಿಗೊಂಡಿವೆ
ಅವನದೋ/ಅವಳದೋ
ಹೊರಟ ಕೊನೆಯ ಕೊನೆಯ ದಿಬ್ಬಣಕೆ

■

೭. ರೋಜಾ

● ಮಧು ಬಿರಾದಾರ

ರೋಜಾ
ದಾಖಲಾಗುತ್ತವೆ ಇಲ್ಲಿ ಎಲ್ಲವು
ಹೆರಿಗೆ ನರಳಾಟ
ಕೃಷ್ಣ ಪಕ್ಷವಲ್ಲ
ಕಳ್ಳ ಬಸಿರಾದ ರಾತ್ರಿಗೆ
ಆಗಾಗ ತಿಂಗಳ ಬಂಕಿ

ಇಲ್ಲಿ ಎಲ್ಲವೂ ದಾಖಲಾಗುತ್ತವೆ ರೋಜಾ
ಭೂ ಅಂಗಾಂಗಕ್ಕೆ
ಎದೆ ಸೆಟೆಸಿ ಬಾಣ ಬಿಟ್ಟ ಸೂರ್ಯನು

ಉರಿಯುತ ಉರಿಯುತ
ಉರಿದು ಕೆಂಡವಾಗಿ
ತೆಪ್ಪಗೆ ಜಾರುವ ಕುರಿತು

ಬೇಡ ರೋಜಾ ಕಣ್ಣು ಮುಚ್ಚಬೇಡ
ಹಂದಿಯ ಕಚ್ಚಾಟ ಕಂಡು
ಇನ್ನೊಂದು ಥಾರ್ ಮರುಭೂಮಿ ಸೃಷ್ಟಿ ಇಲ್ಲಿಂದ
ಇಂದಿನಿಂದಲೇ ಪ್ರಾರಂಭ.
ಕದ್ದು ಮುಚ್ಚಿ
ನಿಗಿರಿನಿಂತ ನಗರ ಶಿಶ್ನದಿಂದ
ವೀರ್ಯ ಭೋರ್ಗರೆತ
ತಿಪ್ಪೆ-ಕೊಪ್ಪೆ ಗಟಾರ ತುಂಬಿ
ನೋಡುವವರೇ ಎಲ್ಲರೂ ಮೂಗು ಮುಚ್ಚಿ
ಹಾದರದ ದೊಡ್ಡ ದೊಡ್ಡ ಹಳ್ಳಿಯವರು

ಡವಗುಟ್ಟಿದೆ... ರೋಜಾ
ನಿನ್ನ ಗೋರಿಯ ಎದೆಬಡಿತ
ದಾಖಲಾಗುವ ಕುರಿತೋ
ಅಥವಾ ಕುತೂಹಲಕ್ಕಾಗಿ
ಕಾದ ಜಗದ ಬೊಬ್ಬೆಗೋ
ನನ್ನ ಗೋರಿ ಕಂಡಾದರೂ ತಂಗಾಳಿಯಾಗು
ಗೋಡೆ ಹಾರಿ ಅಂತರ ತಗ್ಗಿಸು

ಹಸಿದ ಕಣ್ಣೆದುರು ಗಟಾಗಟಾ
ಮತಿಯ ಉಚ್ಚೆ ಕುಡಿದ ತೋಳಗಳು
ದಾದ್ರಿ ಅಂಗಳ ತುಂಬ
ಕೆಂಪು ಸಮುದ್ರ
ಕಕ್ಕಿದ್ದೇ ಕಕ್ಕಿದ್ದು; ರೋಜಾ...
ಕಾಲನ ಕಣ್ಣಲ್ಲಿ ದಾಖಲಾಗುತ್ತಿವೆ ಎಲ್ಲವೂ

ದಿನವೂ ದಾಖಲಾಗುತ್ತಿವೆ
ವಿವಸ್ತ್ರ ಊನ
ಗೇಣು ಬಟ್ಟೆ ಹೊಟ್ಟೆ ಲಂಗೋಟಿ ಕುರಿತು

ಆಕಳ ಬಾಲ ಕಿತ್ತೆಸೆದು
ಗೇಣು ಭೂಮಿ ಕೇಳಿದ್ದಕ್ಕೆ
ಜೈಲು ಉಸಿರಾಟ; ಪರಕೀಯ ಪಟ್ಟ
ಪಟ್ಟಿ ಪಟ್ಟಿ ಮೈಚರ್ಮ
ನಾಜಿಯ ಕೆಂಪು
ಕಣ್ಮುಕ್ಕಿ ಪಾದದಲ್ಲಿಯೂ

ಗೆಳತಿ.... ಇಲ್ಲಿ ಎಲ್ಲ ಎಲ್ಲವೂ
ದಾಖಲಾಗುತ್ತಿವೆ
ಇಲ್ಲಿ ಯೋನಿ ಶಿಶ್ನ; ದ್ರಾವಿಡ ಆರ್ಯ ನೀಗ್ರೋ
ಏಕತ್ರದ ಆಪರೇಷನ್ ಚಡ್ಡಿಗಳ ಆಸ್ಪತ್ರೆಯಲ್ಲಿ
ಬಹುತ್ವ ಬೀಜ ನುಂಗುವ
ಬುಡಬುಡುಕಿ; ಮತಿಗೆಟ್ಟ ರಾಕ್ಷಸ ಕುರಿತು

ಬೇಡ ರೋಜಾ ಕಿರುಚಬೇಡಾ
ಬರಿ ದಾಖಲೆಯೇ? ಎಂದು
ನಿನ್ನ ಕಣ್ಣೀರಲ್ಲ
ನಿನ್ನ ಗೋರಿ ದ್ವೀಪವಾಗುವುದನ್ನು
ನೋಡಲಾರೆ
ನಿತ್ರಾಣಗೊಂಡ ನನ್ನ ಗೋರಿ
ದೂರದ ಬೆಟ್ಟವಾಗಿ

ನಿಜ....
ಜಗದ ಕಣ್ಣ ಕೆಂಡ ಸ್ಮಶಾನ ಸೃಷ್ಟಿಸಿದ್ದು
ತಡೆದು ಮುಳ್ಳ ಬೇಲಿ ಜಡಿದದ್ದು
ಗೋರಿಯಲ್ಲಿ ಒಂದಾಗುವಾಗ
ಭರವಸೆಯಾದರೂ ಇರಲಿ ರೋಜಾ
ದಿನವೂ ಕುದ್ದು ಕುದ್ದು ಜ್ವಾಲೆಯಾಗಿ
ಆಕಾಶಕ್ಕೆ ಚಿಮ್ಮಿ ಭೂಕಂಪವಾಗಿ
ಕೂಡುವ ಕುರಿತು
ರೋಜಾ ಇಲ್ಲಿ ಎಲ್ಲವೂ
ದಾಖಲಾಗುತ್ತವೆ.

■

೮. ವಾರಸುದಾರರು

● ರೇಖಾ ವಿ. ಬನ್ನಾಡಿ

ಬಾಗಿಲು ತೆರೆದೇ ಇತ್ತು
ಪಡಸಾಲೆಯಲ್ಲಿ ಬಂದು ಹೋಗುವವರ ಓಡಾಟ
ಕೆಲವರು ಕೋಣೆಯ ಒಳಗೆ
ಕೆಲವರು ಕೋಣೆಯ ಹೊರಗೆ
ಇನ್ನು ಕೆಲವು ಕೊಕ್ಕರೆಯ ಕೊರಳುಗಳು
ಹೊಸಿಲ ಆಚೀಚೆ ಹೊರಳುತ್ತಲಿತ್ತು

ಹೆಜ್ಜೆಯ ಸಪ್ಪಳ ಮೀರಿದ ದನಿಗಳು
ಕಿವಿಯ ತಮಟೆ ಮೀರಿ ಬಂದಿತ್ತು
ಒಂದೊಂದು ನಾಲಗೆಯಲ್ಲೂ ಒಂದೊಂದು ನುಡಿಮುತ್ತು
ಸೋಗಿನ ಅನುಕಂಪದ ಹೊದಿಕೆ ಹೊದ್ದು

ಛೇ ಹೀಗಾಗಬಾರದಿತ್ತು
ಆಗಬಾರದ್ದು ಆಗಿ ಹೋಯಿತು
ಮದುವೆಯಾಗುವ ವಯಸ್ಸು ನೋಡಿ
ಈ ವಯಸ್ಸಿನಲ್ಲಿ ವೈಧವ್ಯವೇ?

ಅವರವರ ತಾಪ ಅನುತಾಪಗಳೊಂದಿಗೆ
ಜಗದ ಕರುಣೆಯ ಮಾತಾಗಿ ಸುರಿದಂತೆ
ಇನ್ನೂ... ಇನ್ನೂ... ಇನ್ನೂ
ಸಂದು ಕಡಿಯದೆ ಸುರಿವ ಮಾತಿನ ಲಹರಿ
ಮನದ ಗಾಯಕ್ಕೆ ಉಪ್ಪು ಸವರಿದಂತಿವೆ
ಪ್ರಶ್ನೆಯ ಮೇಲೆ ಪ್ರಶ್ನೆ
ಪ್ರಶ್ನೆಯಲ್ಲಿ ಸಾವಿರ ಸಂಶಯದ ಬಲೆ

ಏನಾಯ್ತಂತೆ, ಏನೊಂತ ಗೊತ್ತಾಯ್ತಾ?
ಕಾರಣ ಅರಸುತ್ತ
ಕುರುಹುಗಳ ಜೋಡಿಸುತ್ತ
ಕಿರುಗಣ್ಣಲ್ಲೇ ಉತ್ತರಕ್ಕೆ ಕಾಯುತ್ತ

ಕಟ್ಕಟೆಯ ಇಕ್ಕುಳಕ್ಕೆ ಸಿಕ್ಕಿಸಿ
ನಿಂತು ನೋಡುವ ಭಂಗಿ
ಶುದ್ಧಾಂಗ ಶುದ್ಧ ಮಾನವೀಯ ವಾರಸುದಾರರಿವರು
ಮಾತಾಡುತ್ತಲೇ ಇದ್ದರು ಮಾತಾಡುತ್ತಲೇ ಇದ್ದರು

ಒಳಗೊಳಗೇ ನಡುಗಿದೆ, ಕೂತಲ್ಲಿ ಬೆಚ್ಚಿ ಬೆವರಿದೆ
ಗೋಡೆಗೆ ಮೈಯೊಡ್ಡಿ ನಿಂತೆ
ಹೃದಯದ ಆಕ್ರಂದನ ಅದುಮಿ ಹಿಡಿದೆ
ಸಂಯಮಕ್ಕೆ ಬೀಗ ಜಡಿದೆ

ಅಪ್ಪ ನೆನಪಾದರು.....

ಮಗಳೇ ಬಾಯಿ ಮುಚ್ಚಿರು, ಕಿವಿದೆರೆದಿರು
ಇಲ್ಲಪ್ಪ... ಸಾಧ್ಯವೇ ಇಲ್ಲ
ಕಿವಿ ಮುಚ್ಚಿದೆ, ಬಾಯಿ ತೆರೆದೆ
ಹೌದು, ಎಚ್.ಐ.ವಿ. ಪಾಸಿಟಿವ್
ಅವನ ದೇಹಕ್ಕೆ, ನಿಮ್ಮ ಬುದ್ಧಿಗೆ

■

೯. ಗಜಲ್

● ರೇಣುಕಾ ಎ. ಕಠಾರಿ

ನನ್ನೊಳಗಿನ ಮೌನ ಸಾವಿರದ ಶೂಲವಾಗಿ ಅಣಕಿಸುತಿದೆ ಸಖ
ನನ್ನೊಳಗಿನ ಮೌನ ನಿನ್ನ ಬಿರುಮಾತಿನೆದುರು ಸುಮ್ಮನೆ ಕೂತಿದೆ ಸಖ

ನನ್ನೊಳಗಿನ ಮೌನ ಹರಿಯುವ ನದಿಗುಂಟ ದೋಣಿಯ ತೇಲಿಸುತಲಿದೆ
ನನ್ನೊಳಗಿನ ಮೌನ ಅಬ್ಬರಿಸುವ ಅಲೆಗಳನು ತಲೆತಗ್ಗಿಸುವಂತೆ ಮಾಡಿದೆ ಸಖ

ನನ್ನೊಳಗಿನ ಮೌನ ಬರಿ ಮೌನವಷ್ಟೇ ಅಲ್ಲ ಮಾತಿನ ಧ್ಯಾನವೆಂಬುದು ಮರೆಯದಿರು

ಪರಂಪರೆಯ ಮೌನಗಳೆಲ್ಲ ಪಿಸುಮಾತಿನಲಿ ನಡೆದು ಮಾತಿನ ಮೆರವಣಿಗೆಯಲಿ ಹೆಜ್ಜೆ ಹಾಕಿದೆ ಸಖ

ನನ್ನೊಳಗಿನ ಮೌನವೆಂಬುದು ಅಸಹಾಯಕತೆಯಲ್ಲ ತಾಳ್ಮೆಯ
ಮೈಲುಗಲ್ಲದು
ನನ್ನೊಳಗಿನ ಮೌನವದು ನದಿಯೂ ಹೌದು ಸಮುದ್ರವೂ ಹೌದೆಂಬುದ
ನೀ ಅರಿಯಬೇಕಿದೆ ಸಖ
'ರೇಣು' ಮೌನವಾಗಿದ್ದದ್ದು ಬೊಗಸೆ ತುಂಬಿದ ನಿನ್ನ ಮೊಹಬ್ಬತ್‌ಗಾಗಿ
ನೆನಪಿರಲಿ ನಿನಗೆ
ನನ್ನೊಳಗಿನ ಮೌನದ ನೂರು ಭಾಷೆಯ ನೀನೇ ನೀನೇ ಅರಿತು
ಬಾಳಬೇಕಿದೆ ಸಖ

■

೧೦. ಅಗ್ನಿಕುಂಡ

• **ಸೋಮನಾಥ ಗೀತಯೋಗಿ**

ಕುಂತೆನು, ಕಿಡಿಯೊಂದು ಕೆಂಡವಾಗಿ
ಅಗ್ನಿಕುಂಡವೇಳುವುದೆಂದು ಕಾಯುತ್ತ;
ಎಲ್ಲಿಯ ಕಿಡಿ, ಚಕಮಕಿಯೇ ಕಾವಿಲ್ಲದೆ
ಮುದುರಿ ಬಿದ್ದಿದೆ ಮೂಲಿಯಲ್ಲಿ.
ಕತ್ತಲಲಿ ಕೈಯಾಡಿಸಿ ಹತ್ತಿಯನ್ನೊಂದಿಟ್ಟು
ಬತ್ತಿಯ ಮಾಡಿ, ಚಕಮಕಿಯ ನಡುವಿಟ್ಟು
ಹೊಡೆದರೆ, ಖಟ್‌ಖಡಲ್ಲೆಂದು ಸಿಡಿಲು
ಸಿಡಿಯಬೇಕೆ! ಹೊಲದ ಹಾಸಿಗೆಯಲ್ಲುರುಳಿ
ಬಿದ್ದಿವೆ ಮರಗಳುಳಿದ ಬೇರನ್ನೆಣಿಸುತ.
ಜಗದುಸಿರನೇ ಹೊತ್ತು ತಿರುಗುವ ಗಾಳಿ
ಎತ್ತ ಹೋಗಿಹುದೋ ಬಲೆ ಬೀಸಿ ಇತ್ತ!
ಗಟ್ಟಿ ಹಿಡಿದಿರಬೇಕುಸಿರು ಹಸುರಾರದಂತೆ;
ಇಂದಲ್ಲ ನಾಳೆ ಗಾಳಿ ಸುಳಿದಾಡಿ, ಹೊಗೆಯಾಡಿ,
ಕಿಡಿಯೊಂದು ಕೆಂಡವಾಗಿ ಅಗ್ನಿಕುಂಡವೇಳಬಹುದು;
ಈ ಭರವಸೆಯ ಬೆಂಕಿಯಿಂದ ಕೆಂಡ ಹಾಯಬಹುದು.

■

ಬಹುಮಾನಿತ
ಲಲಿತ ಪ್ರಬಂಧ

'ಇಲ್ಲ' ಎನ್ನುವುದು ಹೇಗೆ?

● ಜೆ. ಪಿ. ಕುಸುಮಾ

'ಇಲ್ಲಾ' ಎನ್ನುವುದು ಹೇಗಪ್ಪಾ! ಇದೊಂದು ಸಣ್ಣ ಸಮಸ್ಯೆ ಎಂದು ದೂಡಿ ಬಿಡುವ ಹಾಗಿಲ್ಲ. ಪ್ರಾಮಾಣಿಕ ಪ್ರವೃತ್ತಿಯವರಿಗೆ ಇದು ಸ್ವಲ್ಪ ಕಷ್ಟದ ಕೆಲಸ ಅನ್ನಿಸಬಹುದು.

'ಹೊರಗೆ ಹೊರಟಿದ್ದೀರಾ? ಬರುವಾಗ ಮೆಡಿಕಲ್‌ನಿಂದ ಈ ಔಷಧಿಗಳನ್ನು ತಗೊಂಡು ಬರ್ತೀರಾ?' ಎಂದು ಪಕ್ಕದ ಮನೆಯವರು ಕೇಳಿದರೆ ಏನು ಹೇಳುತ್ತೀರಿ? 'ನನ್ನ ದಾರಿಯಲ್ಲಿ ಮೆಡಿಕಲ್ ಸಿಗುವುದಿಲ್ಲ!' ಅನ್ತೀರಾ? 'ಕಿಸೆಯಲ್ಲಿ ಅಷ್ಟೊಂದು ದುಡ್ಡಿಲ್ಲ' ಎನ್ನಲು ಸರಿಯಾಗುತ್ತದೆಯೇ? ಆಗೊಲ್ಲ ನೋಡಿ. ಈ ಮಧ್ಯೆ ಇನ್ನೇನೋ ಸಂಕೋಚ. ಇಲ್ಲದ ಪ್ರತಿಷ್ಠೆ ಭೂತಾಕಾರವಾಗಿ ಎದ್ದು ನಿಂತು 'ಇಲ್ಲ' ಎನ್ನುವುದು ಕರಗತವಾಗಿರದವರಿಗೆ ಇದು ಬಹಳ ಕಷ್ಟದ ಕೆಲಸ ಎನ್ನಬೇಕಾಗುತ್ತದೆ. ಆದುದರಿಂದ ಗೋಣಾಡಿಸುತ್ತ 'ಆಯಿತು' ಎನ್ನಬೇಕಾಗುತ್ತದೆ.

ಕೆಲವೊಮ್ಮೆ ಈ 'ಆಯಿತು' ಎಂದ ಕೆಲಸವನ್ನು ಮಾಡಲು ಮರೆತು ಸಹಾಯ ಅಪೇಕ್ಷಿಸಿದ ವ್ಯಕ್ತಿಯ ಬಾಯಿಂದಲೇ, 'ಅಯ್ಯೋ ಮರೆತು ಬಿಟ್ಟೀರಾ? ನೀವು ಆಯಿತು ಅಂದಿರಲ್ಲ, ಆದುದರಿಂದ ಖಂಡಿತಾ ಈ ಕೆಲಸವನ್ನು ನೀವು ಮಾಡುತ್ತೀರಿ ಅಂದ್ಕೊಂಡಿದ್ದೆ. ಏನ್ರೋ ನೀವು...' ಎನ್ನುವುದನ್ನು ಕೇಳಬೇಕಾಗುತ್ತದೆ. ನಮ್ಮ ನೆನಪು ಶಕ್ತಿಯನ್ನು 'ದುರ್ಬಲ' ಎಂದು ಅವರು ಘೋಷಿಸುವಾಗ ನಿಜವಾಗಿ ನಾನು ಯಾಕಾಗಿ ಇವರಿಗೆ 'ಆಯಿತು' ಎಂದೆನೋ ಎಂದು ತನ್ನ ಮೇಲೆ ತಾನೇ ಸಿಟ್ಟುಗೊಳ್ಳುವಂತಾಗುತ್ತದೆ.

ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎಂಬಂತೆ ನಯವಾಗಿ ನಿರಾಕರಿಸುವುದು ಅಷ್ಟು ಸುಲಭವಲ್ಲ ಎಂಬುದು ಹೆಚ್ಚಿನವರಿಗೆ ತಿಳಿದಿರುವ ವಿಷಯ. ನೂರಿನ್ನೂರು ರೂಪಾಯಿ ಸಾಲ ಕೇಳುವವರಿಗೇನೂ ಕಡಿಮೆಯಿಲ್ಲ. 'ಇಲ್ಲ' ಎನ್ನಲಾಗುವುದೇ? ಕೆಲವೊಮ್ಮೆ ಈ ಮೊತ್ತ ದೊಡ್ಡದಾದರೂ ನಮಗೆ ತಿಳಿಯುವುದಿಲ್ಲ. ಏಳೆಂಟು ಸಲ ತೆಗೆದುಕೊಂಡದ್ದರಲ್ಲಿ ೩-೪ ಸಲದ್ದನ್ನು ನಮ್ಮ ಕೈಗಿರಿಸಿ ನಿಮ್ಮ ಎಲ್ಲಾ ಬಾಕಿ ಚುಕ್ತಾ ಆಯಿತಲ್ಲಾ ಅಂದರೆ 'ಇಲ್ಲಾ' ಅನ್ನಲಾಗುವುದೇ? ಒಂದು ವೇಳೆ 'ಅಷ್ಟಲ್ಲ, ಇಷ್ಟು ತೆಗೆದುಕೊಂಡಿದ್ದೀರಿ, ನಾನೇ

ನಿಮಗೆ ಕೊಟ್ಟದ್ದು. ಆದುದರಿಂದ ಇನ್ನು ಇಷ್ಟು ಹಣ ಬಾಕಿ ಇದೆ' ಎಂದೆಲ್ಲಾ ಭಾಷಣ ಬಿಗಿಯಲು ಹೋದರೆ ಪರಿಚಯ ಎಲ್ಲಿ ಹಳಸಿ ಹೋಗುತ್ತೋ, ಸ್ನೇಹ ಸೇತುವೆ ಎಲ್ಲಿ ಮುರಿದು ಬೀಳುತ್ತೋ.. ಎನ್ನುವ ದೂರದ ಭಯ ನಿಮ್ಮನ್ನು ಆವರಿಸಿದಂತಾಗಿ 'ಇಲ್ಲ' ಎನ್ನುವ ನಾಲಗೆ ಒಪ್ಪದು. ಬಾಯಿಯಿಂದ ಹೊರಬರಲು ಸದ್ದು ತಯಾರಾಗದು.

ಒಮ್ಮೆ ನನ್ನ ಪರಿಚಯದ ಹಿರಿಯರೊಬ್ಬರು ನನ್ನ ಆಫೀಸಿಗೆ ಬಂದರು. ಹೊರಬರಲಾರದಂತಹ ಕಷ್ಟದ ಬಗ್ಗೆ ಪೀಠಿಕೆ ಹಾಕಿ ಒಂದು ಲಕ್ಷ ರೂಪಾಯಿ ಕೊಡುವಂತೆ ಬೇಡಿಕೊಂಡರು. ಎರಡೇ ತಿಂಗಳಲ್ಲಿ ಹಿಂತಿರುಗಿಸುವುದಾಗಿ ಭರವಸೆಯನ್ನು ಹರಡಿ ಹೋಗಿ, ಬಾರಿ ಬಾರಿ ಫೋನಾಯಿಸಿದರು. ನನ್ನಲ್ಲಿ ಹಣವಿಲ್ಲದಿದ್ದರೂ 'ಇಲ್ಲ' ಎನ್ನಲಾಗದೆ ಜೀವದ ಗೆಳತಿಯೊಬ್ಬಳಿಗೆ ವಿಷಯ ತಿಳಿಸಿದೆ. ಆಕೆ ೧೫ ವರ್ಷಗಳಲ್ಲಿ PPF ನಲ್ಲಿ ಜಮಾ ಮಾಡಿದ., Housing Loan ಕಟ್ಟಲೆಂದು ಕನಸು ಕಾಣುತ್ತಿದ್ದ ಒಂದು ಲಕ್ಷ ರೂಪಾಯಿಯನ್ನು ನನಗೆ 'ಇಲ್ಲ' ಎನ್ನಲಾಗದೆ ಅವರಿಗೆ ಕೊಡಲು ಸಿದ್ಧಳಾಗಿ ಹಣವನ್ನು ನೀಡಿದಳು. ಆ ಮನುಷ್ಯ ಭರವಸೆ ನೀಡಿದ ೨ ತಿಂಗಳು ಕಳೆದು ೨ ವರ್ಷ ಆಗುತ್ತಾ ಬಂದರೂ ಹಣದ ಪತ್ತೆಯಿಲ್ಲ. ಆಗಾಗ್ಗೆ ಫೋನು ಮಾಡಿ ಬರುವ ತಿಂಗಳಲ್ಲಿ ಖಂಡಿತಾ ಕೊಡುವೆ ಎನ್ನುತ್ತಿದ್ದ ಅವರ ಫೋನು ಕೂಡಾ ಬರುಬರುತ್ತಾ ಸ್ವಿಚ್ಡ್ ಆಫ್ ಬರಹತ್ತಿತು. ಮನೆಯ ವಿಳಾಸವೂ ಇಲ್ಲ. ಪೂರ್ಣ ಹೆಸರೂ ತೀಳಿಯದು. ಇತರರಲ್ಲಿ ಹೇಳಿಕೊಳ್ಳಲು ಅಂಜಿಕೆ. ಯಾರಾದರೂ ಬೈಯದೆ ಬಿಡುವರೆ ಎನ್ನುವಂತಹ ಇತ್ಯಾದಿ ಸಾಮಾಜಿಕ ಭಯಗಳಿಂದಾಗಿ ತೆಪ್ಪಗಿದ್ದೆವು. ಒಂದೊಮ್ಮೆ ಆಕೆ ನನ್ನ ಬಳಿ ಗೋಳೋ ಎಂದು ಅತ್ತಳು. ಆಕೆಗೆ ಹಣದ ಅಗತ್ಯವಿತ್ತು. 'ನಿನ್ನಲ್ಲಿದ್ದರೆ ಕೊಡುವಿಯೇನೆ?' ಎಂದ ಅವಳ ಕಣ್ಣೀರ ಕಣ್ಣುಗಳನ್ನು ಕಂಡಾಗ 'ಇಲ್ಲ' ಎನ್ನಲಾಗದೆ 'ಆಯಿತು' ಎಂದೆ.

ಹೀಗೆ ಆ ವ್ಯಕ್ತಿಗೆ 'ಇಲ್ಲ' ಎನ್ನಲು ಸಾಧ್ಯವಾಗದೆ ಗೆಳತಿಯ ಬಳಿಗೆ ಹೋದೆ. ನನಗೆ 'ಇಲ್ಲ' ಎನ್ನಲು ಸಾಧ್ಯವಾಗದೆ ಅವಳು 'ಆಯಿತು' ಎಂದಳು. ಅವಳಿಗೆ 'ಇಲ್ಲ' ಎನ್ನಲಾಗದೆ ನಾನು 'ಆಯಿತು' ಎಂದೆ. 'ಇಲ್ಲ' ಎನ್ನುವ ಶಬ್ದ ಇಲ್ಲಿ ಜನ್ಮ ತಾಳುತ್ತಿದ್ದರೆ ಅದೆಷ್ಟು ಚೆನ್ನಾಗಿತ್ತು ಎಂದನ್ನಿಸಿತು..

ನಮ್ಮ ಮೇಲಿನ ಮನೆಯ ಮಿಸೆಸ್ ರಾವ್ ಒಮ್ಮೆ ನಮ್ಮ ಮನೆಗೆ ಬಂದು 'ನಿನ್ನಲ್ಲಿ ಮೂವ್ ಇದ್ದರೆ ಕೊಡಮ್ಮ, ಬೆನ್ನು ವಿಪರೀತ ನೋಯುತ್ತಿದೆ' ಎಂದರು. ತೆಗೆದುಕೊಟ್ಟೆ. ಹದಿನೈದು ದಿನ ಕಳೆದರೂ ಅವರ ಪತ್ತೆಯಿಲ್ಲ. ಹೀಗೆ 'ಇಲ್ಲ' ಎನ್ನುವುದರ ಗೆಳೆತನ ಬೆಳೆಸದೆ 'ಆಯಿತು' ಎನ್ನುವ ರೋಗಕ್ಕೆ ಬಲಿಯಾದರೆ

ಅದೆಷ್ಟೋ ಸಲ ಪೇಚಿಗೆ ಸಿಲುಕಬೇಕಾಗುತ್ತದೆ. ಹಾಗೆ ನೋಡಿದರೆ ಸೋನಿಯಾ ಗಾಂಧಿ ದೇಶದ ಪ್ರಧಾನಿ ಪಟ್ಟ ಕೈಯಲ್ಲಿದ್ದಾಗಲೂ 'ಇಲ್ಲ' ಎನ್ನುವುದನ್ನು ಹೇಳಿ ಅದರಂತೆ ನಡೆದುಕೊಂಡರು. ಅತ್ತೆಯನ್ನು, ಪತಿಯನ್ನು ಮುಗಿಸಿದ ದೇಶದ ಜನತೆ ತನ್ನನ್ನು ಈ ನೆಲದ ಮೇಲೆ ಉಳಿಸಿಯಾರೆ ಎಂದು ಆಕೆಗೆ ಅನ್ನಿಸಿದರೆ, ಅಜ್ಜಿಯನ್ನು, ಅಪ್ಪನನ್ನು ಕಳೆದುಕೊಂಡಿರುವ ನಾವು ತಾಯಿಯನ್ನು ಕಳೆದುಕೊಂಡು ಅನಾಥವಾಗುವುದು ಬೇಡ ಎಂದು ಮಕ್ಕಳ ಅಭಿಪ್ರಾಯವಾಯಿತು. ಒತ್ತಾಯದ ಮಹಾಪೂರವೇ ಹರಿದು ಬಂದಾಗಲೂ ಆಕೆ 'ಇಲ್ಲ' ಎನ್ನುವುದನ್ನು ಮತ್ತೆ ಮತ್ತೆ ನುಡಿದರು. ಅಂದರೆ ಯೋಚಿಸಿ ನುಡಿದ ಮಾತದು.

'ಇಲ್ಲ' ಎನ್ನುವುದು ಸೋನಿಯಾ ಗಾಂಧಿಗೆ ಹಾಗೂ ಆಕೆ ಪ್ರಧಾನಿಯಾಗಬಾರದು ಎನ್ನುವ ಒಳ ಆಶೆಯನ್ನು ಹೊಂದಿರುವ ಜನರಿಗೆ ಶಾಂತಿ ನೀಡಿತು. ಇನ್ನಿತರರಿಗೆ ಬೇಸರ ಅನ್ನಿಸಿರಬಹುದು. ಹೀಗೆ 'ಇಲ್ಲ' ಎನ್ನುವುದು ಶಾಂತಿ-ಅಶಾಂತಿ ಎರಡನ್ನೂ ಒಳಗೊಂಡಿರುತ್ತದೆ. ನಿಮಗೆ ಶಾಂತಿಯೆನಿಸಿದರೆ ಎದುರಿನವರಿಗೆ ಅಶಾಂತಿಯೆನಿಸಬಹುದು. ಆದರೆ ಇತರರಿಗೆ ಶಾಂತಿ ನೀಡಲೆಂದು ನಾವು ಅಶಾಂತಿಯನ್ನು ಆಲಂಗಿಸುವುದು ಯಾವ ಜಾಣತನ ಅಲ್ಲವೇ?

ಇಂತಹದ್ದು ಅನೇಕ ಸಲ ನಮ್ಮ ಬದುಕಿನಲ್ಲಿ ನಡೆಯುತ್ತಿರುತ್ತವೆ. ಕೋರ್ಟ್ ಕೇಸಿನಲ್ಲಿ ಬಂದಿಯಾಗಿರುವ ನಿಮ್ಮ ಪರಿಚಿತನಿಗೆ ಜಾಮೀನು ನೀಡಲು ನಿಮ್ಮನ್ನು (ಸ್ಯಾಲರೀಡ್ ಪರ್ಸನ್ ಆಗಿದ್ದರೆ) ಅತ್ಯಂತ ಗೌರವದಿಂದ ವಿನಂತಿಸಿಕೊಂಡರೆ ಜಾಮೀನು ನೀಡುತ್ತೀರಿ ಎಂದಿಟ್ಟುಕೊಳ್ಳಿ. ಆತ ಓಡಿಹೋದ ಪಕ್ಷದಲ್ಲಿ ಜಾಮೀನು ನೀಡಿದ ನಿಮ್ಮನ್ನು ಕೋರ್ಟು ಕರೆದು ಆತನನ್ನು ಹುಡುಕಿತರಲು ಇಲ್ಲವೇ ಜಾಮೀನು ನೀಡುವಾಗ ನಿಗದಿಪಡಿಸಿದ ಮೊತ್ತವನ್ನು ತುಂಬಿಸಲು ನಿಮಗೆ ಆದೇಶಿಸುತ್ತದೆ. ಅದೇ ರೀತಿ ಯಾರದೋ ಬ್ಯಾಂಕ್ ಸಾಲಕ್ಕೆ ಜಾಮೀನು ನೀಡಿದಾಗ ಅವರು ಕಂತುಗಳನ್ನು ಕಟ್ಟದೆ ತೆಪ್ಪಗಾದರೆ ನಿಮ್ಮ ಸಂಬಳದಿಂದ ಕಡಿತ ಶುರುವಾಗುತ್ತದೆ ಎಂದಾಗ ಹೇಗನ್ನಿಸುತ್ತದೆ? ಯಾಕೆ ಬೇಕಿತ್ತಪ್ಪ ಈ ಇಲ್ಲದ ಉಸಾಬರಿ. ನಾನೇಕೆ ಒಪ್ಪಿದೆ? ಎಂದು ತನ್ನನ್ನು ತಾನು ದೂಷಿಸಿಕೊಳ್ಳುವಂತಾದಾಗ 'ಇಲ್ಲ' ಅನ್ನುತ್ತಿದ್ದರೆ ಇಂದು ಈ ದಿನ ನೋಡಬೇಕಾಗುತ್ತಿರಲಿಲ್ಲ ಎಂದು ಅಂದುಕೊಳ್ಳುತ್ತೀರಿ ಖಂಡಿತ.

ಕೆಲವರಿಗೆ 'ಇಲ್ಲ' ಎಂದರೆ ಎಲ್ಲಿ ತಮ್ಮ ಘನತೆ ಗೌರವಕ್ಕೆ ಪೆಟ್ಟು ಬಿಳುವುದೋ ಎನ್ನುವ ಭಯವಾದರೆ ಇನ್ನು ಕೆಲವರಿಗೆ ನಾನೇನು ಪುಕ್ಕನೋ? 'ಆಯಿತು' ಎಂದಾಯಿತು. ಮತ್ತೆ ನೋಡಿದರಾಯಿತು ಎನ್ನುವಂತಹ ಮಕ್ಕಳ ಸ್ವಭಾವ. ಹೀಗಾಗಿ 'ಆ ಬೈಲ್ ಝುರೆ ಮಾರ್' ಎನ್ನುವ ಮಾತಿನಂತೆ ಕೆಲವೊಮ್ಮೆ

ದಾರಿಯಲ್ಲಿ ಹೋಗುವ ಸಂಕಟವನ್ನು ಎಳೆದು ಮೈಮೇಲೆ ಹೊದ್ದುಕೊಂಡಂತಾಗುತ್ತದೆ. 'ಆಯಿತು' ಎನ್ನುವ ಮೊದಲು ಸರಿಯಗಿ ಯೋಚಿಸಿ ನೋಡಿ. ಖಂಡಿತವಾಗಿ ಕೆಲವು ಕಡೆಯಲ್ಲಾದರೂ 'ಇಲ್ಲ' ಎಂದು ಹೇಳುವ ಅಗತ್ಯವನ್ನು ನಾವೇ ಮನಗಾಣುತ್ತೇವೆ.

■

ಕನ್ನಡ ಸಾಹಿತಿಗಳ ಮಾಹಿತಿ : ಪರಿಷ್ಕೃತ ಆವೃತ್ತಿ

ಮಾಹಿತಿಯ ನಮೂನೆ

ವಾಡಿಕೆಯ ಹೆಸರು (ಕಾವ್ಯನಾಮ) ....

ಹುಟ್ಟಿದ ತಾರೀಖು : .... ಹುಟ್ಟಿದ ಊರು/ತಾಲೂಕು/ಜಿಲ್ಲೆ ....

ಶೈಕ್ಷಣಿಕ ಸಾಧನೆ : .... ವೃತ್ತಿ ....

ಸಾಹಿತ್ಯ ಪ್ರಕಾರ – ಶೀರ್ಷಿಕೆಗಳು (ಪ್ರಕಟಿತ) : ....

ಪಿ.ಎಚ್.ಡಿ. ಥೀಸಿಸ್ ವಿಷಯ : ....

ಪ್ರಶಸ್ತಿ, ಪುರಸ್ಕಾರ, ಬಹುಮಾನ ಇತ್ಯಾದಿ ....

ನಿರ್ವಹಿಸಿದ ಜವಾಬ್ದಾರಿಗಳು : ....

....

ಅಂಚೆ ವಿಳಾಸ (ಪಿನ್‌ಕೋಡ್) : ....

....

ಫೋನು : .... ಮೊಬೈಲ್ ನಂ...

Email : .... Website : ....

ಬಹುಮಾನಿತ
ಲಲಿತ ಪ್ರಬಂಧ

ಜೀವಿಯೆಂದರೆ ಬುದ್ಧಿಜೀವಿಯೇ

● ಬ್ಯಾಡನೂರು ನಾಗಭೂಷಣ

ಮುಕ್ತಜೀವಿ, ಮುಗ್ಧಜೀವಿ, ಶ್ರಮಜೀವಿ, ಚಿರಂಜೀವಿ, ಬುದ್ಧಿಜೀವಿ, ಸುದ್ದಿಜೀವಿ, ಗುಡ್ಡದಜೀವಿ, ಗಡ್ಡದಜೀವಿ – ಅಬ್ಬಬ್ಬಾ! ಎಷ್ಟೊಂದು ರೀತಿಯ ಜೀವಿಗಳಿದ್ದಾರೆ? ಸಕಲ ೮೪ ಕೋಟಿ ಜೀವರಾಶಿಗಳಲ್ಲಿ ಮನುಷ್ಯವರ್ಗದಲ್ಲೇ ಇಷ್ಟೊಂದು ಜೀವಿಗಳಿದ್ದರೆ ಇನ್ನು ೮೩,೯೯,೯೯,೯೯೯ ಜೀವಗಳನ್ನು ವಿಂಗಡಿಸುತ್ತಾ ಹೋದರೆ ಎಣಿಕೆಗೆ ಸಿಗದ ಅದೆಷ್ಟು ರೀತಿಯ ಜೀವಿಗಳನ್ನು ನೋಡಬಹುದೋ ಏನೋ! ಅವುಗಳನ್ನು ಲೆಕ್ಕವಿಟ್ಟವರು ಯಾರಾದರೂ ಇದ್ದಾರೆಯೇ? ಇದ್ದರೆ ಅವರಿಗೂ ಒಂದು ನೊಬೆಲ್ ಪ್ರಶಸ್ತಿ ಕೊಡಬೇಕಾದೀತು! ಈ ಎಲ್ಲಾ ಜೀವಿಗಳನ್ನು ಒಂದೇ ಜೀವಿ ಸಂಗ್ರಹಾಲಯದಲ್ಲಿ ನೋಡುವಂತಿದ್ದರೆ ಪ್ರಪಂಚದ ಏಳು ಅದ್ಭುತಗಳಿಗಿಂತ ಮಿಗಿಲಾದ ಅದ್ಭುತ ಈ ಜೀವ ವೈವಿಧ್ಯದ ಅದ್ಭುತವೇ ಮೊದಲನೆಯದಾಗಿ ನಿಲ್ಲಬೇಕಾದೀತು.

ಪರಮ ಶ್ರೇಷ್ಠಜೀವಿ 'ಮುಕ್ತಜೀವಿ' ಎಂದರೆ ಯಾರೂ ತಕರಾರು ತೆಗೆಯುವುದಿಲ್ಲ. ಏಕೆಂದರೆ ಇವರು ಮೂರಕ್ಕೆ ಇಳಿಯುವುದಿಲ್ಲ, ಆರಕ್ಕೆ ಏರುವುದಿಲ್ಲ. ಇವರು ಸುಖ–ದುಃಖಗಳನ್ನು ಸಮನಾಗಿ ಸ್ವೀಕರಿಸುವವರು. ಸ್ಥಿತಪ್ರಜ್ಞರೆನ್ನುವರಲ್ಲಾ ಹಾಗೆ. ಇವರು ಯಾರ ಉಪಟಳಕ್ಕೂ ತಗ್ಗುವವರಲ್ಲ, ಬಗ್ಗುವವರಲ್ಲ. ಇವರನ್ನು ಹೊಗಳಿ ಹೊಗಳಿ ಹೊನ್ನಶೂಲಕ್ಕಿಕ್ಕಿದರೂ ಉಬ್ಬುವವರಲ್ಲ. ಆದರೆ 'ಮುಗ್ಧಜೀವಿ'ಗಳಿದ್ದಾರಲ್ಲಾ ಇವರನ್ನು ಯಾರು ಹೇಗೆ ಬೇಕಾದರೂ ಬಳಸಿಕೊಳ್ಳಬಹುದು. ಇವರ ವ್ಯಕ್ತಿತ್ವವನ್ನು ಹಿಂಡಿ ಹಿಪ್ಪೆ ಮಾಡಬಹುದು. ಇವರ ಬದುಕನ್ನು ಮೂರಾಬಟ್ಟೆ ಮಾಡಿ ಬೀದಿಗೆ ತಂದು ನಿಲ್ಲಿಸಬಹುದು. ತಮ್ಮ ಹಣೆಬರಹ ಇಷ್ಟೇ ಎಂದು ಹೊಂದಿಕೊಳ್ಳುವ ಜನ ಇವರು.

ರೈತರಲ್ಲೋ, ಕೂಲಿಕಾರ್ಮಿಕರಲ್ಲೋ, ನೌಕರವರ್ಗದಲ್ಲೋ ಕೆಲವರಿರುತ್ತಾರೆ. ಅವರು ತಮ್ಮ ಪಾಲಿಗೆ ಬಂದ ಕೆಲಸಕ್ಕೆ ಜೋತು ಬಿದ್ದರೆಂದರೆ ಮುಗಿದೇ ಹೋಯಿತು. ಪ್ರಪಂಚ ಪ್ರಳಯವಾದರೂ ಅವರಿಗೇ ತಿಳಿಯುವುದೇ ಇಲ್ಲ.

ಅಷ್ಟರ ಮಟ್ಟಿಗೆ ಅವರು ತಮ್ಮ ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಅಂಥವರನ್ನು 'ಶ್ರಮಜೀವಿಗಳು' ಎಂದು ಕರೆಯದಿದ್ದರೆ ತಪ್ಪಾದೀತು. ಇಂಥವರಲ್ಲಿ ಯಾರಾದರೂ ನಾಕಾರು ಎಮ್ಮೆಗಳನ್ನು ಕಟ್ಟಿದ್ದಾರೆನ್ನಿ. ಅವರು ಅವುಗಳ ಚಾಕರಿಯಲ್ಲೇ ಮುಳುಗಿಬಿಡುತ್ತಾರೆ. ಇವರ ಆದಾಯದಿಂದ ಮನೆಯು ಸಮೃದ್ಧಿಯಲ್ಲಿ ಮುಳುಗಿಹೋಗಿದ್ದರೂ ತಾವು ಮಾತ್ರ ತಮ್ಮ ತಲೆಗೆ ಎಣ್ಣೆಯನ್ನು ಹಚ್ಚಿಕೊಳ್ಳರು. ಹೊಟ್ಟೆಗೆ ಬೆಣ್ಣೆಯನ್ನೂ ತಿನ್ನರು. ಎಲ್ಲಾ ಇದ್ದರೂ ತಾವು ಮಾತ್ರ ಅರೆಹೊಟ್ಟೆ, ಅರೆನಿದ್ರೆಯಲ್ಲಿ ಕಾಲ ನೂಕುವರು. ಇಂಥವರನ್ನು ನೋಡಿಯೇ 'ನೆವ್ವಾರನ ಹೆಂಡತಿ ಬರೇ ಬೆತ್ಲು' ಎಂಬಂತಹ ಗಾದೆಗಳು ಹುಟ್ಟಿಕೊಂಡಿರಬೇಕು. ಇಂತಹವರು ತಮ್ಮ ತೋಟದಲ್ಲಿ ಹೂ ಬೆಳೆದರೆ ಅವನ್ನು ಅವರೆಂದೂ ಮುಡಿಯರು. ಹಣ್ಣು ಬೆಳೆದರೆನ್ನಿ, ಅವನ್ನು ತಿನ್ನಬೇಕೋ, ಬೇಡವೋ! ಎಂದು ಮೀನ ಮೇಷ ಎಣಿಸುವವರು. ಒಟ್ಟಾರೆ ಇವರು ಕೂಡಿಟ್ಟ ಗಂಟು, ಸುಖ-ಸೌಭಾಗ್ಯ ನೆಂಟಸ್ತನ ಬೆಳೆಸಬಂದವರ ಪಾಲಾಗುವುದಂತೂ ಸತ್ಯ.

ಪುರಾಣಗಳ ಕಾಲದಿಂದಲೂ ದೇವಾನುದೇವತೆಗಳೆಲ್ಲರೂ ಚಿರಂಜೀವಿಗಳಾಗಿರುವಾಗ ಪ್ರತ್ಯೇಕವಾಗಿ 'ಚಿರಂಜೀವಿ' ಎಂದು ಹನುಮನನ್ನು ಮಾತ್ರ ಬಿರುದು ಕೊಟ್ಟು ಸಂಬೋಧಿಸುವುದಾದರೂ ಏಕೆ? ಎಂದು ರಾವಣನ ವಂಶಸ್ಥರು ದೇವೇಂದ್ರನ ನ್ಯಾಯಾಲಯಕ್ಕೆ ಮೊರೆಹೋಗಿದ್ದರಂತೆ. ನ್ಯಾಯಾಲಯವು ವಾದ-ವಿವಾದವನ್ನು ಆಲಿಸಿ "ಹೆಂಗಸರುಗಳನ್ನು ಇಟ್ಟುಕೊಳ್ಳಲು, ಬಿರುದುಗಳನ್ನು ಕೊಡಲು ಯಾರೂ ಯಾವ ನಿರ್ಬಂಧಗಳನ್ನು ಹೇರುವಂತಿಲ್ಲ. ಅವರವರ ಮನಸ್ಸಿಗೆ ಬಂದ ಹಾಗೆ ಹೆಸರುಗಳನ್ನಿಟ್ಟುಕೊಳ್ಳಬಹುದು, ಬಿರುದುಗಳನ್ನು ಕೊಡಬಹುದು" ಎಂದು ತೀರ್ಪು ನೀಡಿತಂತೆ. ಅಂದಿನಿಂದ ಅಧರ್ಮಿಗಳೂ ಕೂಡ ಧರ್ಮರಾಜನೆಂತಲೂ, ಅಲ್ಪಾಯುಷಿಗಳು ಚಿರಂಜೀವಿಯೆಂತಲೂ, ದಟ್ಟದರಿದ್ರರು ಸಂಪತ್ತಯ್ಯಂಗಾರನೆಂತಲೂ ಹೆಸರಿಟ್ಟುಕೊಂಡರು. ಪುಸ್ತಕ ಹೊತ್ತು ಮಾರುವವರನ್ನು ಸರಸ್ವತಿಪುತ್ರ, ವಿಶ್ವಕೋಶವೆಂತಲೂ ಬಿರುದಾವಳಿಗಳನ್ನು ಕೊಟ್ಟು ಕರೆಯತೊಡಗಿದರು.

ಹಲವು ರೀತಿಯ ಜೀವಿಗಳ ಜೊತೆಗೆ 'ಬುದ್ಧಿಜೀವಿ'ಗಳ ವಿಚಾರ ಮಾಡದೇ ಹೋದರೆ ಹೇಗೆ? ಗಡ್ಡ ಬಿಟ್ಟು ಜೋಳಿಗೆ ಚೀಲ ನೇತಾಕಿಕೊಂಡು ಓಡಾಡುವವರು, ಗಡ್ಡಧಾರಿ ಸಾಹಿತಿಗಳು, ವಿಜ್ಞಾನಿಗಳು, ಸಿದ್ಧಿಗಳು, ಗುಡ್ಡ

ಗುಹೆಗಳಲ್ಲಿ ವಾಸಿಸುತ್ತಾ ಲೋಕ ಕಲ್ಯಾಣಕ್ಕಾಗಿ ತಪಸ್ಸು ಮಾಡುವವರು ಬುದ್ಧಿಜೀವಿಗಳೆಂದು ಭಾವಿಸುವುದುಂಟು. ನೀವು ಆ ರೀತಿ ಭಾವಿಸದಿದ್ದರೆ ಚಿಂತೆಯಿಲ್ಲ. ಚಿಂತೆಯಿಲ್ಲದಿದ್ದರೆ ಹೋಗಲಿ ಚಿಂತನೆಯನ್ನಾದರೂ ನಡೆಸಿದ್ದರೆ ನೀವೂ 'ಬುದ್ಧಿಜೀವಿ'ಗಳೇ ಎಂದು ಭಾವಿಸಬಹುದು! ನೀವು ನಿಜವಾಗಿಯೂ ಬುದ್ಧಿಜೀವಿಯೇ ಆಗಿದ್ದರೆ ಗಡ್ಡ ಬೆಳೆಸಬೇಕೆಂದೇನು ಇಲ್ಲ. ಗಡ್ಡ ಬೆಳೆಸಿದವರೆಲ್ಲರೂ ಬುದ್ಧಿಜೀವಿಗಳೆಂದು ನಂಬಿ ಮೋಸ ಹೋಗಬೇಡಿ. ನಮ್ಮ ಜನನಾಯಕರನ್ನೇ ಗಮನಿಸಿರಿ. ಮಹಾತ್ಮ ಗಾಂಧೀಜಿ, ಸರ್ ಎಂ. ವಿಶ್ವೇಶ್ವರಯ್ಯ, ಎ.ಬಿ. ವಾಜಪೇಯಿ, ಅಬ್ದುಲ್ ಕಲಾಂ, ಎಸ್. ನಿಜಲಿಂಗಪ್ಪ, ಡಿ. ದೇವರಾಜ ಅರಸ್ ಯಾರಿಗೆ ತಾನೇ ಗಡ್ಡ ಮೀಸೆಗಳಿದ್ದವು ಹೇಳಿ. ಇವರನ್ನು ಮುತ್ಸದ್ದಿಗಳು, ಬುದ್ಧಿಜೀವಿಗಳು ಎಂದು ಜನತೆ ಗುರುತಿಸಲಿಲ್ಲವೇ!

ಪಿಸುಮಾತಿನಂತೆ ಒಂದು ಒಳಗುಟ್ಟಿನ ಮಾತನ್ನು ಹೇಳುತ್ತೇನೆ ಕೇಳಿ. ಗದ್ದದಲ್ಲಿ ಏನೋ ಒಂದು ಐಬು ಇರುತ್ತದೆ! ಅದನ್ನು ಮುಚ್ಚಿಕೊಳ್ಳಲು ಅವರು ಗಡ್ಡ ಬಿಟ್ಟಿದ್ದರೆ ನೀವು ಅವರನ್ನು ಅಪಾರ್ಥ ಮಾಡಿಕೊಂಡು 'ಬುದ್ಧಿಜೀವಿಗಳು' ಎಂದು ಬಿರುದು ಕೊಟ್ಟರೆ ಹೇಗೆ? ಮನುಷ್ಯನು ಗಡ್ಡ ಬೆಳೆಸಲು ಹಲವು ಕಾರಣಗಳಿರುತ್ತವೆ. ಪುರಾತನ ಮಠಗಳ ಸ್ವಾಮಿಗಳು, ಋಷಿ-ಮುನಿಗಳು, ವಿಜ್ಞಾನಿಗಳು, ಸಾಹಿತಿಗಳು, ಹುಚ್ಚರು, ಬುದ್ಧಿ ಇಲ್ಲದವರು, ಕಾರಣವಿಲ್ಲದೆಯೂ ಕೆಲವರು ಗಡ್ಡ ಬಿಟ್ಟಿರುತ್ತಾರೆ. ಯಾರು ಯಾವ ಕಾರಣಕ್ಕೆ ಗಡ್ಡ ಬಿಟ್ಟಿದ್ದಾರೆ ಎಂದು ಹೇಳಲಾಗದು.

ಗಡ್ಡ ಬೆಳೆಸಲು ಹಲವು ಕಾರಣಗಳಿರುತ್ತವೆ. ಯಾವುದಾದರೂ ಹೆಣ್ಣು ಪ್ರೀತಿಸಿ ಕೈಕೊಟ್ಟಿರಬಹುದು. ಶೇವ್ ಮಾಡಲು ಹಣವಿಲ್ಲದೇ ಇರಬಹುದು! ಸೋಮಾರಿತನ ಇರಬಹುದು! ತಾವಿರುವಲ್ಲಿಗೆ ಬಂದು ಕ್ಷೌರ ಮಾಡುವವರು ಸಿಗದೇ ಇರಬಹುದು! ಸಮಸ್ಯೆಗಳು, ಚಿಂತೆಗಳು ಕಾಡತೊಡಗಿದಾಗ ಗಡ್ಡವನ್ನು ತುರಿಸಿಕೊಂಡರೆ ಥಟ್ಟನೆ ಐಡಿಯಾ ಹೊಳೆಯಬಹುದೆಂಬ ಗುಮಾನಿ ಇರಬಹುದು! ಗಡ್ಡ ಬಿಟ್ಟುಕೊಂಡಿದ್ದರೆ ಸಾರ್ವಜನಿಕ ಸ್ಥಳಗಳಲ್ಲಿ ವಿಶೇಷ ಗೌರವ ಅಥವಾ ರಿಯಾಯಿತಿ ಸೌಲಭ್ಯಗಳು ದೊರೆಯಬಹುದೆಂಬ ಭ್ರಮೆಯೂ ಇರಬಹುದು! ಅದೊಂದು ಶೋಕಿಯೂ ಇರಬಹುದು! ಕೌರವರ ಹಿತೈಷಿ ಶಕುನಿಯಂತೆ ತಾನೂ ಗಡ್ಡ ಬೆಳೆಸಿದರೆ ತನ್ನ ತಂಟೆಗೆ ಯಾರೂ ಬರಲಾರರೆಂಬ

ಬೌದ್ಧಿಕತೆಯೂ ಇರಬಹುದು! ಕಾರಣ ಯಾವುದೇ ಇರಲಿ ಗಡ್ಡ ಬೆಳೆಸುವುದು ಅವರವರ ಆಜನ್ಮಸಿದ್ಧ ಹಕ್ಕು ಎಂದರೆ ತಪ್ಪಾಗಲಾರದು.

'ರೋಮ್ ದೇಶವ ದೊರೆಯ ಗಡ್ಡಕ್ಕೆ ಬೆಂಕಿ ಬಿದ್ದಿದ್ದರೆ ಅವನ ಮಂತ್ರಿ ನೀರೋ ಪಿಟೀಲು ಬಾರಿಸುತ್ತಿದ್ದನಂತೆ!' ಆ ಗಡ್ಡದಲ್ಲಿ ಯಾವ ಐಬು ಇತ್ತೋ? ಅಥವಾ ಆ ಗಡ್ಡದಿಂದ ಯಾರಿಗೆ ಕೇಡಾಗುತ್ತಿತ್ತೋ ಏನೋ? ನೀರೋ ಬೆಂಕಿ ಬಿದ್ದ ಗಡ್ಡಕ್ಕೆ ನೀರೆರಚದೆ ಉದಾಸೀನ ತೋರಿಸುವುದು ಅವನ ಗುಣವನ್ನು ಸಾರುತ್ತದೆ. 'ಗಂಜಿ ಕುಡಿದವನಿಗೆ ಗಡ್ಡ ನೀವುವವನು ಒಬ್ಬ'ನಂತೆ. ಒಂದು ಕಡೆ ಗಡ್ಡದ ಮೇಲೆ ತಿರಸ್ಕಾರ! ಮತ್ತೊಂದು ಕಡೆ ಮಮಕಾರ! ಗಡ್ಡದ ಮಹಿಮೆ ಇಷ್ಟೇ ಎಂದು ಹೇಲಲು ಸಾಧ್ಯವಿಲ್ಲ.

ಮನುಷ್ಯನಿಗೆ ಐಬುಗಳು ಒಂದೇ ರೀತಿ ಇರುತ್ತವೆಯೆಂದು ಹೇಳಲಾಗುವುದಿಲ್ಲ. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂ. ಕರುಣಾನಿಧಿಯವರನ್ನೇ ಗಮನಿಸಿರಿ, ಅವರು ಸದಾ ಕಪ್ಪು ಕನ್ನಡಕ ಧಾರಿಗಳು. ಅವರ ಕಣ್ಣಿನಲ್ಲಿ ಅದಾವ ಐಬು ಇದೆಯೋ? ಗೊತ್ತಿಲ್ಲ. ಅವರ ಅನುಯಾಯಿಗಳಿಗೇನೂ ಕಡಿಮೆಯಿಲ್ಲ.

ಇನ್ನು ತಲೆ ಬುರುಡೆ ಬಾಂಡ್ಲಿ ಹಾಗೆ ಇದ್ದವರೆಲ್ಲಾ 'ವಿಗ್' ಹಾಕಿಕೊಂಡು ತಲೆತುಂಬಾ ಕೂದಲು ಇದ್ದವರಿಗಿಂತಲೂ ಸುರಸುಂದರಾಂಗರಾಗಿ ಓಡಾಡಿಕೊಂಡಿರುವರಲ್ಲಾ! ಇಂಥವರು ಮಾತ್ರ ತಮ್ಮ ಜುಟ್ಟನ್ನು ಎಂದೂ ಯಾರ ಕೈಗೂ ಕೊಟ್ಟವರಲ್ಲ ಬಿಡಿ! ಈ ಸಾಲಿಗೆ ಸೇರುವವರು ಸಭೆ ಸಮಾರಂಭಗಳಲ್ಲಿ ಆಗಾಗ್ಗೆ ತಮ್ಮ ತಲೆಯ ಮೇಲಿನ 'ವಿಗ್' ತೆಗೆದು ತಲೆ ಸವರಿಕೊಂಡರೆ ಒಳ್ಳೆಯದು. ಅಭಿಮಾನಿ 'ವಿಗ್' ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿ ಮಾರಾಟಗಾರರಿಗೂ ಲಾಭವಾದೀತು!

ತಲೆಯಲ್ಲಿ ಕೂದಲಿಲ್ಲದವರೂ ಬುದ್ಧಿಜೀವಿಗಳೆಂದು ತಿಳಿದಿರುವುದುಂಟು. ಅರ್ಧ ಚಂದ್ರ, ಮಿನಿ ಚಂದ್ರ, ಪೂರ್ಣ ಚಂದ್ರಾಕೃತಿಯ ಬುರುಡೆಯವರಿಗಿರುವಷ್ಟು ಅನುಕೂಲ ಮತ್ತಾರಿಗೂ ಇಲ್ಲವೆಂದು ತಿಳಿಯಬೇಡಿ. ಪ್ರತಿದಿನ ಶಾಂಪು, ಸೋಪು, ಎಣ್ಣೆ ಹಾಗೂ ಬಾಚಣಿಗೆಗೆ ಹಾಕುವ ಬಂಡವಾಳವನ್ನು ಒಟ್ಟುಗೂಡಿಸಿಯೇ ಇವರು 'ವಿಗ್' ಕೊಂಡುಕೊಳ್ಳುವುದು!

ಶರೀರದ ಅದೆಷ್ಟೋ ಅವಲಕ್ಷಣಗಳನ್ನು ಮುಚ್ಚಿಕೊಳ್ಳಲು ನಾವು ತೊಡುವ ಬಟ್ಟೆಗಳೂ ಒಂದು ವರವೇ! ಡ್ರಾಮಾಗಳಲ್ಲಿನ ರಾಮ, ಕೃಷ್ಣ, ಭೀಮ–

ದುರ್ಯೋಧನರಂತೆ ಕಾಣಲು ಸೌಂದರ್ಯವರ್ಧಕಗಳಿಗೆ ಮೊರೆ ಹೋಗುತ್ತೇವೆ. ಬಣ್ಣಬಣ್ಣದ ಮಾತುಗಳ ಮೂಲಕ ಮೋಡಿ ಮಾಡಿ ಸಹಜ ಸನ್ನಿವೇಶಗಳನ್ನು ಮರೆಮಾಡಿಕೊಳ್ಳುವ ಬುದ್ಧಿ ಬಹಳಷ್ಟು ಮಂದಿಗೆ ಇರುವಾಗ ಯಾರೋ ಕೆಲವರನ್ನು ಮಾತ್ರ ಬುದ್ಧಿಜೀವಿಗಳೆಂದು ವಿಜೃಂಭಿಸುವುದು ತಪ್ಪಲ್ಲವೇ!

ನಾನು ಕಂಡಿರುವಂತೆ ನರೆಗೂದಲಿಗೆ ಡೈ ಹೊಡೆಸಿ, ಕ್ರಾಪು ಕಟಿಂಗು ಮಾಡಿಸಿ, ಚಿಗುರು ಮೀಸೆ ಬಿಟ್ಟು ವಿವಾಹ ಮಹೋತ್ಸವಕ್ಕೆ ಸಿದ್ಧವಾಗಿರುವ ನವವರನಂತೆ ಕಾಣುವ ಸಾಹಿತಿ, ಕವಿ, ಕಲಾವಿದ, ನಿರ್ದೇಶಕ ಬುದ್ಧಿಜೀವಿಗಳಿದ್ದಾರೆ. ಸದಾ ಗಡ್ಡ-ಮೀಸೆಗಳೆರಡನ್ನೂ ನುಣ್ಣಗೆ ತೆಗೆಯುವ ಬಂಡಾಯ ಸಾಹಿತಿಗಳಿದ್ದಾರೆ. ಗಡ್ಡ-ಮೀಸೆಗಳನ್ನು ವಿವಿಧ ವಿನ್ಯಾಸಗಳಲ್ಲಿ ಪೋಷಿಸಿಕೊಂಡಿರುವ ರಾಜಕಾರಣಿ, ವಿಜ್ಞಾನಿ, ಸಾಹಿತಿ, ಸಾಧು-ಸಂತರಿದ್ದಾರೆ. ಮೇಲಿನ ಈ ಎಲ್ಲಾ ರೀತಿಯ ಲಕ್ಷಣಗಳು ಇದ್ದೋ ಇರದೆಯೋ ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವಾಗಿ ಮಾತನಾಡಿ ಹಲ್ಲೆಗೊಳಗಾದ ಬುದ್ಧಿಜೀವಿಗಳಿದ್ದಾರೆ.

ಇದೇನು? ಪುರಾಣ ವಿಚಾರಗಳ ಸಹಿತ ಓತಪ್ರೋತವಾಗಿ ಗಡ್ಡದಜೀವಿ/ಬುದ್ಧಿಜೀವಿಗಳ ಜನ್ಮ ಜಾಲಾಡಿಸುವ 'ಬುದ್ಧಿಜೀವಿ'ಗಳು ತಾವೇ ಎಂಬಂತೆ ಬಡಾಯಿ ಕೊಚ್ಚುತ್ತಿರುವಿರಲ್ಲಾ ಎಂದು ಭಾವಿಸಬೇಡಿ. ನನಗೂ ಕೂಡ ನನ್ನ ಬಗ್ಗೆ ಅನುಮಾನವೇ ಇದೆ. ಬುದ್ಧಿಜೀವಿಯೋ! ಲದ್ದಿಜೀವಿಯೋ! ಎಂದು ತಿಳಿಯಲು ನನಗೆ ಸಾಧ್ಯವಾಗಿಲ್ಲ. ಬದುಕಿನಲ್ಲಿ ಎಡವಟ್ಟುಗಳನ್ನು ಮಾಡಿಕೊಂಡಾಗಲೆಲ್ಲಾ ಅರಿವಿನ ಆಳಕ್ಕೆ ಇಳಿಯುತ್ತೇನೆ. ನನಗೆ ಯಾವಾಗ ಬುದ್ಧಿ ಬರುತ್ತದೆಯೋ ಎಂದು ಬಾಯಿಬಾಯಿ ಬಿಟ್ಟಿದ್ದೇನೆ. ಬುದ್ಧಿ ಮಾತ್ರ ಇನ್ನೂ ಬರಲೇ ಇಲ್ಲ. ಇಂತಹದ್ದೊಂದು ಲೇಖನ ಬರೆದು ಸುದ್ದಿಯಾಗಿ 'ಸುದ್ದಿಜೀವಿ'ಯಾಗಬೇಕೆಂಬ ಭ್ರಮೆಯೂ ಇಲ್ಲ. ಒಮ್ಮೆ ಗಡ್ಡ-ಮೀಸೆಯನ್ನು ಬೆಳೆಸಿ ನೋಡಿದೆ. ನೋಡಿದವರೆಲ್ಲರೂ ನನ್ನ ಮೇಲೆ ಅನುಮಾನ ಪಡುವಂತಾಯಿತು. ಗಡ್ಡ-ಮೀಸೆಯನ್ನು ನುಣ್ಣಗೆ ತೆಗೆದು ನೋಡಿದೆ, ಪ್ರಯೋಜನವಾಗಲಿಲ್ಲ. ಆ ದೇವರು ಯಾವಾಗ ಬುದ್ಧಿ ಕರುಣಿಸುತ್ತಾನೋ ಅವನೇ ಬಲ್ಲ!

■

ಬಹುಮಾನಿತ
ಲಲಿತ ಪ್ರಬಂಧ

ಗಾದೆಯ ಮೇಲೆ ಕುಳಿತುಕೊಂಡು...

• ಬಿ. ಎನ್. ಸೊಲ್ಲಾಪುರೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂದೆ ಮನೆಯಲ್ಲಿ. ಮಕ್ಕಳಾಗದಿದ್ದರೆ ಗಾದೆಯೂ ಸುಳ್ಳಾಗುತ್ತದೆ ಅಂದಳು. ಹೌದು ಅಂದೆ. ಗಾದೆ ಮಾತು ಅಂದರೆ. ಗಾದೆಯ ಮೇಲೆ ಕುಳಿತುಕೊಂಡು ಇಲ್ಲವೆ ಮಲಗಿಕೊಂಡು ಆಡುವ ಮಾತು ಎಂದು ತಿಳಿದಿದ್ದಾಳೆ ನನ್ನವಳು. ಕಾರಣ ಅವಳು ಅನಕ್ಷರಸ್ಥಳು. ಹಾಗೆಂದರೆ ಏನೂ ತಿಳಿಯೋದಿಲ್ಲ, ಏನೂ ಬರೋದಿಲ್ಲ ಅಂತಲ್ಲ. ಮಕ್ಕಳು, ಮೊಮ್ಮಕ್ಕಳು ಎಲ್ಲಾ ಇದ್ದಾರೆ. ಅಕ್ಷರಸ್ಥ-ಅನಕ್ಷರಸ್ಥರಲ್ಲಿ ಏನೇನೂ ವ್ಯತ್ಯಾಸವಿಲ್ಲ. ಏಕೆಂದರೆ ಅಕ್ಷರಸ್ಥ ಎಂದರೆ ಸಹಿಮಾಡಲು ಕಲಿತವರು. ಅನಕ್ಷರಸ್ಥರು ಸಹ ಇಂದು ಸಹಿ ಮಾಡಲು ಕಲಿತಿದ್ದಾರೆ ಅಲ್ಲವೇ? ಅದಕ್ಕೆ ಸುಶಿಕ್ಷಿತರಿಗೆ ಗಾದೆ ಮಾತು ಪಡೆನುಡಿ, ಪದತರ್ಲೆ ಎಲ್ಲಿ ಗೊತ್ತು. ಇವರಿಗೆ ಗಾದೆ ಮಾತು ಜಾಣರನ್ನಾಗಿಸುತ್ತದೆ.

ಗಾದೆ ಮಾತು ಅಂದರೆ ಗಾಥಾದಿಂದ ಕನ್ನಡಕ್ಕೆ ಬಂದದ್ದು ಇದೆ. ಗಾಥಾ, ಗಾಹೆ, ಗೀತೆ, ಗಾತೆ, ಗಾದೆ ಅಪಭ್ರಂಶ ಅಥವಾ ತತ್ಸಮದಿಂದ ತದ್ಭವ ಆದದ್ದು ಎಂದು ತಿಣುಕಿ ಹೇಳಬಹುದು. ಮುಂಬೈ ಬಾಂಬೆ ಆಗಿ ಪುನಃ ಮುಂಬೈ ಆದದ್ದು, ಕಲಬುರಗಿ, ಕಲಬುರ್ಗಿ, ಕಲ್ಬುರ್ಗಿ ಆಗಿದ್ದು ಇದೆ. ಹಾಗೆಯೇ ಮರಾಠಿಯಲ್ಲಿ ಕನ್ನಡದಿಂದ ಹೋದ ಶಬ್ದಗಳು ಬಲ್ಲೂರು-ಬಾಲೂರು, ತಂಡ-ತಾಂಡಾ, ಧೇನುಗಾರ-ಧನಗರ, ಘಟ್ಟ-ಘಾಟ್, ಸಕ್ಕರೆ-ಸಾಖರ, ತುಪ್ಪ-ತೂಪ, ಹೋಳಿ-ಪೋಳ್ ಹೀಗೆ ಸಂಸ್ಕೃತದಿಂದ ಇಂಗ್ಲೀಷ್‌ನಲ್ಲಿ ಹೋದವು ಮಾತೃ-ಮದರ್, ಪಿತೃ-ಫಾದರ್, ಭ್ರಾತೃ-ಬ್ರದರ್, ಹೀಗೆ ಒಂದರಲ್ಲಿ ಒಂದು ಸೇರಿ ಕಾಲ, ದೇಶದೊಂದಿಗೆ ಸೇರಿ ಬದಲಿಸುತ್ತ ಹೋಗುತ್ತದೆ ಎಂಬುದೂ ಸತ್ಯವೆ. ಆಗಲಿ ಗಾದೆ ಮಾತು ಎಂದರೆ ಅನುಭವದ ಮಾತು, ಅನುಭವದ ಮಾತು, ನುಡಿ ಮತ್ತು ಆಗುತ್ತವೆ ಎಂಬುದು ತಿಳಿದಿರಬಹುದು. ಶಬ್ದಾರ್ಥದಲ್ಲಿ ಮುಹಾವರೆ ಎಂದು ಬಳಸುತ್ತಾರೆ.

ಎಷ್ಟೇ ಶಿಕ್ಷಣ ಆಗಿರಲಿ ಪರಿಸರ, ಪ್ರಸಂಗ, ಅನುಭವಗಳಿಂದ ಗಾದೆ ಮಾತುಗಳು ಹುಟ್ಟಿಕೊಂಡಿವೆ ಎಂಬುದು ನಿತ್ಯ ಸತ್ಯವಲ್ಲವೇ? ಕೆಲವರು ಗಾದೆಗಳೇ ಸೇರಿಸಿ ಕಥೆ ಕಟ್ಟುತ್ತಾರೆ. ಪಡೆನುಡಿಗಳು ಹುಟ್ಟಿಕೊಂಡು ಮೂಗು ಮುರಿ, ಕಣ್ಣು ಚಿವುಟು,

ಬೆನ್ನು ತೋರಿಸು, ಮೂಗಿನ ಮೇಲೆ ಬೆರಳಿಡು, ಕೈಕೊಡು ಏನೆಲ್ಲಾ ಆಗಿವೆ. ಹಾಗೆ ಗಾದೆ ಮಾತುಗಳು ಅನಕ್ಷರಸ್ಥರಿಗೂ, ಸುಶಿಕ್ಷಿತರಿಗೂ, ಸುಸಂಸ್ಕೃತರಿಗೂ ಚೆನ್ನಾಗಿ ತಿಳಿಯುತ್ತವೆ. ಅರ್ಥವಾದರೂ ಒಮ್ಮೊಮ್ಮೆ ಅಪಾರ್ಥ, ಅನರ್ಥವೂ ಆಗುತ್ತವೆ. ಪಜ್ತಿಗೆ ಪರ್ಪಂಚ ಮಾಡಬಾರದು ಸರಿಯಾದದ್ದು; ಇದನ್ನೇ ಮಾಡಬೇಕು ಅನ್ನೋ ಅರ್ಥದಲ್ಲಿ ಹೇಳುತ್ತಾರೆ! ಈಗಿನ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಮಾಧ್ಯಮಾಂಗಗಳು ಹಾಗೇ ಆಗಿವೆ ಅನಿಸಿದ್ದಕ್ಕೆ 'ಕುಲಕ್ಕ ಹಾಟು ಅಂದ್ರ ತಲಾಗ್ ಸೌಟ' ಅಂಥಂಗ ಗಾದೆ ಮಾತು ಹುಟ್ಟಿರಬೇಕು. ಗೆದ್ದು ಹೋಗೋವರೆಗೆ ಒಂಥರ, ಗೆದ್ದಮೇಲೆ ಮೇಲರಿಮೆ ಮೂಡಿಸಿಕೊಂಡು ಪ್ರಜಾರಾಜರನ್ನೇ ಕೀಳಾಗಿ ಕಾಣುವವರು ಮನುಷ್ಯರಂತೂ ಅಲ್ಲ. ಇವರು God gives and gives and gives and forgives. Man gets and gets and gets and forgets ಅನ್ನುವಂತೆ ತಾಯಿಗಂಡನಾಗುತ್ತಾನೆ. ಗಂಡುಂದು ತಿಂದು ಮಿಂಡುಂದು ಹಾಡುತ್ತಾನೆ. ಪ್ರಜಾರಾಜರು ಎಮ್ಮೆ ತಮ್ಮಣ್ಣ ಆಗ್ತಾರೆ ಇಲ್ಲವೆ ಕೋಣ ತಂಗೆಮ್ಮ ಆಗ್ತಾರೆ! ಇದು ತೋರುಚಿ ಮಾತ್ರ, ತೋರುಚಿ ಅಂದ್ರ ಸ್ಯಾಂಪಲ್ಲು.

ಕಾಂಗ್ರೆಸ್‌ದವ್ರ ಮಾತು ಕಾಂಗ್ರೆಸ್‌ದವರಿಗೇ ಹೇಳಿದ್ರೆ ಮಲತಾಯಿ ಮಾತು ಮಲ ತಾಯಿ–ಮಗಳಿಗೆ ಹೇಳಿದಂತಾಗುತ್ತದೆ ಹೌದಲ್ಲವೇ?! ಅನೇಕ ಸಲ ಮೂರೂ ಪಕ್ಷಗಳಿಗೂ ಲಾಭಕೋರತನ ಬಿಟ್ಟು ಬೇರೆ ವಿಚಾರವೇ ಇರಲ್ಲ. ಆವಾಗ ಈ ಮೇಲಿನ ಗಾದೆ ಮಾತು ಸಹಜವಾಗಿ ಅನ್ವಯಿಸಿ ಪ್ರಜಾರಾಜರು ಇಂಗುತಿಂದ ಮಂಗ ಆಗ್ತಾರೆ. ಚೇಲಾ, ಚಮಚಾಗಳು, ಮತಲಬಿಗಳಾಗಿ ಬೇಳೆ ಬೇಯ್ಸಿ ಕೊಳ್ಳುತ್ತಾರೆ. ಶೆಟ್ಟರೆ ನಿಮ್ಮ ಮಗ ಬಿದ್ದ ಅಂದರೆ, ಫಾಯಿದೆ ಕಾಣದೆ ಬಿದ್ದಿರಲಾರ ಅಂದನಂತೆ – ಹಾಗೆ ಕತ್ತೆಗೆ ಮೂರು ಕಾಲುಗಳಿದ್ದರೂ ಸಾಕು ನಡೆಯುತ್ತದೆ ಎಂದು ಮುನ್ನುಗ್ಗುತ್ತಾರೆ ಅಷ್ಟೆ. ಮೂರೂ–ಬಿಟ್ಟವರು ಮೂರು ನಾಮ ಹಾಕ್ತಾರೆ ಎಂಬಂತಾಗಿ ಹಿಂದಿ ಮಹಾವರೆ ಪ್ರಸಿದ್ಧವಾಗಿದೆ ನೋಡಿ : ಫಡಿಂಗೆ ಲಿಖಿಂಗೆತೊ ಹೋಯಿಂಗೆ ಖರಾಬ್, ಕೂದಿಂಗೆ ಖೇಲಿಂಗೆ ತೋ ಬನೆಂಗೆ ನವಾಬ್. ಹೌದು ಕಷ್ಟ ಪಟ್ಟು ಅಭ್ಯಾಸ ಮಾಡಿದೆವು, ಎಸಿ, ಡಿಸಿ, ಎಸ್ಪಿ, ಡಾಕ್ಟರ್, ಇಂಜಿನಿಯರ್, ಪ್ರಾಧ್ಯಾಪಕ ಆಗ್ತಾರೆ. ದನ ಕಾಯಬೇಕಾದವರು, ಜೈಲು ಸೇರಬೇಕಾದವರು ಜನ ಪ್ರತಿನಿಧಿಗಳಾಗಿ, ಸಚಿವರಾಗಿ ಮೆರೆಯುತ್ತಿದ್ದಾರೆ. ಇಲ್ಲಿ ಪ್ರಜಾತಂತ್ರ ಇಲ್ಲವೆಂದೇ ಹೇಳಬೇಕಾಗುತ್ತದೆ. ಮೂರ್ತಿಗಳು ಸ್ವಾಮಿ, ಪೀಠಾಧಿಪತಿ, ಸಿಂಹಾಸನಾಧೀಶ್ವರರಾಗಿ ಎಲ್ಲರಿಗೂ ಗುರು ಆಗುತ್ತಾರೆ; ಗುರುಮತಿ ಆಗುತ್ತಾರೆ

ಆಗುತ್ತಾರೆ! ಇಂಥ ವ್ಯವಸ್ಥೆಯಲ್ಲಿ ಕತ್ತೆಗಳು ಕುದುರೆಗಳಾಗುತ್ತವೆ; ಕುದುರೆಗಳು ಕತ್ತೆಗಳಾಗುತ್ತವೆ! ಇದು ಸರಿಯಾಗಿಲ್ಲವೆ? ಹೇಳಿ?

ಕಾವೇರಿಯಿಂದಮಾ ಗೋದಾವರಿ ವರ ಮಿರ್ಜ ಕನ್ನಡದೊಳ್... ಏನಾಗಿದೆ ಈಗ? ಬೀದರ ಜಿಲ್ಲೆಯು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಕಲ್ಯಾಣವು ಮಧ್ಯ ಕರ್ನಾಟಕದಲ್ಲಿತ್ತು. ಈಗ ಈ ಭಾಗದಲ್ಲಿ ನಡೆದಾಡುವ ದೇವರೆಂದು, ಕನ್ನಡದ ಪಟ್ಟದ್ದೇವರೆಂದು ಖ್ಯಾತನಾಮರಾದ ಪೂಜ್ಯ ಡಾ. ಚನ್ನಬಸವ ಪಟ್ಟದೇವರು ಉತ್ತರದ ತುದಿಯಲ್ಲಿ ಕನ್ನಡಾಂಬೆಯ ಮೆದುಳು, ಕಿರೀಟವಾಗಿ, ಕಿರೀಟದಲ್ಲಿಯ ಮುತ್ತು, ರತ್ನ, ವಜ್ರ, ವೈಢೂರ್ಯ, ಮಾಣಿಕ್ಯವಾಗಿಸಿ ಇಟ್ಟಿದ್ದಾರೆ ಎಂಬುದು ಹೆಮ್ಮೆ ಎನಿಸಿದೆ. ಆದರೆ ದಕ್ಷಿಣ ಕರ್ನಾಟಕವು ನಮ್ಮಿಂದಲೇ ಎಲ್ಲ, ನಮಗಾಗೇ ಎಲ್ಲ, ನಾವೇ ಎಲ್ಲ ಎಂದು ತಿಳಿದು ಈ ಭಾಗದ ನದಿ, ಗುಡ್ಡಬೆಟ್ಟ, ಐತಿಹಾಸಿಕ ಸ್ಥಳಗಳನ್ನು ನೆನಪಿಸದೆ ಕೇವಲ ಕಾವೇರಿ, ಕೇವಲ ಮೈಸೂರು ಎಂದರೆ ನಡೆಯಬಾರದು. ಅದು ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಹಾಕಿದಂತಾಗುವುದಿಲ್ಲವೇ?

ಗಾದೆ ಮಾತುಗಳು ಒಂದೊಂದು ಕಥೆಯ ತಾತ್ಪರ್ಯವಾಗುತ್ತವೆ, ಒಂದೊಂದು ಕಾದಂಬರಿ ಆಗುತ್ತವೆ, ಒಂದೊಂದು ಕಥನ ಕವನಗಳಾಗುತ್ತವೆ, ಒಂದೊಂದು ನಾಟಕಗಳಾಗುತ್ತವೆ. ಏನು ಮರೆತರೂ ಗಾದೆ ಮಾತು ಮಾತ್ರ ಮರೆಯಬಾರದು. ಒಂದೊಂದು ಗಾದೆ ಮಾತಿನಿಂದ, ನುಡಿಮುತ್ತಿನಿಂದ ಕಳ್ಳರು, ಸುಳ್ಳರು, ಮೋಸಗಾರರು, ಮನುಷ್ಯರಾಗಬಲ್ಲರು; ಮನುಷ್ಯರು ಮಹಾಮಾನವರಾಗಬಲ್ಲರು. ಸಗಣಿಯ ಗಣಪನ ತೊಳೆಯುತ್ತ ಹೋದರೆ ಸಗಣಿ ನೀರು ಬಿಟ್ಟು ಬೇರೆ ಏನೂ ಆಗಲಾರದು. ಹಾಗೆ ರಾಜಕಾರಣಿಗಳು ಸಗಣಿಯ ಬೆನಕಗಳು ಅಷ್ಟೇ ಅಲ್ಲವೆ? ಬಾಪೂಜಿಯ ಹೆಸರು ಹೇಳಿ, ವಿವೇಕಾನಂದರ, ಬುದ್ಧ, ಬಸವರ ಹೆಸರು ಹೇಳಿ ಲಾಡೆನ್, ಹಿಟ್ಲರ್, ಸದ್ದಾಂ, ಮೀರ್‌ಜಾಫರ್, ವೀರಪ್ಪನ್ ಆದಂತಲ್ಲವೇ? ಈಗಿನ ಗ್ರಾಮಪಂಚಾಯಿತಿಯಿಂದ ಹಿಡಿದು ರಾಷ್ಟ್ರಮಟ್ಟದ ನೇತಾರರಾಗಿ ಮೆರೆಯೋರು?! "ಗಾಂಧಿಜಿಗೆ ಇಂಗ್ಲೀಷರು ಮಹಾಮಾನವನೆಂದು ತಿಳಿದು ಬಚಾವಾಗಿಸಿಟ್ಟರು. ಆದರೆ ನೀಚರು ಭಾರತ ಸ್ವಾತಂತ್ರ್ಯ ಆಗಿ ಆರು ತಿಂಗಳೂ ಜೀವಿಸಲು ಬಿಡಲಿಲ್ಲ" ಎಂದು ಚರ್ಚಿಲ್ ಹೇಳಿದ್ದಾರೆ. ಏಣಿಯಿಂದ ಮೇಲೇರಿ ಏಣಿಯನ್ನೇ ಒದ್ದು ಬಿಟ್ಟಂತೆ ಆಗುವುದಿಲ್ಲವೇ?

ಗಾದೆ ಮಾತುಗಳನ್ನು ಅರ್ಥ ಮಾಡಿಕೊಂಡು ನಡೆವವರು ಜೀವನದಲ್ಲಿ ಸೋಲರಿಯದ ಸ್ಥಿತಪ್ರಜ್ಞರಾಗುತ್ತಾರೆ ಎಂಬುದು ಕೂಡ ಕಂಡಿದ್ದೇನೆ. ದೇವನೊಬ್ಬ

ನಾಮ ಹಲವು ಎಂದರು ಬಸವಣ್ಣನವರು, ದೇಶ ದೇಹವಾದರೆ ಧರ್ಮ ಆತ್ಮವೆಂದರು ಸಿದ್ಧಯ್ಯ ಪುರಾಣಿಕರು. ಹೇಳವ್ರೆ ಎಲ್ಲ ಕೇಳವ್ರೆ ಇಲ್ಲ ಅಂದರು ಚೆನ್ನವೀರಕಣವಿ; ಮಾತು ಕೊಟ್ಟಷ್ಟು ಧಾರಾಳವಾಗಿ ನಾವೇನನ್ನು ಕೊಡಲಾರೆವು ಎಂದರು ಪಾಮು. ಹೀಗೆ ಈ ಹೇಳಿಕೆಗಳ ಮಾತು ಬೆಳೆಯುತ್ತ ಮಹಾಕಾವ್ಯವೇ ಆಗಬಹುದು. ಆದರೆ ನಮ್ಮ ಕನ್ನಡಿಗರು ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್ ಎಂಬುದಕ್ಕೆ ನಮ್ಮ ಜಾನಪದ ಗಾದೆಗಳೇ ಸಾಕ್ಷಿ ಹೌದಲ್ಲವೇ? ಅದಕ್ಕೆ ಕೆಲ ಗಾದೆಗಳನ್ನು ಮೆಲುಕು ಹಾಕೋಣವೇ? ನೋಡಿ :

- ಚರ್ಮ ತೊಳೆದರೆ ಕರ್ಮ ಹೋದೀತೇ?
- ರಾಯ ಸತ್ತರೂ ಹೆಣ, ನಾಯಿ ಸತ್ತರೂ ಹೆಣ.
- ತಲೆ ಗಟ್ಟಿ ಎಂದರೆ ಕಲ್ಲು ಹಾಯಬಾರದು.
- ದನದ ಬಣ್ಣ ಹಾಲಿನಲ್ಲಿ ತಿಳಿದೀತೆ?
- ಕುಂಟಿಯಾಡಿದ ಹೊಲ ಚಂದ, ದಂಟು ಆಡಿದ ಹೆಣ್ಣು ಚಂದ.
- ಓಲೆ ಮಾರಿ ಎಮ್ಮೆ ತಂದು, ಕೂರಿಗೆ ತರೋಕೆ ಎಮ್ಮೆ ಮಾರಿದ.
- ಸಿಟ್ಟಿನಲ್ಲಿ ಕೊಯ್ದ ಮೂಗು ಶಾಂತಿಯಲ್ಲಿ ಬಂದೀತೆ?
- ಏಳಲಾರದೋನಿಗೆ ಏಳು ಮಂದಿ ಹೆಂಡಿರು, ಮೇಲೊಬ್ಬ ಸೂಳೆ.
- ಜಟ್ಟಿ ಬಿದ್ದರೆ ಅದೊಂದು ಪಟ್ಟು ಎಂದು ತಿಳೀತಾರೆ.
- ಹೊತ್ತಿಗೊದಗದ ಬುದ್ಧಿ ಎಷ್ಟಿದ್ದರೂ ಲದ್ದಿ.
- ಮಡಿಕೆಗೆ ಮಕ ತಿಪ್ಪಿಗೆ ತಿಕ.
- ಮಣ ಮಾತಿಗಿಂತ ಕಣ ಕೃಷಿ ಲೇಸು
- ಕೋಮಟಿಗ ಕೊಡ, ಬಣಜಿಗ ಬಿಡ
- ಅಂಗ್ಯೆಹಾಗೆ ಹೊಲ ಮಾಡಿದರೆ, ಮಂಗ್ಯೆತುಂಬ ತುಪ್ಪ
- ಚೆಂಬು ಬಲ್ಲದೆ ಸಾರಿನ ರುಚಿಯ?
- ಸಾವಿರ ಕುದುರೆಯ ಸರದಾರ, ಮನೆಯ ಹೆಂಡತಿಗೆ ಪಿಂಜಾರ.
- ಬೇವಿನಕಾಯಿಗೆ, ಹಾಗಲಕಾಯಿ ಸಾಕ್ಷಿ.

ಗಾದೆ ಮಾತುಗಳು ಸದಾ ಉಪಯುಕ್ತ. ಕೆಟ್ಟವರಿಗೂ ಇವು ಮುತ್ತು ರತ್ನ. ಕಾರಣ ಅವರಿಗೆ ಸೈತಾನತ್ವದಿಂದ ಮಾನವತ್ವದೆಡೆಗೆ ಕೊಂಡೊಯ್ಯುತ್ತದೆ. ಪ್ರಜಾತಂತ್ರದಲ್ಲಿ, ಸಮತಾವಾದ, ಸಮಾಜವಾದ, ರಾಜ್ಯ, ರಾಷ್ಟ್ರಗಳಲ್ಲಿ ರಾಜ್ಯವೇ, ದೇಶವೇ ನಮ್ಮ ಮನೆ ಎಂದು ತಿಳೀತಾರೆ; ಬಂಡವಾಳ ಶಾಹಿ, ಹುಕುಂಶಾಹಿ,

ಸರ್ವಾಧಿಕಾರಿ, ರಾಜಾಶಾಹಿ ನಿರಂಕುಶರಲ್ಲಿ ಮನೆಯೇ ತಮ್ಮ ದೇಶವೆಂದು ರಾಜ್ಯವೆಂದು ತಿಳಿದು ಸಾವಿರಾರು ಜನ್ಮಕ್ಕೆ ಸಾಕಾಗುವಷ್ಟು ಕದ್ದು, ಪುಣ್ಯ ಕಟ್ಟಿಕೊಂಡು ಬಂದ ಇವರು ಪಾಪ ಕಟ್ಟಿಕೊಂಡು ಹೋಗುತ್ತಾರೆಂಬುದಂತೂ ಗ್ಯಾರಂಟಿ. ಎಳೆಎಳೆಯಾಗಿ ಲೆಕ್ಕ ಕೊಡಬೇಕಾಗುತ್ತದೆಂಬುದು ಮರೆತು ಸಮಾಜ ಕಂಟಕ, ಸಮಾಜ ಘಾತುಕರಾಗುತ್ತಾರೆ. ಅಭಿವೃದ್ಧಿ, ಪ್ರಗತಿ, ಸಮೃದ್ಧಿ, ನೆಮ್ಮದಿ, ಸಂಸ್ಕೃತಿ, ದೇವರು ಎಂದೆಲ್ಲ ಭಾಷಣ, ಘೋಷಣೆಗೆ ಸೀಮಿತಗೊಳಿಸಿ ಸರ್ವವನ್ನು ಮರೆತು ರಾಷ್ಟ್ರವನ್ನು ಮಾರಿ ಬಿಡುತ್ತಾರೆ. ತಾನಿದ್ದ ಹಡಗಿಗೆ ತೂತು ಕೊರೆದರೆ ಇವರು ಉಳಿಯುತ್ತಾರೆಯೆ? ಏನೋ ಮಂಗಳ ಲೋಕಕ್ಕೆ ಹೋಗಿ ಸಾಯಲಿ. ಈ ಅಮಂಗಳರಿಗೆ ಆ ಮಂಗಳವೇ ಕುಜವಾಗಿ ಅಂಗಾರಕವಾಗಿ ಸುಡಲಿ.

ಸಜ್ಜನರ ಸಂಗ ಹೆಜ್ಜೇನು ಸವಿದಂತೆ – ಮಾಡಿಕೊಂಡರೆ ಇಲ್ಲಿ ನೆಮ್ಮದಿ. ಕಾಯಕವೇ ಕೈಲಾಸ ಎಂಬಂತೆ, ಕೈ ಕೆಸರಾದರೆ ಬಾಯಿ ಮೊಸರು ಎಂದು ತಿಳಿಸುವ ವ್ಯವಸ್ಥೆ ಬಂದಾಗ ಅಂಥ ಸರ್ಕಾರಗಳು ನಡೆದಾಗ ದಿವ್ಯಾಂಗರಿಗೆ ಏನೆಲ್ಲ ಕೊಡಲಿ, ನಕಲಿ ವೃದ್ಧಾಶ್ರಮಗಳು ಶಾಂತಿಯ ಸ್ಥಾನಗಳಾಗಲಿ, ಶಿಕ್ಷಣ ರಾಷ್ಟ್ರೀಕರಣ ಆಗುವ ವ್ಯವಸ್ಥೆ ಮಾಡಲಿ. ಎಲ್ಲರಿಗೂ ಸಮ ಪಾಲು ಸಿಗಲಿ. ಇಲ್ಲದಿದ್ದರೆ ದೊಡ್ ದೊಡ್ ಮಾತ್ಹೇಳಿ ದೊಡ್ಯಾಗ ಹೇತಂಗೆ, ಆಚಾರ ಹೇಳಾಕ್ಕ ಬದನೆಕಾಯಿ ತಿಂಬಾಕ್ಕ ಎಂದಂತಾಗಿ ಹೊಲಸಿನಲ್ಲೇ ಹೊರಳಾಡಿ ಹೊರಳಾಡಿಸುತ್ತಾ ಹೋಗ್ತಾರೆ ಈ ಕೊಳಕರು. ಇವರಿಗೆ 'ನಾಯಿ' ಅನ್ನಬಾರದು. ಮುರುಕು ರೊಟ್ಟಿ ತಿಂದು ಮನೆ ಕಾಯ್ತದ. ಆ ನಾಯಿಗೆ ಇನ್‌ಸಲ್ಟು; ಇವರಿಗೆ 'ಹಂದಿ'ನೂ ಅನಬಾರದು ಯಾಕಂದ್ರ ಹಂದಿಯು ನಾವು ಮಾಡಿದ ಹೊಲಸೆಲ್ಲ ತೊಳಿತಾದ. ಆ ಹಂದಿಗೂ ಇನ್‌ಸಲ್ಟು. ಕಾಯಕವೇ ಕೈಲಾಸದ ಅನ್ವರ್ಥದ ಕತ್ತೆ ಶ್ರೇಷ್ಠ. ಇವರಿಗೆ ಕತ್ತೆ ಎಂದ ಬೈದರೂ ಕತ್ತಗೇ ಅವಮಾನ ಮಾಡಿದಂತೆ. ಕಾವ್, ಕಾವ್, ಕಾವ್ ಎಂದು ಕರೆದು ತಿನ್ನುವ ಕಾಗೆಗೂ ಸಮನಲ್ಲ ಈ ಆಡಳಿತದಲ್ಲಿ ಇರುವವರು.

■

ಬಹುಮಾನಿತ
ಹನಿಗವನಗಳು

೧. ತೆರೆದ ಗೋರಿ

• ಗಾಣಿಗರ್ ಎಸ್. ಎಸ್.

ಕಣ್ಣಂಚಿಗೆ ನೇಣು ಬಿಗಿದು
ನೇತುಬಿದ್ದ
ಬಡಕಲು ದೇಹಗಳಿಗೆ
ಎದೆಯೇ ಚಿತೆಗಾರ
ಬಾಯಿಯೇ ತೆರೆದ ಗೋರಿ

■

೨. ಮಿನಿ–ಸ್ಟಾರ್

• ಚಂದ್ರಶೇಖರ ಗಟ್ಟಿ ಬೋಳೂರು

ಉತ್ತರ ಪ್ರದೇಶದ ಮಿನಿಸ್ಟರ್
ಒಬ್ಬರು ಗುಡಿಸಲು–ವಾಸಿ
ಗುಡಿಸಿ ಗುಂಡಾಂತರ ಮಾಡುವ
ಮಿನಿಸ್ಟರ್‌ಗಳ ಆಗಸದಲ್ಲಿ
ಇವರೊಬ್ಬ ಹೆಮ್ಮೆಯ ಮಿನಿ–ಸ್ಟಾರ್

■

೩. ಚಾರ್

• ಜಂಬುನಾಥ ಕಂಚ್ಯಾಣಿ

ಆಡಳಿತದ ಚೇರ್–ಗೆ
ಕಾಲುಗಳು ಚಾರ್

ಮುಂದಿನವು :
ಭ್ರಷ್ಟಾಚಾರ್, ಅನಾಚಾರ್
ಹಿಂದಿನವು :
ಅತ್ಯಾಚಾರ್, ವಾಮಾಚಾರ್

■

೪. ಕೇಕೆ-ಯಾಕೆ

● ದೇವಕಿಸುತ

ಕ್ರಿಕೆಟ್ಟಾಟದಲ್ಲಿ
ಚೆಂಡು ಗಡಿ ದಾಟಿದರೆ
ಚಪ್ಪಾಳೆ-ಕುಣಿತ-ಕೇಕೆ
ಗಡಿಯಲ್ಲಿ ನಮ್ಮ ಯೋಧರ
ಚೆಂಡು ಕತ್ತರಿಸಿದರೆ
ಮರುಕ ಇಲ್ಲ - ಯಾಕೆ?

■

೫. ತೇಲಿದ ಹೊಗೆ

● ನದೀಮ ಸನದಿ

ಯುವ ನೇತಾರನೊಬ್ಬ
ವೇದಿಕೆಯೇರಿ
ವ್ಯಸನ ಮುಕ್ತ ಯುವಕರಿಂದಲೇ
ಅಭಿವೃದ್ಧಿ ಸಾಧ್ಯ ಎಂದು
ಭಾಷಣದ ಜಡಿಮಳೆ ಸುರಿದ

ಕೆಳಗಿಳಿದು
ಒಂದು ದಂ ಎಳೆದು
ಆಗಸದಿ ಹೊಗೆ ತೇಲಿಬಿಟ್ಟ...

■

೬. ವಿದ್ಯೆ-ನಿದ್ದೆ

● ನಿರ್ಮಲಾ ಪ್ರಭು

ಬದುಕಿನಲ್ಲಿ ಗಳಿಸಿಕೋ ವಿದ್ಯೆ...
ವಿದ್ಯೆಯಿಂದಲೇ ಹುದ್ದೆ...
ಹುದ್ದೆಯಿಂದಲೇ ಮುದ್ದೆ...
ಮುದ್ದೆಯಿಂದಲೇ ಸುಖ ನಿದ್ದೆ...

■

೭. ಬದಲಾವಣೆ

• ಬಸವರಾಜ ಹುಡೇದಗಡ್ಡಿ

ಹೆತ್ತವರ ಮಾತು
ಅವನಿಗೆ
ಅಹಿತ.

ಯಾಕೆ ಗೊತ್ತೆ?
ಅವನೀಗ
ವಿವಾಹಿತ.

■

೮. ನಗರೀಕರಣ

• ಮಹಾಂತೇಶ ಮಾಗನೂರ

ಯಾರೆಂದರು ನಗರದಲ್ಲಿ
ಎಲ್ಲ ದುಬಾರಿ ಎಂದು?

ಹಿಡಿದಿಡಲಾರದಷ್ಟು ಧೂಳು
ಗಿಜಿಗಿಜಿ ಜನದಟ್ಟಣೆಯ ಗೋಳು
ಇಂಗಾಲ ತುಂಬಿದ ಬಿಸಿಬಿಸಿ ಗಾಳಿ
ಸಿಗುತ್ತಿಲ್ಲವೇ ಇವೆಲ್ಲ
ಉಚಿತ ಮತ್ತು ಧಾರಾಳ?

■

೯. ಪೀಠ–ಉದರ

• ಮ. ಶ್ರೀ. ಮುರಳಿಕೃಷ್ಣ

ಅರಿಸಿನ–ಕುಂಕುಮ–ಅಕ್ಷತೆ
ವ್ಯಾಸಪೀಠದ
ಗ್ರಂಥಕ್ಕೆ

ಒಳಗಣ ಪ್ರತಿಗಳು
ಹುಳ ಹುಪ್ಪಡಿಗಳ ಉದರಕ್ಕೆ

■

೧೦. ಶ್ರಾವಣ

• ಮೈತ್ರಿ ಭಟ್ಟ

ದೂರದ ಊರಿಗೆ
ಗುರಿ ಇಲ್ಲದ ಪಯಣ
ಆದರೆ
ಕ್ಷಣ ಕ್ಷಣವೂ
ಆಗುವುದೇ ಶ್ರಾವಣ

■

೧೧. ಸಂಸಾರಿ

• ವಿದ್ಯಾಸಾಗರ ದೀಕ್ಷಿತ

ಹಾಯಾಗಿರುವುದು
ಇದ್ದರೆ ಒಬ್ಬರು...
ಬೇಡವೆಂದರು ನಾವು
ಒಂದಾದೆವು ಇಬ್ಬರು...
ತಾಪತ್ರಯ ಶುರುವಾದವು
ಆದಾಗ ಮೂವರು...
ಕೆಲ ದಿನಗಳಲ್ಲಿ ಬಂದು
ಕರೆದೊಯ್ದರು ನಾಲ್ವರು

■

೧೨. ಚಕ್ಕಡಿ ಗಾಡಿ

• ಸಿದ್ಧಲಿಂಗಪ್ಪ ಹದಿಮೂರ

ಬಿಳಿ ಎತ್ತಿನ ಗಾಡಿ
ಗಾಡಿಯೊಳಗ ಲೇಡಿ
ಲೇಡಿಗೆ ಕೆಂಪು ಸಾಡಿ
ಸಾಡಿ ಮೇಲೆ ಜಡಿ
ಜಡಿಗೆ ಹೂವಿನ ಮುಡಿ
ಮುಡಿಯ ಮೇಲೆ ಹುಡಿ
ಹುಡಿಯ ಮೇಲೆ ಕೊಡಿ
ಚಬಕಾ ಎತ್ತಿ ಹೊಡಿ
ಸಾಗಲಿ ಚಕ್ಕಡಿ ಗಾಡಿ

■

೧೩. ಶ್ರಮ

● ಯು. ಸಿರಾಜ ಅಹಮದ ಸೊರಬ

ಮಗನನ್ನು ಅಧಿಕಾರಿಯನ್ನಾಗಿಸಿತು
ತಾಯಿಯ ನಿರಂತರ ಶ್ರಮ
ಕೊನೆಗೆ ತಾಯಿಗೆ ಆಶ್ರಯ ಕೊಟ್ಟಿತು
ವೃದ್ಧಾಶ್ರಮ

■

೧೪. ಸ್ತ್ರೀ ಶಕ್ತಿ

● ಸಿ. ಹಾಲಸ್ವಾಮಿ

ಕುಂತಿ ಇಲ್ಲದ
ಎಲ್ಲಿಯ ಮಹಾಭಾರತಂ?
ಮಂಥರೆ ಇಲ್ಲದ
ಎಲ್ಲಿಯ ರಾಮಾಯಣಂ?
ಎಲ್ಲಾ ಒಣ ಒಣಂ..
ಭಣ ಭಣಂ..

■

೧೫. ದೊಡ್ಡ ನೋಟು – ಚಿಲ್ಲರೆ ನಾಣ್ಯ

● ಜಿ. ಎಸ್. ಹೆಗಡೆ

ದೊಡ್ಡವರ ಜೇಬಲಿ ದೊಡ್ಡ ನೋಟು
ಶಬ್ದ ಮಾಡುವುದೇ ಇಲ್ಲ.
ಬಡವನ ಕಿಸೆಯಲಿ ಚಿಲ್ಲರೆ ನಾಣ್ಯ
ಸುಮ್ಮನಿರುವುದಿಲ್ಲ
ದೊಡ್ಡ ನೋಟೆಂದೂ ಶಬ್ದ ಮಾಡದೆ
ಇಮ್ಮಡಿಯಾಗುವುದು.
ಚಿಲ್ಲರೆ ನಾಣ್ಯ ಶಬ್ದ ಮಾಡುತಲೆ
ಸವೆಯುತ್ತಲೆ ಇಹುದು.

■

೨೦೧೬ರ ಪ್ರಕಟನೆಗಳು

೦೧. **ಮಹಾಸಂಗಮ (ಲಾವಣಿ)** : ಎಸ್.ಜಿ. ಮಾಲತಿ ಶೆಟ್ಟಿ
ಅನ್ನಪೂರ್ಣ ಪಬ್ಲಿಶಿಂಗ್ ಹೌಸ್, ಬೆಂಗಳೂರು ರೂ. ೨೪೦

೦೨. **ದಕ್ಷಿಣ ದಂಡಾಜೀವಿಕ (ಸಂಶೋಧನೆ)** : ಲಕ್ಷ್ಮೀಪತಿ ಕೋಲಾರ
ಶಾಹು ಪ್ರಕಾಶನ, ಮಾಲೂರು ರೂ. ೨೦೦

೦೩. **ಕನ್ನಡ ದೀಪಗಳು** : ಸಂ–ಮೋಹನ ನಾಗಮ್ಮನವರ
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ರೂ. ೨೫೦

೦೪. **ನನ್ನ ಅಮ್ಮ (ಕಾವ್ಯ)** : ಎಂ. ಮಂಜುನಾಥ
ಬೆಳಕು ಪ್ರಕಾಶನ, ಬೆಂಗಳೂರು–೪ ರೂ. ೯೦

೦೫. **ಚಿಟ್ಟೆ (ಕಾವ್ಯ)** : ಸಭಾ ಒಕ್ಕುಂದ
ಚಿಲಿಪಿಲಿ ಪ್ರಕಾಶನ, ಧಾರವಾಡ ರೂ. ೬೦

೦೬. **ಬಿತ್ತಿದ್ದು ಬೇವು, ಬಯಸುವುದು ಮಾವು (ನಾಟಕ)** : ಹಿ.ಮ. ಕೊಟ್ರಯ್ಯ
ವೃಧ್ಧಿ ಪ್ರಕಾಶನ, ಬಸರಕೋಡು (ಬಳ್ಳಾರಿ) ರೂ. ೮೦

೦೭. **ಅಂಬಿಗ ನಾ ನಿನ್ನ ನಂಬಿದೆ (ನಾಟಕ)** : ಬಸವರಾಜ ಸಬರದ
ಅನುಪಮ ಪ್ರಕಾಶನ, ಅಥಣಿ ರೂ. ೧೦೦

೦೮. ಎಂ. ಎಂ. ಕಲಬುರ್ಗಿ : ಪ್ರಕಾಶ ಗಿರಿಮಲ್ಲನವರ
ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ, ಬೆಳಗಾವಿ ರೂ. ೬೦

೦೯. **ಗೋಸಂಗಿ ಮತ್ತು ಬಾವಲಿಯ ಅಸ್ತಿತ್ವ (ಕಾವ್ಯ)** : ಅನು.ಎ. ಅಂಜನಪ್ಪ
ನಿವೇದಿತ ಪ್ರಕಾಶನ, ಬೆಂಗಳೂರು – ೨೮ ರೂ. ೭೦

೧೦. **ಬಾಗಲಕೋಟೆ ಜಿಲ್ಲೆಯ ದಲಿತ ಕಾವ್ಯ** : ಸಂ.ಸಣ್ಣವೀರಣ್ಣ ದೊಡ್ಡಮನಿ
ದಲಿತ ಸಾಹಿತ್ಯ ಪರಿಷತ್ತು, ಗದಗ ರೂ. ೮೦

೧೧. **ಬೆಸುಗೆಯ ಬಂಧನದಲ್ಲಿ** : ವಿಜಯಾ ಸುಬ್ಬರಾಜ
ದೇಶಿ ಪುಸ್ತಕ, ಬೆಂಗಳೂರು – ೪೦ ರೂ. ೩೫೦

೧೨. **ಸಂಘ ಜಂಗಮ (ಕಾಂತಾವರ ಕನ್ನಡ ಸಂಘ)** : ಸಂ–ಅನು ಬೆಳ್ಳೆ
ಕನ್ನಡ ಸಂಘ ಕಾಂತಾವರ (ಉಡುಪಿ) ರೂ. ೭೫೦

೧೩. **ಜೋಡಿ ಹಕ್ಕಿಗಳು (ಸಣ್ಣ ಕತೆ)**: ಭಾರತೀ ಪುತ್ರ
ಭಾರತೀಯ ಸಾಹಿತ್ಯ, ನಾಗಮಂಗಲ ರೂ. ೧೫೦

೧೪. **ಕಲಬುರ್ಗಿ ನೆನಪು** : ಸಂ–ಶಾಮಸುಂದರ ಬಿದರಕುಂದಿ
ಧಾರವಾಡ ಸಾಹಿತ್ಯ ಸಂಭ್ರಮ ಟ್ರಸ್ಟ್, ಧಾರವಾಡ ರೂ. ೧೩೫

೧೫. **ಗದ್ಯಗಿರಿ** : ರವೀಂದ್ರ ಕರ್ಜಗಿ
ಕನ್ನಡ, ಸದಾಶಿವನಗರ, ಕಲಬುರಗಿ – ೦೨ ರೂ. ೧೦೦

೧೬. **ಕಾಡಿನ ಹೂ (ಸಮಗ್ರ)** : ಮಹಾಂತೇಶ ಮಲ್ಲನಗೌಡರ
ಸಂ–ಹನುಮಂತಪ್ಪ, ಅಂಡಗಿ, ಕೊಪ್ಪಳ ರೂ. ೧೫೦

೧೭. **ನಾನು ನಿಮ್ಮೊಡನೆ (ಆತ್ಮಕಥನ)** : ಜಯರಾಮ ಹೆಗಡೆ
ಅಕ್ಷಯ ಪ್ರಕಾಶನ, ಬೆಂಗಳೂರು–೧೯ ರೂ. ೩೫೦

೧೮. **ಆಯ್ದ ಸಂಪಾದಕೀಯಗಳು** : ಜಯರಾಮ ಹೆಗಡೆ
ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲಾ ರೂ. ೨೦೦

೧೯. **ಮೈಲಾರ ಲಿಂಗೇಶ್ವರ ವಚನಗಳು** : ಎಚ್. ಡಿ. ಜಗ್ಗಿನ
ಜಗ್ಗಿನ ಪ್ರಕಾಶನ, ಹೊಳಲು (ಬಳ್ಳಾರಿ) ರೂ. ೭೦

೨೦. **ಬಸವ ಪ್ರತಿಭೆ : ದಲಿತ ಶರಣರು** : ಸಂ–ಮಹಾಂತಪ್ಪ / ಪಾರ್ವತಮ್ಮ
ಶರಣ ಪ್ರಕಾಶನ, ಸಂತೇ ಕಡೂರು (ಶಿವಮೊಗ್ಗ) ರೂ. –

೨೧. **ಡಾ. ಹಳಕಟ್ಟಿ ಫಕ್ಕಿರಪ್ಪನವರು** : ಎನ್. ಆರ್. ಗುಂಜಾಳ
ಬಸವಧರ್ಮ ಪ್ರಚಾರ ಸಂಸ್ಥೆ, ಭಾಲ್ಕಿ ರೂ. ೫೦

೨೨. **ಮೀನಿನಿಂದ ಮಾನವ** : ಬಿ. ಎನ್. ಸುರೇಶ್ವರ
ಜೀವನ ಜ್ಯೋತಿ ಪ್ರಕಾಶನ, ಬೆಂಗಳೂರು–೯೪. ರೂ. ೨೫೦

೨೩. **ಬಿ. ಕೃಷ್ಣಪ್ಪ : ಹೋರಾಟದ ಹಣತೆ** : ವಡ್ಡಗೆರೆ ನಾಗರಾಜಯ್ಯ
ಕರ್ನಾಟಕ ದ. ಸಂ.ಸ. ರಾಜ್ಯ ಸಮಿತಿ, ಬೆಂಗಳೂರು ರೂ. –

೨೪. **ಶಿವಾನುಭವ ಸೂತ್ರದ ವಿಳಾಸ** : ಓಲೆಮಠ ಶ್ರೀಗಳ ಮಹಾಪ್ರಬಂಧ
ಸಂ: ಅಶೋಕ ನರೋಡೆ, ಕುಮಾರೇಶ್ವರ ಗ್ರಂಥಮಾಲೆ,
ಜಮಖಂಡಿ ರೂ. ೧೧೦

೨೫. **ಆಸರೆಯಾದವರು** : ಸಂ – ಲಿಂ.ಶೇರಿ / ಅಣ್ಣಾಸಾಗರ
ಸಮ ಸಾಹಿತ್ಯ ವೇದಿಕೆ, ಸೇಡಂ ರೂ. ೧೦೦

೨೬. **ಮಾಸ್ತಿ** : ಮಾವಿನಕೆರೆ ರಂಗನಾಥ
ಸುಭಾಸ ಸ್ಟೋರ್, ಬೆಂಗಳೂರು – ೦೨ ರೂ. ೧೨೫

೨೭. **ಉರಿಯುಂಡ ಕರ್ಪೂರ** : ತೋಟೆಂದ್ರ ಶಿವಾಚಾರ್ಯರು
ಕೋರಿಸಿದ್ದೇಶ್ವರ ಮಠ, ನಾಲವಾರ (ಕಲಬುರಗಿ) ರೂ. ೧೫೦

೨೮. **ಹೂವಾಡಿಗ (ಕಾವ್ಯ)** : ಎ. ಎನ್. ರಮೇಶ ಗುಬ್ಬಿ
ಗೋಮಿನಿ ಪ್ರಕಾಶನ, ತುಮಕೂರು ರೂ. ೮೦

೨೯. **ಕೆಂಡ ಸಂಪಿಗೆ (ಕಾವ್ಯ)** : ಜಯಪ್ರಕಾಶ ಇಟ್ಟಿಗಿ
ಹಾಸಿನಿ ಪ್ರಕಾಶನ, ಬೆಂಗಳೂರು - ೪೦ ರೂ. ೮೫

೩೦. **ವಿಚಾರ ಪ್ರಭ** : ಉ. ಶಾ. ಬಸವಣ್ಯಪ್ಪ
ನೆನಪಿನ ಟ್ರಸ್ಟ್, ಹೂ. ಹಡಗಲಿ (ಬಳ್ಳಾರಿ) ರೂ. ೭೫

೩೧. **ಪರಮೇಶ್ವರಪ್ಪ ಬಳಿಗಾರ** : ಸರಜೂ ಕಾಟ್ಕರ್
ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ ರೂ. ೩೦

೩೨. **ಜೀವ ಸಂಸ್ಕೃತಿ** : ರಾಜೇಂದ್ರ ಡಿ. ಬಡಿಗೇರ
ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು - ೨೩ ರೂ. ೧೨೦

೩೩. **ನದಿಯ ಹಂಬಲ (ಕಾವ್ಯ)** : ಅಶೋಕ ನರೋಡೆ
ಸಂಕ್ರಮಣ ಪ್ರಕಾಶನ, ಬೆಂಗಳೂರು-೭೮ ರೂ. ೨೫೦

೩೪. **ಚಂದ್ರೋದಯ** : ಸಂ-ಜಾಣಗೆರೆ ವೆಂಕಟರಾಮಯ್ಯ
ಅಂಧರ ವಿಮೋಚನ ವೇದಿಕೆ, ಬೆಂಗಳೂರು-೧೦ ರೂ. ೧೫೦

೩೫. **ಭಾವಬಯಲು (ಕಾವ್ಯ)** : ನಾಗರತ್ನ ಮಲ್ಲಿಕಾರ್ಜುನಪ್ಪ
ಬಾನೀಲ ಪ್ರಕಾಶನ, ತವನಿಧಿ (ತುಮಕೂರು) ರೂ. ೧೦೦

೩೬. **ನೀವೂ ಸ್ಟಾರ್ ಆಗಿ** : ಆರ್. ಬಿ. ಗುರುಬಸವರಾಜ
ಅಬ್ದುಲ ರಫಿ, ಹೊಳಗುಂದಿ (ಬಳ್ಳಾರಿ) ರೂ. ೧೦೦

೩೭. **ಹನುಮನ ಹಲಿಗೆ (ಕಾದಂಬರಿ)** : ಪಿ. ಆರ್. ವೆಂಕಟೇಶ
ಸಮಾಜ ವಿಜ್ಞಾನ ವೇದಿಕೆ, ಬಳ್ಳಾರಿ ರೂ. ೧೦೦

೩೮. **ಕರುಣಾಳು (ಕಾವ್ಯ)** : ಸವಿತಾ ನಾಗಭೂಷಣ
ಅಕ್ಷರ ಪ್ರಕಾಶನ, ಸಾಗರ ರೂ. ೫೦

೩೯. **ಕನ್ನಡ ಕವನಗಳ ಜೇನುಗೂಡು** : ಟಿ. ಜಿ. ರಮೇಶ ಪ್ರಸಾದ
ಮಂಜುಳಾದೇವಿ, ಬೆಂಗಳೂರು - ೭೦ ರೂ. ೭೦

೪೦. **ಗುಬ್ಬಚ್ಚಿ ಸ್ನಾನ** : ಎಂ. ಆರ್. ಮಂದಾರವಲ್ಲಿ
ಸಂಸ್ಕೃತಿ ಬುಕ್ ಪ್ಯಾರಡೈಸ್, ಮೈಸೂರು-೨೩ ರೂ. ೧೧೦

೪೧. **ಕಲಬುರ್ಗಿ ಹತ್ಯೆ : ಪ್ರತಿಕ್ರಿಯೆ** : ಸಂ-ವೀರಣ್ಣ ದಂಡೆ
ಕವಿಮಾರ್ಗ ಪ್ರಕಾಶನ, ಕಲಬುರಗಿ ರೂ. ೩೦೦

■

ಕ್ರಮಣ ಸಮಾಚಾರ

ಇದು ನಮ್ಮ ೫೧ನೆಯ ವರ್ಷದ **ಕೊನೆಯ** ಸಂಚಿಕೆ. ಈ ಸಂಚಿಕೆಯೊಂದಿಗೆ ನಿಮ್ಮಲ್ಲಿ ಅನೇಕರ ಚಂದಾ ಅವಧಿ ಕೊನೆಗೊಳ್ಳುತ್ತದೆ. ನಮ್ಮ ಕಾರ್ಯಾಲಯದಿಂದ ನೆನಪೋಲೆಯ ದಾರಿ ಕಾಯದೆ ಮುಂದಿನ ಚಂದಾ ಕಳಿಸಲು ಕೋರುವೆ. ಮೂರು ವರ್ಷಕ್ಕಾಗಿ ರೂ. ೫೦೦/- ಅಥವಾ ಐದು ವರ್ಷಕ್ಕಾಗಿ ರೂ. ೮೦೦/- ಕಳಿಸಿದರೆ ಇಬ್ಬರಿಗೂ ಅನುಕೂಲ.

ಸಂಕ್ರಮಣ ಪ್ಯಾಕೆಟ್ಟಿನ ಮೇಲೆ ನಿಮ್ಮ ಹೆಸರು - ವಿಳಾಸದ ಹಿಂದೆ ಇರುವ ಸಂಖ್ಯೆ : ನಿಮ್ಮ ಚಂದಾ-ಸಂಖ್ಯೆ. ಪತ್ರ ವ್ಯವಹಾರದಲ್ಲಿ, ಫೋನು-ಸಂದೇಶಗಳಲ್ಲಿ ಚಂದಾ ಸಂಖ್ಯೆ ಉಲ್ಲೇಖಿಸಿರಿ.

ಕನ್ನಡ ಸಾಹಿತಿಗಳ ಮಾಹಿತಿ – ಪರಿಷ್ಕೃತ ಆವೃತ್ತಿ - ತಯಾರಾಗುತ್ತಿದೆ. ನಿಮ್ಮ ಮಾಹಿತಿಯನ್ನು ದಯವಿಟ್ಟು ೨೫ ಜನವರಿ ೨೦೧೭ರ ಒಳಗಾಗಿ ಕಳಿಸಿರಿ. ಮಾಹಿತಿ ಬಂದ ಬಂದ ಹಾಗೆ ಡಿಟಿಪಿ ಕೆಲಸ ಚಾಲೂ ಆಗುತ್ತದೆ.

ನಾಲ್ಕನೆಯ ಸಂಕ್ರಮಣ ಸುವರ್ಣ ಸಂಪುಟ ಅಚ್ಚಾಗುತ್ತಿದೆ. ಸಕಾಲಕ್ಕೆ ಸಮಾಚಾರ ನಿಮಗೆ ತಲುಪುತ್ತದೆ.

ಸಂಕ್ರಮಣದ ಚಂದಾ ವಲಯ ವರ್ಷದಿಂದ ವರ್ಷಕ್ಕೆ ಹಿಗ್ಗುತ್ತಲೇ ಇದೆ. ನೀವು ಕೆಲಸ ಮಾಡುತ್ತಿರುವ ಸಂಸ್ಥೆಯ ಗ್ರಂಥಾಲಯಕ್ಕೆ ಪತ್ರಿಕೆ ಬರುವಂತೆ ಮಾಡಿರಿ. ನಿಮ್ಮ ಪ್ರತಿಯನ್ನು ಕೈಗಡ ಪಡೆದು ಓದುವ ಗೆಳೆಯ/ಗೆಳತಿಯರನ್ನೂ ಬಳಗದ ಒಳಗೆ ಎಳಕೊಳ್ಳಿರಿ.

• ಸಂಪಾದಕರು

ಸಂಕ್ರಮಣ ಸಾಹಿತ್ಯ : ಆರು ಕೃತಿಗಳ ಒಂದು ಸೆಟ್

ರೂ. ೪೦೦

• ಬಾನುಲಿ • ಮಧ್ಯಬಿಂದು • ಗಾಂಧೀಸ್ಮರಣೆ

• ಅಂಚಿಲ್ಲದ ಆಕಾಶ • 'ಚಂಪಾ'ದಕೀಯ

• ಅನಾರೋಗ್ಯವೇ ಭಾಗ್ಯ... ಇತ್ಯಾದಿ

51st YEAR
OF PUBLICATION

ಸಂಕ್ರಮಣ

Nov.-Dec.
2016

SANKRAMANA : PERIODICAL
REGD. WITH THE REGISTRAR OF NEWSPAPERS FOR
VIDE RNI No. 29730/76
EDITOR: CHANDRASHEKHAR PATIL

Vol. 51 : No. 06 Nov.-Dec.

ಈರಯ್ಯ ಕಿಲ್ಲೇದಾರ • ಟಿ. ಗೋವಿಂದರಾ

ಹ. ಶಿ. ಭೈರನಟ್ಟಿ • ಜಿ. ಪಿ. ಕುಸುಮಾ

ಬ್ಯಾಡನೂರು ನಾಗಭೂಷಣ • ಬಿ. ಎನ್. ಸೊಲ್ಲಾ

ಈಶ್ವರ ಕಾಪಸೆ • ಗಣಪತಿ ಹೆಗಡೆ

ನಾಗರೇಖಾ ಗಾಂವಕರ • ನಾಗೇಶ ತಳವಾರ

ಪ್ರಕಾಶ ಆರ್. ಕಮ್ಮಾರ • ಪ್ರಕಾಶ ಬುದ್ದಿನ್ನಿ

ಮಧು ಬಿರಾದಾರ • ರೇಖಾ ಬನ್ನಾಡಿ

ರೇಣುಕಾ ಕಠಾರಿ • ಸೋಮನಾಥ ಗೀ

ಗಾಣಿಗರ್ ಎನ್. ಎಸ್. • ಚಂದ್ರಶೇಖರ ಗಟ್ಟಿ

ಜಂಬುನಾಥ ಕಂಚ್ಯಾಣಿ • ದೇವಕಿ ಸುತ

ನದೀಮ ಸನದಿ • ನಿರ್ಮಲಾ ಪ್ರಭು

ಬಸವರಾಜ ಹುಡೇದಗಡ್ಡಿ • ಮಹಾಂತೇಶ ಮಾ

ಮ. ಶ್ರೀ. ಮುರಳಿ ಕೃಷ್ಣ • ಮೈತ್ರಿ ಭಟ್ಟ

ವಿದ್ಯಾಸಾಗರ ದೀಕ್ಷಿತ • ಸಿದ್ಧಲಿಂಗಪ್ಪ ಹದಿ

ಯುಸಿರಾಜ ಅಹಮದ ಸೊರಬ • ಸಿ. ಹಾಲಸ್ವಾಮಿ

•

ಚಂಪಾ

SANKRAMANA PRAKASHA
2nd Main, Jyothi Layout, Jaragenal
Ward 186, J. P. Nagar Post, Bangalore–5
©080-2632 33 44, Mob.: 94490-693